## ಮಂಗಳವಾರ, ೧೭ನೇ ಡಿಸೆಂಬರ್, ೧೯೪೬

ಭಾರತದ ಸಂವಿಧಾನ ರಚನಾಸಭೆಯು ನವದೆಹಲಿಯ ಸಂವಿಧಾನ ಸಭಾಂಗಣದಲ್ಲಿ ಗೌರವಾನ್ವಿತ ಡಾ. ರಾಜೇಂದ್ರ ಪ್ರಸಾದ್ ಅವರ ಅಧ್ಯಕ್ಷತೆಯಲ್ಲಿ ಬೆಳಗ್ಗೆ ೧೧ ಗಂಟೆಗೆ ಸಭೆ ಸೇರಿತು.

ಕೆಳಕಂಡ ಸದಸ್ಯರು ತಮ್ಮ ಪರಿಚಯ ಪತ್ರವನ್ನು ಸಲ್ಲಿಸಿದರು ಮತ್ತು ದಾಖಲಾತಿ ಪುಸ್ತಕದಲ್ಲಿ ಸಹಿಮಾಡಿದರು:

ಗೌರವಾನ್ವಿತ ಶ್ರೀಮತಿ ವಿಜಯಲಕ್ಷ್ಮಿ ಪಂಡಿತ್.

**ಮಾನ್ಯ ಅಧ್ಯಕ್ಷರು :** ಅಮೆರಿಕದ ಅಂತಾರಾಷ್ಟ್ರಿಯ ಸಮಾವೇಶದಲ್ಲಿ ಮಹಾನ್ ಕಾರ್ಯವನ್ನು ಸಾಧಿಸಲು ಸಮರ್ಥರಾಗಿ, ಮರಳಿ ಬಂದಿರುವ ಶ್ರೀಮತಿ ವಿಜಯಲಕ್ಷ್ಮೀ ಪಂಡಿತ್ ಅವರನ್ನು ನಾನು ಸಂತೋಷದಿಂದ ಸ್ವಾಗತಿಸುತ್ತೇನೆ. (ಹರ್ಷೋದ್ಗಾರಗಳು). ಹರ್ಷೋದ್ಗಾರಗಳಿಂದ ಸುವ್ಯಕ್ತವಾಗುವಂತೆ ಇಡೀ ಸದನವೇ ನನ್ನೊಡನೆ ಸೇರಿ ಅವರನ್ನು ಸ್ವಾಗತಿಸುತ್ತಿದೆ ಎನ್ನುವುದು ನಿಸ್ಸಂಶಯ (ಚಪ್ಪಾಳೆ).

ದಾಖಲಾತಿ ಪುಸ್ತಕದಲ್ಲಿ ಸಹಿಮಾಡಲು ಬಯಸುವ ಬೇರೆ ಯಾರಾದರೂ ಸದಸ್ಯರು ಇದ್ದಾರೆಯೇ?

(ಯಾರೂ ಇಲ್ಲ)

### ನಿರ್ಣಯ ಆರ್. ಇ ಗುರಿಗಳು ಮತ್ತು ಉದ್ದೇಶಗಳು (ಮುಂದುವರಿದದ್ದು)

**ಮಾನ್ಯ ಅಧ್ಯಕ್ಷರು :** ನಿರ್ಣಯ ಮತ್ತು ತಿದ್ದುಪಡಿಗಳನ್ನು ಕುರಿತ ಚರ್ಚೆಯನ್ನು ನಾವು ಮುಂದುವರಿಸೋಣ. ಮಾತನಾಡಲು ಬಯಸುತ್ತಿರುವ ಸದಸ್ಯರ ಒಂದು ದೊಡ್ಡ ಪಟ್ಟಿಯೇ ನನ್ನ ಬಳಿ ಇದೆ. ಈ ಪಟ್ಟಿಯಲ್ಲಿ ೫೦ಕ್ಕಿಂತ ಹೆಚ್ಚು ಹೆಸರುಗಳಿವೆ. ಅಧಿಸೂಚನೆ ಕೊಟ್ಟಿರುವ ಎಲ್ಲ ೫೦ ಭಾಷಣಕಾರರಿಗೂ ಎಡೆಮಾಡಿಕೊಡಲು ನನಗೆ ಹೇಗೆ ಸಾಧ್ಯವಾಗುತ್ತದೆಯೋ ಗೊತ್ತಿಲ್ಲ. ಮಾತನಾಡಲು ಬಯಸುವವರು ಇನ್ನೂ ಕೆಲವರು ಇರಬಹುದು. ಆದ್ದರಿಂದ ನನ್ನದೇ ಆಯ್ಕೆಯ ಪ್ರಕಾರ ಅವರನ್ನು ನಾನು ಆರಿಸುತ್ತೇನೆ. ಒಂದಲ್ಲ ಒಂದು ಎಡೆಯಲ್ಲಿ ಅದು ದೂರಿಗೆ ಕಾರಣವಾಗುವುದಿಲ್ಲವೆ ಎಂದು ನನಗೆ ಖಚಿತವಿಲ್ಲ. ಆದರೆ ಅದೊಂದೇ ಮಾರ್ಗ ಎಂದು ನಾನು ಭಾವಿಸುತ್ತೇನೆ. ಸದಸ್ಯರು ಸಾಧ್ಯವಾದಷ್ಟೂ ಸಂಕ್ಷಿಪ್ತವಾಗಿ ಮಾತನಾಡಬೇಕೆಂದು ನಾನು ಸೂಚಿಸಲು ಬಯಸುತ್ತೇನೆ. ಏಕೆಂದರೆ ಏನೇ ಆಗಲಿ ಈ ಕೆಲಸವನ್ನು ಆದ್ಯಂತವಾಗಿ ಪರಿಶೀಲಿಸಿ ಈ ನಿರ್ಣಯವನ್ನು ಮುಕ್ತಾಯ ಮಾಡಬೇಕು ಮತ್ತು ಇತರ ಕಾರ್ಯಕಲಾಪವನ್ನು ಕೈಗೆತ್ತಿಕೊಳ್ಳಬೇಕು. ಈಗ ನಾವು ಮಾಡುತ್ತಿರುವಂತೆ ದಿನಕ್ಕೆ ಎರಡು ಗಂಟೆಗಳ ಕಾಲ ನಾವು ಕೂತರೆ, ಪ್ರತಿಯೊಬ್ಬ ಭಾಷಣಕಾರರೂ ೧೫ ನಿಮಿಷ ತೆಗೆದುಕೊಂಡರೆ ಆರು ದಿನಗಳು ಹಿಡಿಯುತ್ತದೆ ಮತ್ತು ನಾವು ಬೆಳಗ್ಗೆ ಮತ್ತು ಸಂಜೆ ಎರಡು ಹೊತ್ತೂ ಕೂತರೆ ಮೂರು ದಿನಗಳಾಗುತ್ತದೆ. ಈ ನಿರ್ಣಯದ ಮೇಲೆ ಅಷ್ಟೊಂದು ಸಮಯವನ್ನು ಹವಣಿಸುವುದು ನಮಗೆ ಸಾಧ್ಯ ಎಂದು ನಾನು ಭಾವಿಸುವುದಿಲ್ಲ. ಆದ್ದರಿಂದ ನಾನು ಯಾವುದೇ ಸಮಯದ ಮಿತಿಯನ್ನು ನಿಗದಿಪಡಿಸದೆ ಭಾಷಣಕಾರರು ಸಾಧ್ಯವಾದಷ್ಟೂ ಸಂಕ್ಷೇಪವಾಗಿ ಮಾತನಾಡಬೇಕೆಂದು ಕೋರುತ್ತೇನೆ. ಹತ್ತು ನಿಮಿಷವನ್ನು ಸಮಂಜಸವಾದ ಮಿತಿ ಎಂದು ತೆಗೆದುಕೊಳ್ಳಬಹುದು. ನಾನು ಶ್ರೀ ಮಸಾನಿ ಅವರನ್ನು ಆಹ್ವಾನಿಸುತ್ತೇನೆ.

**ಶ್ರೀ ಎಮ್. ಆರ್. ಮಸಾನಿ** (ಬಾಂಬೆ : ಸಾಮಾನ್ಯ) : ಮಾನ್ಯ ಅಧ್ಯಕ್ಷರೆ, ಈ ನಿರ್ಣಯವನ್ನು ಕುರಿತು ಮಾತನಾಡಲು ಎದ್ದು ನಿಲ್ಲುತ್ತಾ ಪ್ರಾರಂಭದಲ್ಲಿಯೇ ನಾನು ಒಂದು ಸಂಗತಿಯನ್ನು ಸ್ಪಷ್ಟಪಡಿಸಲು

ಬಯಸುತ್ತೇನೆ. ದುರದೃಷ್ಟವಶಾತ್ ಇಂದು ನಮ್ಮ ದೇಶವು ಅನೇಕ ಸಮುದಾಯಗಳಾಗಿ ಛಿದ್ರವಾಗಿದ್ದು ಅದರಲ್ಲಿ ಒಂದು ಸಮುದಾಯದ ಸದಸ್ಯನಾಗಿ ನಾನು ಮಾತನಾಡುತ್ತಿಲ್ಲ. ಬದಲಿಗೆ ಮೊಟ್ಟಮೊದಲು ಮತ್ತು ಕಟ್ಟಕಡೆಯದಾಗಿ ಒಬ್ಬ ಭಾರತೀಯನಾಗಿ ಮಾತನಾಡುತ್ತಿದ್ದೇನೆ. (ಕೇಳಿ). ನಮ್ಮ ರಾಷ್ಟ್ರೀಯ ಅಲ್ಪಸಂಖ್ಯಾತರಲ್ಲಿ ಅತ್ಯಂತ ಚಿಕ್ಕ ಅಥವಾ ಪುಟಾಣಿಯಾದ ಗುಂಪಿಗೆ ನನ್ನ ಮೂಲಕ್ಕಾಗಿ ನಾನು ಋಣಿಯಾಗಿದ್ದರೂ ಹಾಗೆ ಮಾಡುತ್ತೇನೆ. ಬಾಬು ಪುರುಷೋತ್ತಮ ದಾಸ್ ಟಂಡನ್ ಅವರು ಈ ನಿರ್ಣಯದ ಅನುಮೋದಕರಾಗಿ ಮಾತನಾಡುತ್ತಾ ಪ್ರಸ್ತಾವಿಸಿದ ಆ ಸ್ವಾಗತ, ಆ ಆತಿಥ್ಯ ಮತ್ತು ಆ ರಕ್ಷಣೆಯನ್ನು ಪಡೆದ ಜನಸಮುದಾಯಗಳಲ್ಲಿ ಅದು ಒಂದಾಗಿತ್ತು. ಮಾನ್ಯರೆ, ನಮ್ಮ ದೇಶದಲ್ಲಿ ಅಸ್ತಿತ್ವದಲ್ಲಿರುವ ಈ ಅಲ್ಪಸಂಖ್ಯಾತರು ಬಹುಸಂಖ್ಯಾತರೊಡನೆ ಸೇರಿ ಒಂದು ರಾಷ್ಟ್ರವಾಗುವುದರ ಕಡೆಗೆ ತಮ್ಮ ಪ್ರಗತಿಯನ್ನು ಮುಂದುವರಿಸುತ್ತಾರೆ ಎಂದು ನಾನು ನಿರೀಕ್ಷಿಸುತ್ತೇನೆ. ಶತಶತಮಾನಗಳಿಂದ ತನ್ನೆಡೆಗೆ ಬಂದ ಹೊಸಗುಂಪುಗಳನ್ನು ಲೀನಗೊಳಿಸಿಕೊಳ್ಳುವ ಮೂಲಕ ಈ ಪುರಾತನ ದೇಶದಲ್ಲಿ ಈ ಪ್ರಕ್ರಿಯೆಯು ನಡೆಯುತ್ತಲೇ ಇತ್ತು. ಆದರೆ ಕಳೆದ ಕೆಲವು ಶತಮಾನಗಳಲ್ಲಿ ಜಾತಿಯ ಅತಿ ನಿಯಮ ನಿಷ್ಠೆ ಮತ್ತು ಪ್ರತ್ಯೇಕತಾ ಮನೋಭಾವದ ಮೂಲಕ ಈ ಪ್ರಕ್ರಿಯೆಯು ಕುಂಠಿತವಾದಂತೆ ತೋರುತ್ತದೆ. ಈ ಹಂತದಲ್ಲಿ ನಾನು ಗಮನಿಸುವ ಸಂಗತಿ ಏನೆಂದರೆ ರಾಷ್ಟ್ರವೆಂಬ ಪರಿಕಲ್ಪನೆಯು ನಿರಂತರವಾದ ಅಥವಾ ಶಾಶ್ವತವಾದ ಅಲ್ಪಸಂಖ್ಯಾತರ ಅಸ್ತಿತ್ವಕ್ಕೆ ಅನುಮತಿ ನೀಡುವುದಿಲ್ಲ. ಒಂದೋ ರಾಷ್ಟ್ರವು ಈ ಅಲ್ಪಸಂಖ್ಯಾತರನ್ನು ಲೀನಗೊಳಿಸಿಕೊಳ್ಳುತ್ತದೆ ಅಥವಾ ಕಾಲಾಂತರದಲ್ಲಿ ಅದು ವಿಸರ್ಜನೆಗೊಳ್ಳಬೇಕು. ಆದ್ದರಿಂದ ಅಲ್ಪಸಂಖ್ಯಾತರಿಗೆ ಸಾಕಷ್ಟು ಸುರಕ್ಷತೆಯ ಭರವಸೆಯನ್ನು ನೀಡುವ ಈ ನಿರ್ಣಯದಲ್ಲಿರುವ ಖಂಡವನ್ನು ಸ್ವಾಗತಿಸುತ್ತಾ ನಾನು ಹೇಳುವುದೇನೆಂದರೆ ಈ ಕಾನೂನಾತ್ಮಕವಾದ ಮತ್ತು ಸಂವಿಧಾನಾತ್ಮಕವಾದ ಸುರಕ್ಷತೆಗಳನ್ನು ಹೊಂದಿರುವುದೇನೋ ಉತ್ತಮ ಸಂಗತಿ, ಆದರೆ ಎರಡೂ ಪಕ್ಷಗಳು ಹತ್ತಿರ ಬರಲು ಮತ್ತು ಸಂಘಟಿತವಾದ, ಒಂದು ಸಾಮರಸ್ಯದ ರಾಷ್ಟ್ರವಾಗಲು ಪ್ರಯತ್ನ ಮಾಡದಿದ್ದರೆ ಅಗಾಧವಾದ ದಬ್ಬಾಳಿಕೆಯ ಬಹುಸಂಖ್ಯಾತರಿಂದ ಅಂತಿಮವಾಗಿ ಯಾವ ಕಾನೂನಾತ್ಮಕ ಸುರಕ್ಷತೆಯೂ ಕಾಪಾಡಲಾರದು. ಅಂತಹ ಪ್ರಕ್ರಿಯೆಯನ್ನು ಅಮೆರಿಕದ ಸಂಯುಕ್ತ ಸಂಸ್ಥಾನಗಳು ನಮಗೆ ತೋರಿಸಿವೆ. ಅಲ್ಲಿ ಒಂದು ದುರದೃಷ್ಟಕರ ವಿನಾಯಿತಿಯನ್ನು ಬಿಟ್ಟರೆ, ವಿವಿಧ ಜನಾಂಗಗಳಿಗೆ ಸೇರಿದ ಜನರು ಒಂದು ರಾಷ್ಟ್ರದಲ್ಲಿ ಲೀನವಾಗಿದ್ದಾರೆ.

ಈ ನಿರ್ಣಯದ ಮಂಡನೆಕಾರರು ಈ ಸದನದಲ್ಲಿ ಅದನ್ನು ಮಂಡಿಸುವಾಗ ಮಾಡಿದ ಉದಾತ್ತವಾದ ಭಾಷಣದಿಂದ ಗಾಢವಾಗಿ ಮನಕರಗದವರು ಮತ್ತು ಉತ್ಕರ್ಷಕ್ಕೇರಿದ ಭಾವನೆಯನ್ನು ಅನುಭವಿಸದವರು ದಿಟವಾಗಿಯೂ ಕೆಲವೇ ಮಂದಿ ಇರಬೇಕು. ಅವರು ಭವಿಷ್ಯದಾಳಕ್ಕೆ ಹಣಿಕಿ ನೋಡಿದರು. ಮತ್ತು ಭಾರತದ ಜನರ ಭವಿಷ್ಯ ಯಾವ ರೂಪವನ್ನು ತೆಗೆದುಕೊಳ್ಳುತ್ತದೆ ಎಂದು ನೋಡಲು ಪ್ರಯತ್ನಿಸಿದರು. ಅವರ ಮನವಿಗೆ ಪ್ರತಿಸ್ಪಂದನವಾಗಿ ನಾವು ಈ ನಿರ್ಣಯವನ್ನು ಒಂದು ಮೂಲ ನಿಯಮವಾಗಿ ಪರಿಗಣಿಸಬೇಕು ಮತ್ತು ಕಾನೂನಾತ್ಮಕ ಭಿನ್ನಾಭಿಪ್ರಾಯಗಳನ್ನು ನಿವಾರಿಸಬೇಕು ಹಾಗೂ ಅದರ ಪರಿಭಾಷೆಯನ್ನು ಕುರಿತ ಕ್ಷುಲ್ಲಕವಾದ ಆಕ್ಷೇಪಗಳನ್ನು ಕೈಬಿಡಬೇಕು. ಮಾನ್ಯರೆ, ತಾವು ನನಗೆ ನೀಡಿದ ಕೆಲವೇ ನಿಮಿಷಗಳ ಅವಕಾಶದಲ್ಲಿ ಈ ನಿರ್ಣಯದ ಸಾಮಾಜಿಕ ಅಥವಾ ದೀರ್ಘಕಾಲೀನ ಅಂಶದ ಕಡೆಗೆ ಈ ಸದನದ ಗಮನವನ್ನು ಸೆಳೆಯಲು ಬಯಸುತ್ತೇನೆ, ಮತ್ತು ಈ ನಿರ್ಣಯವು ಈ ದೇಶದ ಜನರಿಗೆ ಯಾವ ಬಗೆಯ ಸಮಾಜ ಅಥವಾ ಸರ್ಕಾರವನ್ನು, ಯಾವ ಬಗೆಯ ಜೀವನವನ್ನು ಮುಂದಿಡುತ್ತಿದೆ ಎಂದು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತೇನೆ. ಮಾನ್ಯರೆ, ಸದ್ಯದ ಭಿನ್ನಾಭಿಪ್ರಾಯಗಳನ್ನು ಬದಿಗಿರಿಸಿದರೆ, ಈ ದೇಶದ ಶ್ರೀ ಸಾಮಾನ್ಯರು ನಿಕಟವಾಗಿ ಗಮನವಿಟ್ಟು ನೋಡುವುದು ಈ ನಿರ್ಣಯದ ಆ ಭಾಗವನ್ನೇ.

ಮಾನ್ಯರೆ, ನಾನು ನಿರ್ಣಯದ ಈ ಭಾಗವನ್ನು ಒಬ್ಬ ಪ್ರಜಾಸತ್ತಾತ್ಮಕ ಸಮಾಜವಾದಿಯಾಗಿ ಸಮೀಪಿಸುತ್ತೇನೆ. ಪ್ರಜಾಪ್ರಭುತ್ವವನ್ನು ರಾಜಕೀಯದಿಂದ ಆರ್ಥಿಕ ಮತ್ತು ಸಾಮಾಜಿಕ ವಲಯಗಳಿಗೆ

ವಿಸ್ತರಿಸಬೇಕಾದ ಅಗತ್ಯವಿದೆ ಎಂದು ಭಾವಿಸುವ ಒಬ್ಬ ಸಮಾಜವಾದಿ ನಾನು. ಸಮಾಜವಾದವು ಈ ಅರ್ಥವನ್ನು ನೀಡದಿದ್ದರೆ ಅದಕ್ಕೆ ಯಾವ ಅರ್ಥವೂ ಇಲ್ಲ ಎಂದೇ ಹೇಳಬಹುದು. ಈ ನಿರ್ಣಯದ ಪೀಠಿಕೆಯಲ್ಲಿ 'ಪ್ರಜಾಪ್ರಭುತ್ವ' ಅಥವಾ 'ಸಮಾಜವಾದಿ' ಎಂಬ ಶಬ್ದಗಳಿಲ್ಲದಿದ್ದರೂ ಇದನ್ನು ನಾನು ಸ್ವಾಗತಿಸುತ್ತೇನೆ. ಪ್ರಾಯಃ ಈ ಶಬ್ದಗಳ ಬಳಕೆಯನ್ನು ಉದ್ದೇಶ ಪೂರ್ವಕವಾಗಿ ಕೈಬಿಟ್ಟಿರುವಂತೆ ತೋರುತ್ತಿದೆ. ಏಕೆಂದರೆ ಮೀರತ್ ಸಮ್ಮೇಳನದಲ್ಲಿ ಇಲ್ಲಿರುವ ನಮ್ಮಲ್ಲೊಬ್ಬರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಸಮಾಜವಾದ ಅಥವಾ ಪ್ರಜಾಪ್ರಭುತ್ವ ಅಂತಹ ಶಬ್ದಗಳು ಪಾಪಗಳ ರಾಶಿಯನ್ನೇ ವ್ಯಾಪಿಸುವ ರೀತಿಯಲ್ಲಿ ಮುಂದಿಟ್ಟಿದ್ದರು. ಶಬ್ದಗಳ ಮುಸುಕು ಅನೇಕ ವೇಳೆ ವಾಸ್ತವತೆಗಳನ್ನೇ ಆಚ್ಛಾದಿಸಬಲ್ಲದು. ಫ್ರೆಂಚ್ ಕ್ರಾಂತಿಯನ್ನು ಭ್ರಾತೃತ್ವದ ಹೆಸರಿನಲ್ಲಿ ಮಾಡಲಾಯಿತು ಎಂದು ನಾವು ಬಲ್ಲೆವು. ಆ ಕ್ರಾಂತಿಯ ಕೊನೆಯಲ್ಲಿ ಒಬ್ಬ ಸಿನಿಕ (ದೋಷದರ್ಶಿ) ಹೀಗೆ ಟೀಕೆ ಮಾಡಿದ:

> "ಭ್ರಾತೃತ್ವದ ಹೆಸರಿನಲ್ಲಿ ಜನರು ಏನು ಮಾಡಿದರು ಎಂದು ನಾನು ನೋಡಿದಾಗ, ನನಗೊಬ್ಬ ಸೋದರ ಇದ್ದಿದ್ದರೆ ಅವನನ್ನು ದಾಯಾದಿ ಎಂದು ಕರೆಯಲು ನಾನು ನಿರ್ಧರಿಸಿದೆ!"

ಬೇರೆ ಕ್ರಾಂತಿಗಳ ವಿಷಯದಲ್ಲೂ ಅದು ಸತ್ಯ ಎನ್ನುವುದು ನನ್ನ ಆತಂಕ.

ಸ್ವಾಮಿ, ಒಬ್ಬ ಸಮಾಜವಾದಿಯಾಗಿ ನಿರ್ಣಯದ ಈ ಅಂಶವನ್ನು ನಾನು ಸ್ವಾಗತಿಸುತ್ತೇನೆ. ಏಕೆಂದರೆ ಮಂಡನೆಯಕಾರರು ಸರಿಯಾಗಿಯೇ ತೋರಿಸಿರುವಂತೆ ಗುರುತುಪಟ್ಟಿ ಇಲ್ಲದಿದ್ದರೂ ಆರ್ಥಿಕ ಪ್ರಜಾಪ್ರಭುತ್ವದ ತಿರುಳು ಅದರಲ್ಲಿದೆ. ನನ್ನ ದೃಷ್ಟಿಯಲ್ಲಿ ಈ ನಿರ್ಣಯವು ಪ್ರಸ್ತುತ ಸಾಮಾಜಿಕ ಸಂರಚನೆಯನ್ನು ಸ್ಪಷ್ಟವಾಗಿ ತಿರಸ್ಕರಿಸುತ್ತದೆ. ಅದು ಸಾಮಾಜಿಕ ಯಥಾಸ್ಥಿತಿಯನ್ನು ತಿರಸ್ಕರಿಸುತ್ತದೆ. ೫ನೇ ಖಂಡ ಉಲ್ಲೇಖಿಸುವ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯಶೀಲ ವರ್ತನೆಗೆ ಬೇರೆ ಯಾವ ಅರ್ಥವೂ ಇರಲು ಸಾಧ್ಯವಿಲ್ಲ. ನಮ್ಮ ಸಮಾಜದ ಪ್ರಸ್ತುತ ಸ್ಥಿತಿಯು ನ್ಯಾಯಶೀಲ ವರ್ತನೆಯ ಮೇಲೆ ಆಧರಿಸಿದೆ ಎಂದು ಇಲ್ಲಿರುವ ಯಾರಾದರೂ ವಾದ ಮಾಡುತ್ತಾರೆ ಎಂದು ನಾನು ಭಾವಿಸುವುದಿಲ್ಲ. ಇಂದು ನಮ್ಮ ರಾಷ್ಟ್ರೀಯ ವರಮಾನವನ್ನು ಮೂರು ಸಮಾನ ಭಾಗಗಳಾಗಿ ವಿಭಾಗಿಸಿದರೆ ಪ್ರತಿ ನೂರು ಜನ ಭಾರತೀಯರಲ್ಲಿ ಐದು ಜನ ನಮ್ಮ ರಾಷ್ಟ್ರೀಯ ವರಮಾನದ ಮೂರನೆಯ ಒಂದು ಭಾಗವನ್ನು ಪಡೆಯುತ್ತಾರೆ. ಇನ್ನು ೩೩ ಜನ ಎರಡನೆಯ ಮೂರನೆಯ ಒಂದು ಭಾಗವನ್ನು ಪಡೆಯುತ್ತಾರೆ, ಉಳಿದ ಭಾಗವನ್ನು ದೊಡ್ಡ ಸಮುದಾಯದ ೬೨ ಜನ ಪಡೆಯುತ್ತಾರೆ. ಅದು ಖಂಡಿತವಾಗಿಯೂ ಸಾಮಾಜಿಕ ಅಥವಾ ಆರ್ಥಿಕ ನ್ಯಾಯವಲ್ಲ. ಆದ್ದರಿಂದ ನಾನು ಅರ್ಥಮಾಡಿಕೊಂಡ ಪ್ರಕಾರ ಈ ನಿರ್ಣಯವು ನಮ್ಮ ದೇಶದಲ್ಲಿ ಇರುವ ವ್ಯಾಪಕವಾದ ಮತ್ತು ಕಣ್ಣುಕುಕ್ಕುವಂಥ ಅಸಮಾನತೆಗಳನ್ನು ಸಹಿಸುವುದಿಲ್ಲ. ಮಾನವನ ಪರಿಶ್ರಮವನ್ನು ಬೇರೆ ಯಾರೋ ಶೋಷಣೆ ಮಾಡುವುದನ್ನು ಅದು ಸಹಿಸುವುದಿಲ್ಲ. ಸಮಸ್ತರ ಹಿತಕ್ಕಾಗಿ ಶ್ರಮಿಸುವ ಪ್ರತಿಯೊಬ್ಬನಿಗೂ ತನ್ನ ಶ್ರಮದ ಫಲದಲ್ಲಿ ನ್ಯಾಯಯುತವಾದ ಪಾಲು ದೊರೆಯುತ್ತದೆ ಎನ್ನುವುದು ಖಂಡಿತವಾಗಿಯೂ ಅದರ ಅರ್ಥ. ಈ ದೇಶದ ಜನರು ಯಾವುದೇ ಸಂವಿಧಾನವು ನೀಡಬಲ್ಲ ರೀತಿಯಲ್ಲಿ ಸಾಮಾಜಿಕ ಭದ್ರತೆಯನ್ನು ಕೂಡ ಪಡೆಯುತ್ತಾರೆ ಎಂದೂ ಅದರ ಅರ್ಥ. ಅಂದರೆ ದುಡಿಯುವ ಹಕ್ಕು ಅಥವಾ ಸಮುದಾಯದಿಂದ ಪೋಷಣೆ. ನಿರ್ಣಯವು ಅವಕಾಶದಲ್ಲಿನ ಸಮಾನತೆಯನ್ನು ಕೂಡ ಒದಗಿಸುತ್ತದೆ. ಮಾನ್ಯರೆ, ಅವಕಾಶದ ಸಮಾನತೆಯು ಶಿಕ್ಷಣದಲ್ಲಿ ಸಮಾನ ಸೌಕರ್ಯಗಳು ಮತ್ತು ನಮ್ಮಲ್ಲಿ ಪ್ರತಿಯೊಬ್ಬರಲ್ಲೂ ಸುಪ್ತವಾಗಿರುವ ಪ್ರತಿಭೆಯ ಅಭಿವೃದ್ಧಿಯನ್ನು ಮೊದಲೇ ಭಾವಿಸಿಕೊಳ್ಳುತ್ತದೆ. ಇಂದು ನಮ್ಮ ಶ್ರೀಸಾಮಾನ್ಯರಲ್ಲಿ ಸುಪ್ತ ಪ್ರತಿಭೆಯ ನಿಧಿಯೇ ಅಡಗಿದೆ. ಅದು ಪ್ರಕಟವಾಗಿ ರಾಷ್ಟ್ರದ ಹಿತಕ್ಕೆ ಕೊಡುಗೆ ನೀಡಲು ಅವಕಾಶವಿಲ್ಲವಾಗಿದೆ. ಅವಕಾಶದ ಸಮಾನತೆಯು ಭಾವಿಸಿಕೊಳ್ಳುವುದೇನೆಂದರೆ ಈ ದೇಶದಲ್ಲಿ ಪ್ರತಿಯೊಂದು ಮಗುವೂ, ಪ್ರತಿಯೊಬ್ಬ ಬಾಲಕ ಬಾಲಕಿಯೂ ಸಾಮಾನ್ಯ ಹಿತಕ್ಕಾಗಿ ಕೊಡುಗೆ ನೀಡುವುದಕ್ಕಾಗಿ ಆ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳಲು

ಸಮಾನವಾದ ಅವಕಾಶವನ್ನು ಪಡೆಯುತ್ತಾರೆ.

ಮಾನ್ಯರೆ, ಇದು ಈ ನಿರ್ಣಯದ ಸಮಾಜವಾದಿ ಅಂಶ. ಅದು ಸಮಾಜವಾದಕ್ಕೆ ಒದಗಿಸುವುದಿಲ್ಲ. ಅಂತಹುದನ್ನು ಒದಗಿಸುವುದು ತಪ್ಪಾಗುತ್ತದೆ. ಏಕೆಂದರೆ ದೇಶದಲ್ಲಿ ದೂರಗಾಮಿಯಾದ ಆರ್ಥಿಕ ಬದಲಾವಣೆಗಳನ್ನು ಹುಡುಕಿಕೊಂಡು ಹೋಗಲು ಈ ಸದನಕ್ಕೆ ಅಧಿಕೃತ ಆದೇಶವೇನೂ ಇಲ್ಲ. ಜನಾದೇಶದೊಡನೆ ಅಸ್ತಿತ್ವಕ್ಕೆ ಬಂದು ಸೂಕ್ತವಾಗಿ ರಚನೆಯಾಗುವ ಸಂಪತ್ತು ಮಾತ್ರ ಈ ಬದಲಾವಣೆಗಳನ್ನು ತರಬಲ್ಲದು. ಇಲ್ಲಿ ನಾವು ಒಂದು ಸಭೆಯಾಗಿ ಮಾಡಬಹುದಾದದ್ದೆಲ್ಲ ಏನೆಂದರೆ ಮಾಡಲೇಬೇಕಾದ ಅಗತ್ಯವಿರುವ ಆ ದೂರಗಾಮಿಯಾದ ಬದಲಾವಣೆಗಳಿಗೆ ಅವಕಾಶ ನೀಡುವಂತಹ ಒಂದು ಸಂವಿಧಾನವನ್ನು ರಚಿಸುವುದು. ಮಾನ್ಯರೆ, ನಾನು ಅರಿಕೆ ಮಾಡಿಕೊಳ್ಳುವುದೇನೆಂದರೆ ನಮ್ಮೊಳಗಿರುವ ಅತ್ಯಂತ ಉತ್ಸಾಹಿ ಸಮಾಜವಾದಿಯನ್ನು ತೃಪ್ತಿಪಡಿಸಲು ಈ ನಿರ್ಣಯವು ತನಗೆ ಸಾಧ್ಯವಾದಷ್ಟು ದೂರ ಸಾಗುತ್ತದೆ.

ಮಾನ್ಯರೆ, ನಾನು ಆಗಲೇ ಹೇಳಿದಂತೆ, ನಾನು ಇದನ್ನು ಒಬ್ಬ ಪ್ರಜಾಸತ್ತಾತ್ಮಕ ಸಮಾಜವಾದಿಯಾಗಿ ಸಮೀಪಿಸುತ್ತೇನೆ. ಸಮಾಜವಾದವು ಇಲ್ಲಿದೆಯೆಂದರೆ ಪ್ರಜಾಪ್ರಭುತ್ವವೂ ಅಥವಾ ಪ್ರಜಾಪ್ರಭುತ್ವದ ತಿರುಳೂ ಈ ನಿರ್ಣಯದಲ್ಲಿ ಸೇರಿಕೊಂಡಿದೆ. ಗಣರಾಜ್ಯ ಎಂಬ ಶಬ್ದವೂ ಅಲ್ಲಿ ಸಮರ್ಪಕ ಎಂದು ನಾನು ಭಾವಿಸುವುದಿಲ್ಲ. ಸ್ವತಃ ಪಂಡಿತ್ ಜವಾಹರಲಾಲ್ ನೆಹರು ಅವರೇ ಹೇಳಿದಂತೆ ಗಣರಾಜ್ಯವು ಪ್ರಜಾಸತ್ತಾತ್ಮಕವಾಗಿರಬೇಕಾಗಿಲ್ಲ ಎನ್ನುವುದನ್ನು ಕಲ್ಪಿಸಿಕೊಳ್ಳಬಹುದು. ಇಂದು ನಾವು ಜಗತ್ತಿನಾದ್ಯಂತ ಕಣ್ಣುಹಾಯಿಸಿದರೆ ನಾವು ಇದರ ಅನೇಕ ನಿದರ್ಶನಗಳನ್ನು ನೋಡಬಹುದು. ಆದ್ದರಿಂದ ನಾವು ಗಣರಾಜ್ಯವಾಗಬೇಕು ಎಂದು ಹೇಳುವುದಷ್ಟೇ ಅಲ್ಲದೆ ಖಂಡ ೪ ಮತ್ತು ೫ ಹೇಳುವಂತೆ ಅದನ್ನು ಸ್ಪಷ್ಟಮಾಡುವುದೂ ಅಗತ್ಯವಾದುದು. ಅದು ಏನೆಂದರೆ ನಮ್ಮ ಅಭಿಪ್ರಾಯದಲ್ಲಿ ಪ್ರಜಾಪ್ರಭುತ್ವವೆಂದರೆ ಪೊಲೀಸ್ ರಾಜ್ಯವಲ್ಲ, ಅಂತಹ ರಾಜ್ಯದಲ್ಲಿ ರಹಸ್ಯ ಪೊಲೀಸರು ವಿಚಾರಣೆ ಇಲ್ಲದೆ ಜನರನ್ನು ದಸ್ತಗಿರಿ ಮಾಡಬಹುದು ಅಥವಾ ಮುಗಿಸಿಬಿಡಬಹುದು. ಒಂದು ಪಕ್ಷವು ಅಧಿಕಾರವನ್ನು ಗ್ರಹಣಮಾಡಿ ವಿರೋಧ ಪಕ್ಷಗಳನ್ನು ನಿಗ್ರಹಿಸಿಟ್ಟು ಅವುಗಳಿಗೆ ಮುಕ್ತವಾಗಿ ಕಾರ್ಯನಿರ್ವಹಿಸಲು ಸ್ವಾತಂತ್ರ್ಯವನ್ನು ಮತ್ತು ಸಮಾನ ಸೌಕರ್ಯಗಳನ್ನು ಕೊಡದೆ ಇರಿಸುವ ಸರ್ವಾಧಿಕಾರದ ರಾಜ್ಯ ಎಂದೂ ಅರ್ಥವಲ್ಲ, ಬಿಡಿವ್ಯಕ್ತಿಯನ್ನು ಯಂತ್ರಮಾನವನನ್ನಾಗಿ ಮಾಡುವ ಸಮಾಜ ಅಥವಾ ರಾಜ್ಯ ಎಂದೂ ಅದರ ಅರ್ಥವಲ್ಲ ಅಥವಾ ಬಿಡಿವ್ಯಕ್ತಿಯನ್ನು "ರಾಜ್ಯವೆಂಬ ಒಂದು ದೊಡ್ಡ ಯಂತ್ರದ ಒಂದು ಚಿಕ್ಕ ತಿರುಪನ್ನಾಗಿ" ಮಾಡುವುದೂ ಅಲ್ಲ. ಈ ನಿರ್ಣಯವು ಪ್ರಜಾಪ್ರಭುತ್ವದ ಮೇಲೆ ಆಧಾರಿತವಾಗಿದೆ ಎಂದು ಪಂಡಿತ್ ಜವಾಹರಲಾಲ್ ನೆಹರು ಅವರು ತೋರಿಸಿದ್ದಾರೆ ಮತ್ತು ನಮ್ಮ ಭೂತಕಾಲವೆಲ್ಲ ಸಾಕ್ಷೀಭೂತವಾಗಿರುವುದು ನಾವು ಪ್ರಜಾಪ್ರಭುತ್ವದ ಪರವಾಗಿದ್ದೇವೆಯೇ ವಿನಾ ಅದಕ್ಕಿಂತ ಕಡಿಮೆ ಯಾವುದೂ ಅಲ್ಲ ಎನ್ನುವುದಕ್ಕೆ. ನಮ್ಮ ಪ್ರಜಾಸತ್ತಾತ್ಮಕ ನಂಬಿಕೆಗೆ ನಮ್ಮ ಭೂತಕಾಲವಷ್ಟೇ ಖಾತರಿಯನ್ನು ನೀಡುತ್ತಿಲ್ಲ. ನಮ್ಮ ವರ್ತಮಾನಕಾಲವೂ ಕೂಡ.

ನಮ್ಮ ರಾಷ್ಟ್ರೀಯ ಜೀವನವು ತನ್ನಲ್ಲಿ ವಿವಿಧ ಪ್ರವೃತ್ತಿಗಳನ್ನು ಹೊಂದಿದೆ. ಆದರೆ ಬಹುತೇಕ ಸರ್ವಾನುಮತದಿಂದ ನಾವೆಲ್ಲರೂ ವ್ಯಕ್ತಿಯ ಸ್ವಾತಂತ್ರ್ಯದ ಪರವಾಗಿದ್ದೇವೆ ಮತ್ತು ಒಂದು ಪ್ರಜಾಸತ್ತಾತ್ಮಕ ರಾಷ್ಟ್ರದ ಪರವಾಗಿದ್ದೇವೆ. ನಮ್ಮ ನಡುವೆ ತೀರ ವಿಭಿನ್ನವಾದ ವಿಚಾರಪಂಥಗಳಿವೆ, ಆದರೆ ನಮ್ಮ ಶ್ರೀ ಸಾಮಾನ್ಯನಿಗೆ ಅಧಿಕಾರವನ್ನು ಹಂಚಬೇಕು ಎಂಬ ವಿಚಾರದಲ್ಲಿ ಬಹುತೇಕ ಏಕಕಂಠದಿಂದ ಒಪ್ಪುತ್ತವೆ. ರಾಜಕೀಯ ಮತ್ತು ಆರ್ಥಿಕ ಅಧಿಕಾರವನ್ನು ಎಷ್ಟು ವ್ಯಾಪಕವಾಗಿ ಹಂಚಬೇಕೆಂದರೆ ಯಾವ ಒಬ್ಬ ಮನುಷ್ಯನಾಗಲಿ ಅಥವಾ ಜನರ ಗುಂಪಾಗಲಿ ಬೇರೆಯವರನ್ನು ಶೋಷಣೆ ಅಥವಾ ದಬ್ಬಾಳಿಕೆ ಮಾಡಬಾರದು. ನಮ್ಮೊಡನೆ ಉಪಸ್ಥಿತರಿಲ್ಲದ ಒಬ್ಬರ ಪ್ರಮಾಣವನ್ನು ಉದ್ಧರಿಸುತ್ತೇನೆ. ಮಂಡನೆಕಾರರು ಅವರನ್ನು ರಾಷ್ಟ್ರಪಿತ ಎಂದು ಉಲ್ಲೇಖಿಸಿದರು. ನಾನು ಮಹಾತ್ಮ ಗಾಂಧಿಯವರನ್ನು ಉಲ್ಲೇಖಿಸುತ್ತಿದ್ದೇನೆ. (ಹರ್ಷೋದ್ಗಾರಗಳು) ಲೂಯಿ

ಫಿಷರ್ ಅವರ 'ಗಾಂಧಿಯೊಡನೆ ಒಂದು ವಾರ' ಕೃತಿಯಿಂದ ಈ ಮಾತುಗಳನ್ನು ಉದ್ಧರಿಸುತ್ತಿದ್ದೇನೆ.

"ಅಧಿಕಾರ ಕೇಂದ್ರವು ಈಗ ನವದೆಹಲಿಯಲ್ಲಿದೆ ಅಥವಾ ಕೋಲ್ಕತ್ತ ಮತ್ತು ಬಾಂಬೆಯಲ್ಲಿದೆ, ದೊಡ್ಡ ನಗರಗಳಲ್ಲಿದೆ. ಭಾರತದ ಏಳು ಲಕ್ಷ ಹಳ್ಳಿಗಳಲ್ಲಿ ಅದರ ಹಂಚಿಕೆಯಾಗಬೇಕು ಎಂದು ನಾನು ಬಯಸುತ್ತೇನೆ..."

"ಆಗ ಈ ಏಳು ಲಕ್ಷ ಘಟಕಗಳ ನಡುವೆ ಸ್ವಯಂಪ್ರೇರಿತ ಸಹಕಾರ ಏರ್ಪಡುತ್ತದೆ. ಅದು ಸ್ವಯಂಪ್ರೇರಿತವಾದ ಸಹಕಾರ, ನಾಟ್ಸಿ ವಿಧಾನಗಳಿಂದ ಹೇರಲಾದ ಸಹಕಾರವಲ್ಲ. ಸ್ವಯಂಪ್ರೇರಿತ ಸಹಕಾರವು ನಿಜವಾದ ಸ್ವಾತಂತ್ರ್ಯವನ್ನು ಉತ್ಪಾದಿಸುತ್ತದೆ ಮತ್ತು ಸೋವಿಯತ್ ರಷ್ಯಾದಲ್ಲಿರುವ ಹೊಸ ವ್ಯವಸ್ಥೆಗಿಂತ ತೀರ ಶ್ರೇಷ್ಠವಾದ ಹೊಸ ವ್ಯವಸ್ಥೆ ಇದು ಆಗುತ್ತದೆ..."

"ರಷ್ಯಾದಲ್ಲಿ ಕ್ರೌರ್ಯ ಇದೆ ಎಂದು ಕೆಲವರು ಹೇಳುತ್ತಾರೆ. ಆದರೆ ಅದನ್ನು ಅತ್ಯಂತ ಕೆಳಹಂತದವರ ಮೇಲೆ ಮತ್ತು ಅತ್ಯಂತ ಬಡವರ ಮೇಲೆ ಪ್ರಯೋಗಿಸಲಾಗುತ್ತದೆ. ಆ ಕಾರಣದಿಂದ ಅದು ಉತ್ತಮ ಎಂದು ಅವರು ಹೇಳುತ್ತಾರೆ, ನನ್ನ ದೃಷ್ಟಿಯಿಂದ ಅದರಲ್ಲಿನ ಉತ್ತಮಾಂಶ ತೀರ ಅಲ್ಪ."

ತೀರ ವಿಭಿನ್ನವಾದ ಪಂಥದ ಒಬ್ಬರು ಚಿಂತಕರಲ್ಲಿ ಅದರ ಪ್ರತಿಧ್ವನಿಯನ್ನು ಪಡೆಯಲೆಂಬಂತೆ ಸಮಾಜವಾದದ ಇತ್ತೀಚಿನ ಚಿತ್ರದಿಂದ ಒಂದೆರಡು ವಾಕ್ಯಗಳನ್ನು ಉದ್ಧರಿಸುತ್ತೇನೆ. ಆ ಚಿತ್ರವನ್ನು ರಚಿಸಿದವರು ಭಾರತದ ಸಮಾಜವಾದಿ ಪಕ್ಷದ ನಾಯಕರಾದ ಜೈಪ್ರಕಾಶ್ ನಾರಾಯಣ್. ಇಲ್ಲಿನ ನಮ್ಮ ಪರಿಶ್ರಮದಲ್ಲಿ ಅವರು ಭಾಗಿಯಾಗದಿರುವುದಕ್ಕೆ ನಾನು ವಿಷಾದಿಸುತ್ತೇನೆ ಮಾನ್ಯರೆ. ಆದರೆ ಅವರು ಹೇಳುವುದು ಇಷ್ಟು. ಅದು ಬಹುತೇಕ ಗಾಂಧೀಜಿಯವರ ಚಿಂತನೆಯ ಪ್ರತಿಧ್ವನಿಯಂತೆ ಕೇಳಿಸುತ್ತದೆ:

"ರಷ್ಯಾದಲ್ಲಿರುವಂತೆ ಸಮಾಜವಾದಿ ಸರ್ಕಾರವು ಸೊರಗಿಹೋಗುವ ಬದಲು ತನ್ನ ನಾಗರಿಕ ಸಮಸ್ತ ಜೀವನದ ಮೇಲೆ ಬಿಗಿಹಿಡಿತವನ್ನು ಇಟ್ಟುಕೊಂಡು ಸರ್ವಶಕ್ತವಾದ ನಿರಂಕುಶಾಧಿಕಾರವಾಗುವ ಬೆದರಿಕೆಯನ್ನು ಒಡ್ಡುತ್ತಿದೆ. ಇದು ಇಂದು ನಾವು ರಷ್ಯಾದಲ್ಲಿ ನೋಡುತ್ತಿರುವ ಸರ್ವಾಧಿಕಾರ ಪ್ರಭುತ್ವದತ್ತ ಕರೆದೊಯ್ಯುತ್ತದೆ. ಕೈಗಾರಿಕೆಯ ಒಡೆತನ ಮತ್ತು ನಿರ್ವಹಣೆಯನ್ನು ಹಂಚುವ ಮೂಲಕ ಮತ್ತು ಹಳ್ಳಿಯನ್ನು ಪ್ರಜಾಸತ್ತಾತ್ಮಕ ಗ್ರಾಮ ಗಣರಾಜ್ಯವಾಗಿ ಅಭಿವೃದ್ಧಿಪಡಿಸುವ ಮೂಲಕ ಈ ಬಿಗಿ ಹಿಡಿತವನ್ನು ಬಹುಮಟ್ಟಿಗೆ ನಾವು ಛಿದ್ರಗೊಳಿಸಬಹುದು ಮತ್ತು ಸರ್ವಾಧಿಕಾರ ಪ್ರಭುತ್ವವನ್ನು ಕ್ಷೀಣಗೊಳಿಸಬಹುದು..... ಹೀಗೆ ಸಮಾಜವಾದಿ ಭಾರತದ ನನ್ನ ಚಿತ್ರವು ಆರ್ಥಿಕ ಮತ್ತು ರಾಜಕೀಯ ಪ್ರಜಾಪ್ರಭುತ್ವದ ಚಿತ್ರವಾಗಿದೆ. ಈ ಪ್ರಜಾಪ್ರಭುತ್ವದಲ್ಲಿ ಜನರು ಬಂಡವಾಳಶಾಹಿಯ ಗುಲಾಮರೂ ಆಗಿರುವುದಿಲ್ಲ ಅಥವಾ ಒಂದು ಪಕ್ಷದ ಇಲ್ಲವೇ ಸರ್ಕಾರದ ಗುಲಾಮರೂ ಆಗಿರುವುದಿಲ್ಲ. ಮನುಷ್ಯನು ಸ್ವತಂತ್ರನಾಗಿರುತ್ತಾನೆ."

ಮಾನ್ಯರೆ, ವ್ಯಕ್ತಿಯ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವವನ್ನು ಮೊದಲು ನಾಶಮಾಡದಿದ್ದರೆ ಮತ್ತು ಸರ್ವಶಕ್ತವಾದ ಸರ್ಕಾರವು ತನ್ನ ಯೋಜನೆಗಳನ್ನು ಮುಂದೆ ತಳ್ಳದಿದ್ದರೆ ಪ್ರಸ್ತುತ ಅಗತ್ಯವಾಗಿರುವ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಗಳನ್ನು ಮಾಡಲಾಗುವುದಿಲ್ಲ ಎಂದು ವಾದಮಾಡುವುದು ನಮ್ಮ ಕಾಲದ ಒಂದು ವೈಖರಿಯಾಗಿದೆ.

ಈ ನಿರ್ಣಯವು, ಅದನ್ನು ನಾನು ಸರಿಯಾಗಿ ಓದಿಕೊಂಡಿದ್ದರೆ, ಆ ಸಿದ್ಧಾಂತದ ಖಂಡನೆಯಾಗಿದೆ. ಅದು ಪರಿಭಾಷೆಯ ಪೂರ್ಣ ಅರ್ಥದಲ್ಲಿ ದೂರಗಾಮಿಯಾದ ಸಾಮಾಜಿಕ ಬದಲಾವಣೆಗಳು ಮತ್ತು ಸಾಮಾಜಿಕ ನ್ಯಾಯವನ್ನು ಕಲ್ಪಿಸಿಕೊಳ್ಳುತ್ತದೆ. ಆದರೆ ಅದು ರಾಜಕೀಯ ಪ್ರಜಾಪ್ರಭುತ್ವದ ಪ್ರಕ್ರಿಯೆ ಮತ್ತು ಬಿಡಿ ವ್ಯಕ್ತಿಯ ಸ್ವಾತಂತ್ರ್ಯದ ಮೂಲಕ ಆ ಸಾಮಾಜಿಕ ಬದಲಾವಣೆಗಳಿಗಾಗಿ ಕೆಲಸಮಾಡುತ್ತದೆ. ಇದನ್ನು ಮಾಡಲಾಗುವುದಿಲ್ಲ ಎಂದು ಹೇಳುವ ಆ ಅಪಜಯ ಮನೋವೃತ್ತಿಯವರಿಗೆ ಈ ನಿರ್ಣಯವು ಇದನ್ನು ಮಾಡಬಹುದು ಎಂದು ಹೇಳುತ್ತದೆ, ಮತ್ತು ಅದನ್ನು ಮಾಡಲು ನಾವು ಉದ್ದಿಷ್ಟರಾಗಿದ್ದೇವೆ ಮತ್ತು ಕೃತನಿಶ್ಚಯರಾಗಿದ್ದೇವೆ. ನಮ್ಮ ಕಾಲದ ಕೇಂದ್ರ ಸಮಸ್ಯೆಯೆಂದರೆ ಪ್ರಭುತ್ವದ ಸ್ವಾಮ್ಯದಲ್ಲಿ ಜನರು ಇರಬೇಕೆ

ಅಥವಾ ಜನರ ಸ್ವಾಮ್ಯದಲ್ಲಿ ಪ್ರಭುತ್ವವು ಇರಬೇಕೆ ಎನ್ನುವುದು. ಪ್ರಭುತ್ವವು ಜನರಿಗೆ ಸೇರಿದ್ದ ಸಂದರ್ಭದಲ್ಲಿ ಪ್ರಭುತ್ವವು ಕೇವಲ ಒಂದು ಉಪಕರಣವಾಗಿದ್ದು ಜನರಿಗೆ ಅಧೀನವಾಗಿರುತ್ತದೆ ಮತ್ತು ಜನರಿಗೆ ಸೇವೆ ಸಲ್ಲಿಸುತ್ತದೆ. ಜನರು ನಿಜವಾಗಿಯೂ ಹಾತೊರೆಯುವ ಮಟ್ಟಕ್ಕೆ ಅದು ಬಿಡಿವ್ಯಕ್ತಿಯ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳುತ್ತದೆ ಅಷ್ಟೆ. ಪ್ರಭುತ್ವದ ಸ್ವಾಮ್ಯದಲ್ಲಿ ಜನರು ಇದ್ದರೆ, ಅವರು ಒಂದು ದೊಡ್ಡ ಯಂತ್ರದಲ್ಲಿನ ಕೇವಲ ಯಂತ್ರಮಾನವರಾಗಿರುತ್ತಾರೆ. ಸರ್ವಶಕ್ತನಾದ ಸರ್ವಾಧಿಕಾರಿಯ ಅಥವಾ ಸರ್ವಶಕ್ತವಾದ ಪಕ್ಷದ ಖಯಾಲಿಗೆ ಅನುಸಾರವಾಗಿ ಅವರನ್ನು ಅತ್ತ ಇತ್ತ ತಳ್ಳಲಾಗುತ್ತದೆ. ಎಲ್ಲಿ ಜನರು ಅಧಿಕಾರದಲ್ಲಿರುತ್ತಾರೋ, ಎಲ್ಲಿ ಬಿಡಿ ವ್ಯಕ್ತಿಯು ರಂಗಸ್ಥಳದ ಕೇಂದ್ರವನ್ನು ಆಕ್ರಮಿಸುತ್ತಾನೋ ಮತ್ತು ನಮ್ಮ ಸಾಮಾಜಿಕ ಹಿತದ ಗುರಿಯು ಬಿಡಿ ವ್ಯಕ್ತಿಯ ವ್ಯಕ್ತಿತ್ವದ ವಿಕಾಸವಾಗಿರುತ್ತದೆಯೋ ಅಂತಹ ಒಂದು ಸಂವಿಧಾನದ ದಿಕ್ಕಿನಲ್ಲಿ ಈ ನಿರ್ಣಯವು ಬೆರಳು ತೋರುತ್ತಿರುವ ಕಾರಣದಿಂದ ಮಾನ್ಯರೆ, ನಾನು ಈ ನಿರ್ಣಯದ ಈ ಭಾಗಗಳನ್ನು ಈ ಅಂಶವನ್ನು ಸಮರ್ಥಿಸುತ್ತೇನೆ ಎಂದು ಭಾವಿಸುತ್ತೇನೆ ಏಕೆಂದರೆ ಸಂಯುಕ್ತ ಸಂಸ್ಥಾನಗಳ ಸಂವಿಧಾನದ ಪಿತೃಗಳು ಹೇಳಿದಂತೆ, ಪ್ರತಿಯೊಬ್ಬ ಭಾರತೀಯ ಬಿಡಿ ವ್ಯಕ್ತಿಯೂ "ಜೀವನದ ಸ್ವಾತಂತ್ರ್ಯದ ಮತ್ತು ಸುಖಾನ್ವೇಷಣೆಯ ಹಸ್ತಾಂತರಗೊಳಿಸಲಾಗದ ಹಕ್ಕನ್ನು ಹೊಂದಿರುತ್ತಾನೆ."(ಹರ್ಷೋದ್ಗಾರಗಳು)

**ಶ್ರೀ ಎಫ್.ಆರ್. ಆಂಥನಿ** (ಬಂಗಾಳ : ಸಾಮಾನ್ಯ) : ಮಾನ್ಯ ಅಧ್ಯಕ್ಷರೇ, ಡಾ. ಜಯಕರ್ ಅವರು ಮಂಡಿಸಿದ ತಿದ್ದುಪಡಿಯನ್ನು ಸಮರ್ಥಿಸಲು ನಾನು ಎದ್ದು ನಿಂತಿದ್ದೇನೆ. ಪಂಡಿತ್ ನೆಹರು ಅವರು ಅಳವಡಿಸಿದ ನಿರ್ಣಯ ಮತ್ತು ಡಾ. ಜಯಕರ್ ಅವರು ಮಂಡಿಸಿರುವ ರೀತಿಯಲ್ಲಿ ಅದರ ತಿದ್ದುಪಡಿಯನ್ನು ನಾನು ಅತ್ಯಂತ ಶ್ರದ್ಧೆಯಿಂದ ಪರಿಗಣಿಸಿದ್ದೇನೆ. ನಾನು ಮುಖ್ಯನಿರ್ಣಯದ ವಿದ್ಯುಕ್ತ ಲಕ್ಷಣವನ್ನು ಗ್ರಹಿಸಿದ್ದೇನೆ, ಮತ್ತು ತಿದ್ದುಪಡಿಯನ್ನು ಶುದ್ಧಾಂಗವಾಗಿ ಅದರ ತಾಂತ್ರಿಕ ಅಥವಾ ಕಾನೂನಾತ್ಮಕ ಕಾರಣಗಳನ್ನು ಸಮರ್ಥಿಸಲು ವಾದಮಾಡುವ ಮೂಲಕ ಸಮರ್ಥಿಸಲು ಹೋಗುವುದಿಲ್ಲ. ಆ ಮುಖ್ಯ ನಿರ್ಣಯದ ಮೊದನೆಯ ಭಾಗವು ಭಾರತವನ್ನು ಒಂದು ಸ್ವತಂತ್ರ ಸಾರ್ವಭೌಮ ಗಣರಾಜ್ಯವಾಗಿ ಘೋಷಿಸುವ ನಮ್ಮ ವಿದ್ಯುಕ್ತ ನಿರ್ಧಾರವನ್ನು ದೃಢಪಡಿಸುತ್ತಿರುವ ಅಂಶವನ್ನು ನಾನು ಮೆಚ್ಚುತ್ತೇನೆ. ಅದು ಕಾಂಗ್ರೆಸ್ ಪಕ್ಷದೊಡನೆ ಶ್ರದ್ಧೆಯ ಒಂದು ಮೂಲಭೂತ ಅಂಶ ಎಂದು ನಾನು ಮನಗಂಡಿದ್ದೇನೆ. ಇಷ್ಟು ದೀರ್ಘಕಾಲ ಮತ್ತು ಇಷ್ಟು ಪರಿಶ್ರಮದೊಡನೆ ಅವರು ಯಾವುದಕ್ಕೆ ಹೋರಾಡಿದರೋ ಆ ಸರ್ವೋನ್ನತ ಅಂಶವನ್ನು ಅದು ಪ್ರತಿನಿಧಿಸುತ್ತದೆ. ಪ್ರಪ್ರಥಮವಾದ ಮತ್ತು ಅತ್ಯಂತ ಸೂಕ್ತವಾದ ಈ ಸಂದರ್ಭದಲ್ಲಿ ಅವರ ಪ್ರತಿಜ್ಞಾವಚನವನ್ನು ಪುನರುಚ್ಚರಿಸುವಂತೆ ಯಾರೂ ಅವರನ್ನು ಕೇಳುವ ಧೈರ್ಯ ಮಾಡಲಾರರು, ಮಾಡಬಾರದು. ಅಲ್ಲದೆ ಆ ಪ್ರತಿಜ್ಞಾವಚನವು ಪ್ರತಿಯೊಬ್ಬ ಭಾರತೀಯನ ಹೃದಯದಲ್ಲೂ ಪ್ರತಿಷ್ಠಾಪಿತವಾಗಿದೆ ಎಂದು ನಾನು ಭಾವಿಸುತ್ತೇನೆ. ಸಾಂವಿಧಾನಿಕ ಪೂರ್ವೋದಾಹರಣೆಯು ನಮ್ಮದರಂತಹ ಸಭೆಯು ಪ್ರಥಮ ಅವಕಾಶದಲ್ಲೇ ತಮ್ಮ ಮುಖ್ಯವಾದ ಮತ್ತು ಮೂಲಭೂತವಾದ ಉದ್ದೇಶವನ್ನು ಘೋಷಿಸಿದೆ ಎಂದು ತೋರಿಸುವ ವಾಸ್ತಾವಾಂಶವನ್ನು ಕೂಡ ನಾನು ಗ್ರಹಿಸಿದ್ದೇನೆ. ಮತ್ತು ನಮ್ಮದು ಭಾರತವನ್ನು ಒಂದು ಸಾರ್ವಭೌಮ ಸ್ವತಂತ್ರ ಗಣರಾಜ್ಯವೆಂದು ಘೋಷಿಸುವುದಾಗಿದೆ. ಪಂಡಿತ್ ಜವಾಹರಲಾಲ ನೆಹರು ಅವರು ತೀರ ಸರಿಯಾಗಿಯೇ ಗಣರಾಜ್ಯವೆಂಬ ಈ ಶಬ್ದದಲ್ಲಿ ಯಾವುದೇ ಅನಗತ್ಯವಾದ ಪೊಳ್ಳು ಭಯವನ್ನು ತುಂಬಬಾರದೆಂದು ನಮ್ಮನ್ನು ಕೇಳಿಕೊಂಡಿದ್ದಾರೆ. ಅದು ರಾಜಪ್ರಭುತ್ವ ಮಾದರಿಯ ಸರ್ಕಾರಕ್ಕೆ ವೈದೃಶ್ಯವಾದ ಒಂದು ಸಂವಿಧಾನವನ್ನಷ್ಟೇ ಸೂಚಿಸುತ್ತಿದೆ. ಅದೇ ಸಮಯದಲ್ಲಿ ಅವರು ಒತ್ತಿ ಹೇಳಿರುವುದೇನೆಂದರೆ ಘಟಕಗಳು ಮತ್ತು ಸ್ವಯಮಾಧಿಕಾರದ ಘಟಕಗಳನ್ನು ಈ ಗಣರಾಜ್ಯಕ್ಕೆ ಸೇರದಿರುವಂತೆ ಅದು ಹೊರಗಿಟ್ಟಿಲ್ಲ. ಅವು ರಾಜಪ್ರಭುತ್ವದ ಮಾದರಿಯ ಸರ್ಕಾರವನ್ನು ತಮ್ಮಲ್ಲಿ ಉಳಿಸಿಕೊಳ್ಳಬಹುದು. ಡಾ ಜಯಕರ್ ಅವರ ತಿದ್ದುಪಡಿಯನ್ನು ಏಕೆ ನಾನು ಬೆಂಬಲಿಸುತ್ತಿದ್ದೇನೆ ಎಂಬುದಕ್ಕೆ ಕಾರಣವೇನೆಂದರೆ ಅದು ಮುಖ್ಯವಾಗಿ ಈ ಎರಡೂ ಸಂಗತಿಗಳನ್ನು ಈಡೇರಿಸುತ್ತದೆ ಎಂದು

ನಾನು ನಂಬಿರುವುದು. ಈ ತಿದ್ದುಪಡಿಯು ಕಾಂಗ್ರೆಸ್‌ನ ಪ್ರತಿಜ್ಞಾವಚನವನ್ನು ಗೌರವಿಸುತ್ತದೆ. ಒಂದು ಮುಕ್ತವಾದ ಮತ್ತು ಪ್ರಜಾಸತ್ತಾತ್ಮಕವಾದ ಸಾರ್ವಭೌಮ ರಾಷ್ಟ್ರಕ್ಕಾಗಿ ಸಂವಿಧಾನವನ್ನು ರಚಿಸುವ ನಮ್ಮ ವಿಧ್ಯುಕ್ತ ನಿರ್ಧಾರವನ್ನು ಅದು ದೃಢಪಡಿಸುತ್ತದೆ. ಬಳಸಿದ ಶಬ್ದಗಳು ತದ್ರೂಪವಾಗಿಲ್ಲದೇ ಇರಬಹುದು. ಮುಖ್ಯ ನಿರ್ಣಯದಿಂದ ಶಬ್ದಗಳನ್ನು ಅಳವಡಿಸಿಕೊಂಡಿದ್ದಿದ್ದರೆ ಚೆನ್ನಾಗಿರುತ್ತಿತ್ತು ಎಂದು ನನ್ನ ಭಾವನೆ. ಆದರೆ ಸಂವಿಧಾನಾತ್ಮಕವಾದ ದೃಷ್ಟಿಕೋನದಿಂದ ಈ ಎರಡು ಪದಗುಚ್ಛಗಳ ಸೂಚಿತಾರ್ಥಗಳೂ ವಾಸ್ತವಿಕವಾಗಿ ತದ್ರೂಪವಾಗಿವೆ ಎಂದು ನಾನು ನಂಬುತ್ತೇನೆ. ಮೇಲಾಗಿ, ಡಾ. ಜಯಕರ್ ಅವರ ತಿದ್ದುಪಡಿಯು ಎರಡನೆಯ ಅಗತ್ಯವನ್ನು ಪೂರೈಸುತ್ತದೆ. ಅದೇಂದರೆ ಈ ಹಂತದಲ್ಲಿ ಒಂದು ಮುಕ್ತವಾದ ಮತ್ತು ಪ್ರಜಾಸತ್ತಾತ್ಮಕವಾದ ಸಾರ್ವಭೌಮ ರಾಷ್ಟ್ರಕ್ಕಾಗಿ ಒಂದು ಸಂವಿಧಾನವನ್ನು ರಚಿಸಬೇಕು ಎನ್ನುವ ನಮ್ಮ ಮೂಲಭೂತ ಉದ್ದೇಶ. ಡಾ. ಜಯಕರ್ ಅವರ ತಿದ್ದುಪಡಿಯು ನಾವು ನಿಜವಾಗಿಯೂ ಏನು ಮಾಡಬೇಕೆಂದು ಬಯಸುತ್ತದೆ ಎಂದರೆ ಆ ಮುಖ್ಯ ನಿರ್ಣಯದ ಉಳಿದ ಭಾಗಗಳನ್ನು ಕುರಿತ ಒಂದು ಘೋಷಣೆಯನ್ನು ಮುಂದೂಡಬೇಕು ಎನ್ನುವುದು ಎಂದು ನಾನು ನಂಬುತ್ತೇನೆ. ಅಂದರೆ ಭಾರತದ ರಾಜ್ಯಗಳಿಗೆ ಸೇರಿದ ಆ ಭಾಗಗಳು, ಪ್ರಾಂತ್ಯಗಳ ಅಧಿಕಾರಗಳು ಮತ್ತು ಕಾರ್ಯಭಾರಗಳು ಮತ್ತು ಒಕ್ಕೂಟದ ಅಧಿಕಾರಗಳು ಮತ್ತು ಕಾರ್ಯಭಾರಗಳು. ಒಂದು ಘೋಷಣೆಯನ್ನು ಮುಂದೂಡಬೇಕು ಎನ್ನುವುದು ಈ ತಿದ್ದುಪಡಿಯ ಉದ್ದೇಶವಾಗಿದೆ ಎಂದು ನಾನು ನಂಬುತ್ತೇನೆ. ಹೇಗಾದರೂ ಅದು ನಮ್ಮನ್ನು ಒಂದು ನಿರಾಧಾರವಾದ ಆರೋಪಕ್ಕೆ ಗುರಿಮಾಡುವಂತಹ ಘೋಷಣೆಯಾಗಿರಬಹುದು. ಈ ಸಭೆಯಲ್ಲಿ ಅಡ್ಡಹಾಯಬೇಕಾದ ಮತ್ತು ಸಂಪೂರ್ಣವಾಗಿ ಪ್ರಚಾರ ಮಾಡಿದ ಮತ್ತು ಚರ್ಚಿಸಿದ ಅನಂತರವಷ್ಟೇ ಈ ವಿವರಗಳ ಮೇಲೆ ತೀರ್ಮಾನ ತೆಗೆದುಕೊಳ್ಳಬೇಕಾಗಿದ್ದು ನಾವು ಪೂರ್ವತೀರ್ಮಾನಗಳನ್ನು ತೆಗೆದುಕೊಳ್ಳುತ್ತಿದ್ದೇವೆ ಎಂದು ಆರೋಪಿಸಬಹುದು. ಅದಕ್ಕಾಗಿಯೇ ಮಾನ್ಯರೆ, ಡಾ, ಜಯಕರ್ ಅವರ ತಿದ್ದುಪಡಿಯನ್ನು ಬೆಂಬಲಿಸಬೇಕು ಎಂದು ನಾನು ಭಾವಿಸುತ್ತಿರುವುದು. ಅದನ್ನು ಅಂಗೀಕರಿಸತಕ್ಕದ್ದು. ಏಕೆಂದರೆ ಎಲ್ಲ ವಿನಮ್ರತೆ ಮತ್ತು ಮುತ್ಸದ್ದಿತನಗಳ ಪರಿಗಣನೆಗಳಿಂದ, ಎರಡು ಪ್ರಮುಖ ಪಕ್ಷಗಳ ನಡುವೆ ಅತ್ಯುನ್ನತ ಪ್ರಮಾಣದ ಒಡಂಬಡಿಕೆ ಮತ್ತು ಸದ್ಭಾವನೆಯನ್ನು ಪ್ರತಿಯೊಬ್ಬರೂ ನೋಡಬೇಕೆಂಬ ಅಪೇಕ್ಷೆಯಿಂದ ಅದು ನಿರ್ದೇಶಿತವಾಗಿದೆ ಎಂದು ನಾನು ಹೇಳಬಹುದೇನೋ. ಮತ್ತು ಈ ಮಹಾನ್ ದೇಶದ ಮಕ್ಕಳಿಂದ ಶಕ್ತಿಯನ್ನು ಪಡೆಯುವ ಮತ್ತು ಅವರಿಗೆ ಶಕ್ತಿಯನ್ನು ಕೊಡುವ ಅಪೇಕ್ಷೆಯಿಂದ ಎಲ್ಲರನ್ನೂ ಆಲಿಂಗಿಸಿದೆ.

**ಡಾ. ಶ್ಯಾಮಪ್ರಸಾದ ಮುಖರ್ಜಿ** (ಬಂಗಾಳ : ಸಾಮಾನ್ಯ) : ಮಾನ್ಯ ಅಧ್ಯಕ್ಷರೆ, ನಮ್ಮ ದೇಶದ ವೈವಿಧ್ಯಪೂರ್ಣವಾದ ಇತಿಹಾಸವು ಜರುಗುತ್ತಿರುವಾಗ, ನಮ್ಮ ಮಾತೃಭೂಮಿಗೆ ಸ್ವತಂತ್ರವಾದ ಸಾರ್ವಭೌಮ ರಾಷ್ಟ್ರಕ್ಕಾಗಿ ನಮ್ಮ ಹಕ್ಕೊತ್ತಾಯಗಳನ್ನು ಒಳಗೊಂಡಿರುವ ಗೊತ್ತುವಳಿಗಳನ್ನು ಮತ್ತು ನಿರ್ಣಯಗಳನ್ನು ವಿವಿಧ ರಾಜಕೀಯ ಪಕ್ಷಗಳು ಮತ್ತು ವೇದಿಕೆಗಳಿಂದ ನಾವು ಅನೇಕಬಾರಿ ಅಂಗೀಕರಿಸಿದ್ದೇವೆ ಎಂದು ನಾನು ಭಾವಿಸುತ್ತೇನೆ. ಆದರೆ ಇಂದಿನ ನಿರ್ಣಯವನ್ನು ಕುರಿತು ಹೇಳುವುದಾದರೆ, ಅದಕ್ಕೆ ಒಂದು ಆಳವಾದ ಮತ್ತು ವಿಶೇಷವಾದ ಮಹತ್ತ್ವವಿದೆ. ನಾವು ಬ್ರಿಟಿಷರ ಆಡಳಿತದ ಅಧೀನದಲ್ಲಿ ಬಂದಾಗಿನಿಂದ ನಮ್ಮ ದೇಶದ ಇತಿಹಾಸದಲ್ಲಿಯೇ ಮೊದಲಬಾರಿಗೆ ನಮ್ಮದೇ ಆದ ಸಂವಿಧಾನವನ್ನು ರಚಿಸಿಕೊಳ್ಳಲು ನಾವು ಸಭೆ ಸೇರಿದ್ದೇವೆ. ಇದು ಒಂದು ಮಹಾನ್ ಹೊಣೆಗಾರಿಕೆಯ ಕೆಲಸ. ವಾಸ್ತವದಲ್ಲಿ ನಿರ್ಣಯದ ಗೌರವಾನ್ವಿತ ಮಂಡನೆಯಕಾರರು ನಮಗೆ ನೆನಪಿಸಿದಂತೆ ನಾವು ಭಾರತೀಯರು ನಿರ್ವಹಿಸಲು ಒಪ್ಪಿಕೊಂಡಿರುವ ವಿಧ್ಯುಕ್ತವಾದ ಮತ್ತು ಪವಿತ್ರವಾದ ಒಂದು ನಂಬಿಕೆ ಇದಾಗಿದ್ದು. ಇದನ್ನು ನಾವು ನಮ್ಮ ಯತ್ನಮೀರಿ ಕೈಗೊಳ್ಳಲು ಉದ್ದೇಶಿಸಿದ್ದೇವೆ. ಈಗ, ಮಾನ್ಯರೆ, ಡಾ. ಜಯಕರ್ ಅವರು ಮಂಡಿಸಿದ ತಿದ್ದುಪಡಿಯು ಮೂಲಭೂತ ಮಹತ್ತ್ವದಿಂದ ಕೂಡಿದ ಕೆಲವು ಪ್ರಶ್ನೆಗಳನ್ನು ಎತ್ತುತ್ತದೆ. ನಾನು ಈ ತಿದ್ದುಪಡಿಯನ್ನು ಬೆಂಬಲಿಸಲು ಸಾಧ್ಯವಾಗುತ್ತಿಲ್ಲ, ಅದಕ್ಕಾಗಿ ವಿಷಾದಿಸುತ್ತೇನೆ. ಈ ತಿದ್ದುಪಡಿಯ ಪ್ರಾಯೋಗಿಕ ಪರಿಣಾಮವೇನೆಂದರೆ

ವಿಭಾಗಗಳು ಸಂಧಿಸಿ ತಮ್ಮ ಶಿಫಾರಸುಗಳನ್ನು ಮಾಡುವವರೆಗೂ ಈ ಸ್ವರೂಪದ ಒಂದು ನಿರ್ಣಯವನ್ನು ನಾವು ಅಂಗೀಕರಿಸಲು ಸಾಧ್ಯವೇ ಇಲ್ಲ. ಭಾರತೀಯ ರಾಜ್ಯಗಳು ಮತ್ತು ಮುಸ್ಲಿಮ್ ಲೀಗ್ ಇವೆರಡೂ ಸಂವಿಧಾನ ರಚನಾಸಭೆಗೆ ಹಾಜರಾಗಲು ಸಮರ್ಥರಾಗುವವರೆಗೂ ಈ ನಿರ್ಣಯವನ್ನು ನಾವು ಅಂಗೀಕರಿಸಬಾರದು ಎಂದು ಡಾ. ಜಯಕರ್ ಅವರು ಬಯಸುತ್ತಾರೆ. ಭಾರತೀಯ ರಾಜ್ಯಗಳ ಬಗೆಗೆ ಹೇಳುವುದಾದರೆ, ವಿಭಾಗಗಳು ಸಂಧಿಸಿ ಪ್ರಾಂತೀಯ ಸಂವಿಧಾನಗಳನ್ನು ಇತ್ಯರ್ಥಗೊಳಿಸುವವರೆಗೆ, ಅವು ಇಷ್ಟಪಟ್ಟರೂ ಒಳಬರಲಾರವು. ಅಂದರೆ ಎಷ್ಟು ತಿಂಗಳಾಗುತ್ತದೆ ಎಂದು ಯಾರೂ ಭವಿಷ್ಯ ನುಡಿಯಲಾರರು. ಇನ್ನು ಮುಸ್ಲಿಮ್ ಲೀಗ್ ಬಗೆಗೆ ಹೇಳುವುದಾದರೆ, ಸಂವಿಧಾನ ರಚನಾಸಭೆಯ ಪೂರ್ವಭಾವಿ ಅಧಿವೇಶನಕ್ಕೆ ಹಾಜರಾಗಲು ಮುಸ್ಲಿಮ್ ಲೀಗ್ ಗೆ ಸಾಧ್ಯವಾಗದೇ ಹೋದುದಕ್ಕೆ ಪ್ರತಿಯೊಬ್ಬರೂ ವಿಷಾದಿಸುತ್ತಾರೆ. ಆದರೆ ಡಾ. ಜಯಕರ್ ಅವರು ಸಲಹೆ ಕೊಟ್ಟಂತೆ ಮುಂದಿನ ಜನವರಿ ೨೦ ರವರೆಗೆ ಈ ನಿರ್ಣಯವನ್ನು ಮುಂದೂಡಿದರೆ ಮುಸ್ಲಿಮ್ ಲೀಗ್‌ನವರು ಬಂದು ಈ ಅಧಿವೇಶನಕ್ಕೆ ಹಾಜರಾಗುತ್ತಾರೆ ಎಂದು ಯಾವ ಖಾತರಿ ಇದೆ?

ಮಾನ್ಯರೆ, ವಾಸ್ತವವಾಗಿ ಈ ಪ್ರಶ್ನೆಯನ್ನು ಒಂದು ವಿಭಿನ್ನವಾದ ದೃಷ್ಟಿಕೋನದಿಂದ ನೋಡಬೇಕು ಎಂದು ನಾನು ಭಾವಿಸುತ್ತೇನೆ. ಈ ನಿರ್ಣಯವು ಮೇ ೧೬ರ ಸಂಪುಟ ನಿಯೋಗದ ಯೋಜನೆಗೆ ಯಾವುದೇ ರೀತಿಯಲ್ಲಿ ಹೊಂದಿಕೆಯಾಗದ ವಿಷಯಗಳನ್ನು ಎತ್ತುತ್ತಿದೆಯೇ? ಆ ಯೋಜನೆಗೆ ಹೊಂದಿಕೆಯಾಗದ ವಿಷಯಗಳನ್ನು ಅದು ಎತ್ತುತ್ತದೆ ಎಂದಾದರೆ ನಾವು ವಿಷಯಗಳ ಪೂರ್ವತೀರ್ಮಾನ ಮಾಡುತ್ತಿದ್ದೇವೆ. ಈ ಹಂತದಲ್ಲಿ ಎತ್ತಲು ಹಕ್ಕು ಇಲ್ಲದ ವಿಷಯಗಳನ್ನು ನಾವು ಎತ್ತುತ್ತಿದ್ದೇವೆ ಎಂದು ಹೇಳಬಹುದು. ಈಗ ನನ್ನ ಮನಸ್ಸಿಗೆ ಆ ದಾಖಲೆಯು ಒಂದು ಚಿತ್ರಬಂಧದಂತೆ ತೋರುತ್ತದೆ. ವಿವಿಧ ದೃಷ್ಟಿಕೋನಗಳಿಂದ ನೋಡಿ ಅದನ್ನು ನೀವು ನಾನಾ ರೀತಿಯಲ್ಲಿ ಅರ್ಥೈಸಬಹುದು. ಆದರೆ ಈಗಿರುವಂತೆ ಈ ನಿರ್ಣಯವನ್ನು ನೋಡಿದಾಗ, ಅದು ಈಗ ಯಾವ ಘೋಷಣೆಯನ್ನು ಮಾಡುತ್ತಿದೆ? ಅದು ಯೋಜನೆಯ ಚೌಕಟ್ಟಿನೊಳಗೇ ಇರುವ ಕೆಲವು ಮೂಲಭೂತ ವಿಚಾರಗಳನ್ನು ನಮೂದಿಸುತ್ತಿದೆ. ಕೆಲವು ವಿವರಗಳಿಗೆ ಹೋದರೆ ಅದು ನನಗೆ ತಿಳಿಯುತ್ತದೆ. ನಮ್ಮಲ್ಲಿ ಅನೇಕರು ಭಿನ್ನಭಿನ್ನವಾದ ಅಭಿಪ್ರಾಯಗಳನ್ನು ಹೊಂದಿರುವ ಕನಿಷ್ಠಪಕ್ಷ ಒಂದು ಅಂಶವನ್ನು ನಾನು ಉಲ್ಲೇಖಿಸಬೇಕು. ಅದೆಂದರೆ ಉಳಿಕೆ ಅಧಿಕಾರಗಳ ಪ್ರಶ್ನೆ. ಆದರೆ ಅದು ಸಂಪುಟ ನಿಯೋಗದ ಯೋಜನೆಯು ಸಂವಿಧಾನದ ಪರಿಭಾವಿಸಿದ ಚೌಕಟ್ಟಿನೊಳಗೆ ಸೇರಿಸಿದ ವಿಷಯ. ಭಾರತದ ರಾಷ್ಟ್ರೀಯ ಕಾಂಗ್ರೆಸ್ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದ ವಿಷಯ ಅದು. ಮುಸ್ಲಿಮ್ ಲೀಗ್ ಕೂಡ ಆ ವಿಷಯದಲ್ಲಿ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ ಎಂದು ನಾನು ನಂಬುತ್ತೇನೆ. ನಮ್ಮಲ್ಲಿ ಕೆಲವರು ಆ ನಿಲುವಿಗೆ ವಿಭಿನ್ನರಾಗಿದ್ದೇವೆ ಮತ್ತು ಭಾರತದ ಸರ್ವಶ್ರೇಷ್ಠ ಹಿತಾಸಕ್ತಿಯಿಂದ ಪ್ರಬಲವಾದ ಕೇಂದ್ರವಿರಬೇಕೆಂದು ಒತ್ತಾಯಿಸುತ್ತಿದ್ದೇವೆ. ಮುಂದೆ ಒಂದು ಸೂಕ್ತವಾದ ಹಂತದಲ್ಲಿ ನಾವು ಹಾಗೆ ಮಾಡಬೇಕು. ಈ ನಿರ್ಣಯದ ಮಂಡನೆಕಾರರಾದ ಪಂಡಿತ್ ಜವಾಹರಲಾಲ್ ನೆಹರು ಅವರೂ ನಾವು ಈಗ ಭಾರತಕ್ಕೆ ಒಂದು ಸಂವಿಧಾನವನ್ನು ರಚಿಸುತ್ತಿಲ್ಲ ಎನ್ನುವುದನ್ನು ಸ್ಪಷ್ಟಪಡಿಸಿದ್ದಾರೆ. ಈ ಹಂತದಲ್ಲಿ ನಾವು ಒಂದು ನಿರ್ಣಯವನ್ನು ಅಂಗೀಕರಿಸುತ್ತಿದ್ದೇವಷ್ಟೆ. ಈ ಪೂರ್ವಭಾವಿ ಹಂತದಲ್ಲಿ ಭಾರತದ ಭಾವೀ ಸಂವಿಧಾನವು ಸಾಮಾನ್ಯವಾಗಿ ಯಾವ ರೂಪವನ್ನು ತಳೆಯಬೇಕು ಎಂಬ ರೂಪರೇಷೆಯನ್ನು ಹಾಕುತ್ತಿದ್ದೇವೆ. ಮಾನ್ಯರೆ, ಬೇರೆ ಮಾತುಗಳಲ್ಲಿ ಹೇಳುವುದಾದರೆ ಸಂವಿಧಾನವನ್ನು ರಚಿಸುವ ಕಾಲವು ನಿಜವಾಗಿಯೂ ನಮಗೆ ಬಂದಾಗ ಈ ಸದನದ ಮುಂದೆ ಯಾರು ಬೇಕಾದರೂ ಯಾವ ಪ್ರಸ್ತಾವದ ಮೇಲೂ ಒಂದು ತಿದ್ದುಪಡಿಯ ರೂಪದಲ್ಲಿ ತನ್ನ ಆಯ್ಕೆಯ ಯಾವುದೇ ವಿಷಯವನ್ನು ತರಲು ಸ್ವತಂತ್ರರಾಗಿರುತ್ತಾರೆ ಎಂದು ನಾನು ಭಾವಿಸುತ್ತೇನೆ. ಅದರ ಅರ್ಹತೆಗೆ ಅನುಗುಣವಾಗಿ ಅದನ್ನು ಪರಿಗಣಿಸಲೇಬೇಕಾಗುತ್ತದೆ. ಈ ಸಭೆಯು ಮುಂದಿನ ಒಂದು ಹಂತದಲ್ಲಿ ರಚಿಸಬಹುದಾದ ಕರಡು ಸಂವಿಧಾನದ ಮೇಲೆ ತಿದ್ದುಪಡಿಯನ್ನು ತರಲು, ಈ ನಿರ್ಣಯದ ಅಂಗೀಕಾರವು

ಯಾವುದೇ ಸದಸ್ಯನ ವಿರುದ್ಧ ಕಾನೂನಾತ್ಮಕ ನಿರ್ಬಂಧವಾಗಲಾರದು. ಎಂದು ನಾನು ಪರಿಗಣಿಸುತ್ತೇನೆ. ಈ ಎರಡು ವಿಷಯಗಳನ್ನು ಕುರಿತು ಭರವಸೆಯು ದೊರೆಯುವಂತಿದ್ದರೆ, ಅಂದರೆ ಈ ನಿರ್ಣಯವನ್ನು ಒಕ್ಕಣಿಸಿದ ರೂಪದಲ್ಲಿ ಸಂಪುಟ ನಿಯೋಗದ ಯೋಜನೆಯ ಪ್ರಧಾನ ಲಕ್ಷಣಗಳ ವಿರುದ್ಧ ಹೋಗುವುದಿಲ್ಲ ಮತ್ತು ಇನ್ನೂ ಬರಲಿರುವ ಸಂವಿಧಾನದ ವಿವರಗಳಿಗೆ ಸಂಬಂಧಿಸಿದಂತೆ ಸಂವಿಧಾನ ರಚನಾಸಭೆಯು ಒಂದು ನಿರ್ದಿಷ್ಟವಾದ ರೀತಿಗೆ ಬದ್ಧವಾಗಿರಬೇಕೆಂದು ವಿಧಿಸುವುದಿಲ್ಲ. ಈ ಹಂತದಲ್ಲಿ ಈ ನಿರ್ಣಯವನ್ನು ಅಂಗೀಕರಿಸುವುದಕ್ಕೆ ಏಕೆ ಯಾವುದೇ ಅಡಚಣೆಯನ್ನು ಒಡ್ಡಬೇಕು ಎನ್ನುವುದಕ್ಕೆ ನನಗೆ ಕಾರಣವು ತೋರುವುದಿಲ್ಲ.

ಈ ನಿರ್ಣಯಕ್ಕೆ ತನ್ನದೇ ಆದ ಮಹತ್ತ್ವವಿದೆ. ಅಷ್ಟಕ್ಕೂ ನಾವು ಇಲ್ಲಿ ಕುಳಿತಿರುವುದು ನಮ್ಮದೇ ವೈಯಕ್ತಿಕ ಬಲದಿಂದಲ್ಲ, ನಾವು ಈ ಮಹಾನ್ ದೇಶದ ಜನರನ್ನು ಪ್ರತಿನಿಧಿಸುತ್ತಿದ್ದೇವೆ ಎಂದು ಹೇಳಿಕೊಳ್ಳುತ್ತಿದ್ದೇವೆ. ನಮ್ಮ ಮಂಜೂರಾತಿಯು ಬ್ರಿಟಿಷ್ ಸಂಸತ್ತು ಅಲ್ಲ; ನಮ್ಮ ಮಂಜೂರಾತಿಯು ಬ್ರಿಟಿಷ್ ಸರ್ಕಾರವಲ್ಲ; ನಮ್ಮ ಮಂಜೂರಾತಿಯು ಭಾರತದ ಜನ ಸಮುದಾಯ (ಹರ್ಷೋದ್ಗಾರಗಳು). ಅದು ಹಾಗಿದ್ದರೆ, ನಾವು ಏನಾದರೂ ಹೇಳಬೇಕಾಗುತ್ತದೆ, ಕೆಲವು ನಿಯಮ ನಿಬಂಧನೆಗಳನ್ನು ರಚಿಸುವುದಷ್ಟೇ ಅಲ್ಲ, ನಾವು ಇಲ್ಲಿ ೯ನೇ ಡಿಸೆಂಬರ್ ೧೯೪೬ರಲ್ಲಿ ಏಕೆ ಸಭೆ ಸೇರಿದ್ದೇವೆ ಎನ್ನುವುದನ್ನು ಕುರಿತು ಭಾರತದ ಜನತೆಗೆ ಮೂರ್ತರೂಪದಲ್ಲಿ ಏನಾದರೂ ಹೇಳಬೇಕಾಗುತ್ತದೆ. ಡಾ. ಜಯಕರ್ ಅವರು ಹೇಳಿದ್ದೇ ಸರಿಯಾದ ನಿಲುವಾಗಿದ್ದರೆ ಆಗ ಈ ಸಂವಿಧಾನ ರಚನಾಸಭೆಯನ್ನು ಕರೆಯಬೇಕಾದ ಅಗತ್ಯವೇ ಇರಲಿಲ್ಲ. ದಿಟದಲ್ಲಿ ಡಾ. ಜಯಕರ್ ಅವರು ಈ ಸಭೆಗೆ ಹಾಜರಾಗಬೇಕಾದ ಆವಶ್ಯಕತೆಯೇ ಇರಲಿಲ್ಲ. ಅವರು ಗವರ್ನರ್ ಜನರಲ್‌ಗೆ ತಿಳಿಸಬೇಕಾಗಿತ್ತು, "ಮುಸ್ಲಿಮ್ ಲೀಗ್ ಮತ್ತು ಭಾರತದ ರಾಜ್ಯಗಳು ಹಾಜರಾಗದೇ ಇರುವುದರಿಂದ ಸಂವಿಧಾನ ರಚನಾಸಭೆಯನ್ನು ಕರೆಯುವಲ್ಲಿ ನೀವು ತಪ್ಪುಮಾಡುತ್ತಿದ್ದೀರಿ ಎಂದು ನಾನು ಭಾವಿಸಿರುವುದರಿಂದ ನಿಮ್ಮ ಆಹ್ವಾನವನ್ನು ಅಂಗೀಕರಿಸಲು ನನಗೆ ಸಾಧ್ಯವಾಗುತ್ತಿಲ್ಲ ಎಂದು ತಿಳಿಸಲು ವಿಷಾದಿಸುತ್ತೇನೆ." ಆದರೆ ಇಲ್ಲಿಗೆ ಬಂದ ಮೇಲೆ ಈ ವಿವಾದಾಂಶವನ್ನು ನಾವು ಎತ್ತುವುದೆಂದರೆ ಬಹುಮಟ್ಟಿಗೆ ಮುಸ್ಲಿಮ್ ಲೀಗ್‌ನ ಬೋನಿನೊಳಗೆ ನುಗ್ಗಿದಂತೆಯೇ ಸರಿ, ಮತ್ತು ಅದು ಗ್ರೇಟ್ ಬ್ರಿಟನ್ನಿನಲ್ಲಿರುವ ಪ್ರತಿಗಾಮಿಗಳ ಕೈಗಳನ್ನು ಬಲಪಡಿಸಿದಂತಾಗುತ್ತದೆ. ಅಂತಹ ಕೆಲಸವನ್ನು ಮಾಡುವಲ್ಲಿ ಡಾ. ಜಯಕರ್ ಕೊನೆಯ ವ್ಯಕ್ತಿ ಎಂದು ನನಗೆ ಗೊತ್ತು. ನಾನು ಅವರ ಧೈರ್ಯ ಮತ್ತು ನಿಶ್ಚಿತಾಭಿಪ್ರಾಯವನ್ನು ಮೆಚ್ಚುತ್ತೇನೆ. ವಾಸ್ತವದಲ್ಲಿ ಏನಾದರೊಂದನ್ನು ಮಾಡಬೇಕೆಂದು ಬಯಸುವವರು ಮುಂದೆ ಬಂದು ತಮ್ಮ ದೃಷ್ಟಿಕೋನವನ್ನು ಮಂಡಿಸಲು ಸಮರ್ಥರಾಗಬೇಕು. ಆದರೆ ಈ ಸದನದ ಮುಂದೆ ಮಂಡಿಸಲಾದ ಮುಗ್ಧವೆಂಬಂತೆ ತೋರುವ ತಿದ್ದುಪಡಿಯಲ್ಲಿ ಅಡಗಿರುವ ಮಹಾನ್ ಅಪಾಯವನ್ನು ಡಾ. ಜಯಕರ್ ಅವರಿಗೆ ಗೌರವಪೂರ್ಣವಾಗಿ ತೋರಿಸಿಯೂ ಕೊಡಬಹುದು. ಕಾಲಕ್ರಮದಲ್ಲಿ ಸಮಯ ಬಂದಾಗ ಅವರು ಈ ತಿದ್ದುಪಡಿಯನ್ನು ಹಿಂದಕ್ಕೆ ಪಡೆಯುತ್ತಾರೆ ಎಂದು ನಾನು ನಿರೀಕ್ಷಿಸುತ್ತೇನೆ.

ಈ ಪ್ರಶ್ನೆಯ ಇನ್ನೊಂದು ಅಂಶವನ್ನು ಕುರಿತು ನಾನು ಕೆಲವು ಮಾತುಗಳನ್ನು ಆಡಲು ಇಷ್ಟಪಡುತ್ತೇನೆ. ನಿರ್ಣಯವೇನೋ ಇದೆ, ಆದರೆ ಅದನ್ನು ನಾವು ಹೇಗೆ ಅನುಷ್ಠಾನಗೊಳಿಸುತ್ತೇವೆ? ಈ ನಿರ್ಣಯವು ಜಾರಿಗೆ ಬರುವಂತೆ ಮಾಡುವ ನಮ್ಮ ಪ್ರಯತ್ನವನ್ನು ತಡೆಯುವ, ನಾವು ಈಗಾಗಲೇ ನೋಡಿರುವ ಅಡಚಣೆಗಳು ಯಾವುವು? ಸಹಜವಾಗಿಯೇ ಮೊದಲನೆಯ ಅಡಚಣೆಯೆಂದರೆ ಸಂವಿಧಾನ ರಚನಾಸಭೆಯಲ್ಲಿ ಮುಸ್ಲಿಮ್ ಲೀಗ್‌ನ ಅನುಪಸ್ಥಿತಿ. ನಿನ್ನೆ ಡಾ. ಜಯಕರ್ ಅವರು ಒಂದು ಭೋಜನಕೂಟದ ಸಾದೃಶ್ಯವನ್ನು ಉಲ್ಲೇಖಿಸಿದರು. ಅವರು ಹೇಳಿದರು, "ಅತಿಥಿಗಳನ್ನು ಆಹ್ವಾನಿಸಿದಾಗ ಕೆಲವು ಅತಿಥಿಗಳು ಬರದಿದ್ದರೆ, ಆಗ ಭೋಜನ ಕೂಟವನ್ನು ಹೇಗೆ ನಡೆಸುತ್ತೀರಿ?" ಆದರೆ ಈಗಾಗಲೇ ಬಂದಿರುವ ಅತಿಥಿಗಳ ಪಾಡೇನು ಎಂದು ಹೇಳಲು ಅವರು ಮರೆತಿದ್ದಾರೆ. ಒಂದು ಪಕ್ಷ ಅವರೇ ಆತಿಥೇಯರಾಗಿದ್ದು ಆರು ಜನ ಅತಿಥಿಗಳನ್ನು ಆಹ್ವಾನಿಸಿದ್ದು ಅವರಲ್ಲಿ ಐವರು ಬಂದು ಒಬ್ಬರು ಗೈರುಹಾಜರಾಗಿದ್ದಾರೆ ಎಂದುಕೊಳ್ಳೋಣ. ಆ ಐದು ಜನ ಅತಿಥಿಗಳನ್ನು

ಅವರು ಉಪವಾಸ ಕೆಡವುತ್ತಾರೆಯೆ? "ಆರನೆಯವರು ಬಂದಿಲ್ಲ, ಆದ್ದರಿಂದ ನಿಮಗೂ ಊಟ ದೊರೆಯುವುದಿಲ್ಲ" ಎಂದು ಹೇಳುತ್ತಾರೆಯೆ? ಖಂಡಿತವಾಗಿಯೂ ಇಲ್ಲ. ಇಲ್ಲೂ ಕೂಡ ಬಂದಿರುವವರ ಸ್ವಾತಂತ್ರ್ಯದ ಹಸಿವನ್ನು ತಣಿಸಬೇಕು. ಶ್ರೀ ಚರ್ಚಿಲ್ ಹೇಳಿರುವುದೇನೆಂದರೆ, ಸಂವಿಧಾನ ರಚನಾಸಭೆಯಲ್ಲಿ ಮುಸ್ಲಿಮ್ ಲೀಗ್‌ನ ಗೈರುಹಾಜರಿಯು ಚರ್ಚಿನಲ್ಲಿ ಮದುವೆಯನ್ನು ಏರ್ಪಡಿಸಿದ್ದಾಗ ವಧುವು ನಾಪತ್ತೆಯಾದಂತೆ. ಭಾರತದ ರಾಜ್ಯಗಳು ಮತ್ತು ಮುಸ್ಲಿಮ್ ಲೀಗ್ ಕೂಡ ಯಾವಾಗ ಒಳಗೆ ಬರುತ್ತವೆಯೋ, ಮತ್ತು ಅಂತಿಮವಾಗಿ ಸಂವಿಧಾನ ರಚನಾಸಭೆಯು ಎಷ್ಟು ಜನ ವಧುಗಳನ್ನು ಪಡೆಯುತ್ತದೆಯೋ ನನಗೆ ಗೊತ್ತಿಲ್ಲ. ಏನೇ ಆಗಲಿ, ಅದು ಶ್ರೀ ಚರ್ಚಿಲ್ ಅವರ ಅಭಿಪ್ರಾಯವಾಗಿದ್ದರೆ, ಅವರು ಅತ್ಯಾಚಾರಿಯ ಪಾತ್ರವನ್ನು ವಹಿಸಬಾರದು. ಅವರು ಶ್ರೀ ಜಿನ್ನಾ ಅವರಿಗೆ ಭಾರತಕ್ಕೆ ಮರಳಿ ಹೋಗಿ ಸಂವಿಧಾನ ರಚನಾಸಭೆಯಲ್ಲಿ ಸೇರಿಕೊಂಡು ಭಾರತದ ಜನಸಮುದಾಯದ ಮುಂದೆ ತಮ್ಮ ಅಭಿಪ್ರಾಯವನ್ನು ಮಂಡಿಸುವಂತೆ ಹೇಳಬೇಕಾಗಿತ್ತು. ಮುಸ್ಲಿಮ್ ಲೀಗ್ ಬರಬಾರದು ಎಂದು ಯಾರೂ ಹೇಳಿಲ್ಲ. ದಿಟದಲ್ಲಿ, ಮುಸ್ಲಿಮ್ ಲೀಗ್ ಬರಬೇಕು ಮತ್ತು ಅದರಿಂದ ನಾವು ಮುಖಾಮುಖಿ ನೋಡಲು ಸಾಧ್ಯವಾಗುತ್ತದೆ ಎನ್ನುವುದು ನಮ್ಮ ಇಚ್ಛೆ. ಕಷ್ಟಗಳು ಇದ್ದರೆ, ಅಭಿಪ್ರಾಯಭೇದಗಳು ಇದ್ದರೆ, ಅವನ್ನು ಕೇವಲ ಬಹುಮತದಿಂದಲೇ ಅಂಗೀಕರಿಸಬೇಕು ಎಂದು ನಾವು ಬಯಸುವುದಿಲ್ಲ. ಅಂತಿಮ ಉಪಾಯವಾಗಿ ಅದನ್ನು ಮಾಡಬೇಕಾಗಿ ಬರಬಹುದು. ಆದರೆ ಭಾರತದ ಭಾವೀ ಸಂವಿಧಾನಕ್ಕೆ ಸಂಬಂಧಿಸಿದಂತೆ ಒಂದು ಒಪ್ಪಂದಕ್ಕೆ ಬರಲು ಪ್ರತಿಯೊಂದು ಪ್ರಯತ್ನವನ್ನೂ ಖಂಡಿತವಾಗಿಯೂ ಮಾಡಲಾಗುವುದು. ಆದರೆ ಮುಸ್ಲಿಮ್ ಲೀಗ್ ಅನ್ನು ಬರದಂತೆ ಏಕೆ ತಡೆಯಲಾಗುತ್ತಿದೆ. ನನ್ನ ಆರೋಪವೇನೆಂದರೆ ಬ್ರಿಟಿಷರ ನಿಲುವಿನಿಂದ ಮುಸ್ಲಿಮ್ ಲೀಗ್ ಪ್ರೋತ್ಸಾಹವನ್ನು ಪಡೆಯುತ್ತಿರುವುದರಿಂದ ಅದು ಬರುತ್ತಿಲ್ಲ. ಅದು ಬರದಿದ್ದರೆ ಸಂವಿಧಾನ ರಚನಾಸಭೆಯ ಅಂತಿಮ ತೀರ್ಮಾನವನ್ನು ಕುರಿತು ಅದು ನಿರಾಕರಣಾಧಿಕಾರವನ್ನು (ವೀಟೋ) ಚಲಾಯಿಸಬಹುದು ಎಂದು ಭಾವಿಸಿಕೊಳ್ಳುವಂತೆ ಮುಸ್ಲಿಮ್ ಲೀಗ್‌ಗೆ ಪ್ರೋತ್ಸಾಹವನ್ನು ಕೊಡಲಾಗುತ್ತಿದೆ. ವೀಟೋ ಅಧಿಕಾರವನ್ನು ಮುಸ್ಲಿಮ್ ಲೀಗ್‌ನ ಕೈಗಳಿಗೆ ಒಂದಲ್ಲ ಒಂದು ರೀತಿಯಲ್ಲಿ ಮತ್ತೆ ಕೊಡಲಾಗುತ್ತಿದೆ. ಈ ಮಹಾನ್ ಸಭೆಯ ಭಾವೀ ಚಟುವಟಿಕೆಗಳಿಗೆ ಬೆದರಿಕೆಯೊಡ್ಡುತ್ತಿರುವ ಅಪಾಯ ಇದಾಗಿದೆ. ಮಾನ್ಯರೆ, ನಾನು ವಿವರವಾಗಿ ಚರ್ಚಿಸಲು ಹೋಗುವುದಿಲ್ಲ. ಏಕೆಂದರೆ ಬ್ರಿಟಿಷ್ ಹೇಳಿಕೆಗಳ ವಿವಿಧ ಉಪಬಂಧಗಳನ್ನು ಕುರಿತು ನಾನು ಚರ್ಚಿಸಲು ಇದು ಸಮಯವೂ ಅಲ್ಲ ಅಥವಾ ಸಂದರ್ಭವೂ ಅಲ್ಲ. ಆದರೆ ಖಂಡಿತವಾಗಿಯೂ ನಾನು ಇಷ್ಟನ್ನು ಹೇಳುತ್ತೇನೆ: "ಸದ್ಯದ ಸಮಯದಲ್ಲಿ ಈ ಸಂವಿಧಾನ ರಚನಾಸಭೆಯು ಬ್ರಿಟಿಷರ ಒಂದು ಸೃಷ್ಟಿಯಾಗಿದ್ದರೂ, ಒಂದು ಸಲ ಅದು ಅಸ್ತಿತ್ವಕ್ಕೆ ಬಂದಿತೆಂದರೆ ಅದಕ್ಕೆ ಸಂಕಲ್ಪವಿದ್ದರೆ, ತನ್ನ ಹಕ್ಕನ್ನು ದೃಢವಾಗಿ ಹೇಳುವ ಅಧಿಕಾರವನ್ನು ಹೊಂದಿರುತ್ತದೆ. ಜಾತಿ, ಮತ, ಪಂಥ ಅಥವಾ ಸಮುದಾಯ ಏನೇ ಆಗಿರಲಿ ಭಾರತದ ಜನರ ಹಿತಕ್ಕಾಗಿ, ಭಾರತದ ಸ್ವಾತಂತ್ರ್ಯವನ್ನು ಗಳಿಸಲು ಯಾವುದು ಉತ್ತಮವೋ ಮತ್ತು ಯುಕ್ತವೋ ಅದನ್ನು ಮಾಡುತ್ತದೆ. (ಕೇಳಿ, ಕೇಳಿ!)

ಈಗ, ಮಾನ್ಯರೆ, ನಾವು ಹೇಳಿದ್ದೇವೆ, ಹೇಗೇ ಆದರೂ ಭಾರತದ ರಾಷ್ಟ್ರೀಯ ಕಾಂಗ್ರೆಸ್ ಹೇಳಿದೆ– ಏಕೆಂದರೆ ಸಂಧಾನಗಳು ನಡೆದ ಪ್ರಮುಖ ಪಕ್ಷಗಳಲ್ಲಿ ಅದು ಒಂದು– ಏನೆಂದರೆ ಅವರು ಮೇ ೧೬ರ ಸಂಪುಟ ನಿಯೋಗ ಯೋಜನೆಯ ಪರವಾಗಿದ್ದಾರೆ. ನಿನ್ನೆ ಡಾ. ಜಯಕರ್ ಅವರ ಮಾತಿನ ನಡುವೆ ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರು ಎದ್ದು ನಿಂತು ೧೯೪೬ ಮೇ ೧೬ರ ಹೇಳಿಕೆಯ ಆಚೆಗೆ ಕಾಂಗ್ರೆಸ್ ಯಾವುದನ್ನು ಒಪ್ಪಿಕೊಂಡಿಲ್ಲ ಎಂದು ಹೇಳಿದಾಗ ನನ್ನ ಹೃದಯ ಹರ್ಷಗೊಂಡಿತು. (ಹರ್ಷೋದ್ಗಾರಗಳು). ಅದು ಮೂಲಭೂತ ಮಹತ್ತ್ವದ ಒಂದು ಘೋಷಣೆ ಎಂದು ನಾನು ಪರಿಗಣಿಸುತ್ತೇನೆ. ನಾವು ಇಲ್ಲಿ ಏಕಿದ್ದೇವೆ ಎನ್ನುವುದನ್ನು ಸ್ಪಷ್ಟಪಡಿಸಬೇಕಾಗಿದೆ. ನಮ್ಮ ನಿಲುವು ಕೆಲಮಟ್ಟಿಗೆ ಹೀಗಿರಬೇಕೆಂದು

ನಾನು ಹೇಳುತ್ತೇನೆ: ಮೇ ೧೬ ರ ಸಂಪುಟ ನಿಯೋಗ ಯೋಜನೆಗೆ ನಾವು ಒಂದು ಅವಕಾಶವನ್ನು ಕೊಟ್ಟು ನೋಡೋಣ; ಮೇ ೧೬ರ ಯೋಜನೆಯನ್ನು ಆಧರಿಸಿ ಇತರ ಪಕ್ಷಗಳು ಮತ್ತು ಅಂಗಗಳ ಜೊತೆ ನಾವು ಒಂದು ಒಪ್ಪಂದಕ್ಕೆ ಬರಲು ಸಾಧ್ಯವೇ ಎಂದು ಸತ್ಯವಾಗಿ ಮತ್ತು ಪ್ರಾಮಾಣಿಕವಾಗಿ ನೋಡೋಣ. ಆದರೆ ಅನಂತರದ ವ್ಯಾಖ್ಯಾನಗಳು ಏನಾದರೂ ಇದ್ದರೆ, ನಾವು ಅದನ್ನು ಒಪ್ಪಿಕೊಳ್ಳುವುದಿಲ್ಲ. ಅಥವಾ ಯಾವುದಾದರೂ ಪಕ್ಷವು ಯೋಜನೆಯಿಂದ ಬೇರೆ ದಾರಿ ಹಿಡಿದರೆ ಮತ್ತು ಬೇರ್ಪಟ್ಟರೆ, ನಾವು ಮುಂದುವರಿದು, ನಾವು ಬಯಸಿದಂತೆ ಸಂವಿಧಾನವನ್ನು ರಚಿಸುತ್ತೇವೆ.

೧೯೪೬ ಮೇ ೧೬ ರ ಹೇಳಿಕೆಯ ಒಂದು ಖಂಡಕ್ಕೆ ಸಂಬಂಧಪಟ್ಟಂತೆ ಗಣನೀಯವಾದ ಭಿನ್ನಾಭಿಪ್ರಾಯ ಕಂಡುಬಂದಿದೆ. ಅದು ಗುಂಪುಗಳನ್ನು ರಚಿಸುವುದಕ್ಕೆ ಸಂಬಂಧಪಟ್ಟ ಪ್ರಶ್ನೆ. ಈಗ, ಇದರಲ್ಲಿ ತೊಡಗಿಕೊಂಡಿರುವ ಪ್ರಮುಖ ಪಕ್ಷಗಳಲ್ಲಿ ಒಂದಾದ ಕಾಂಗ್ರೆಸ್ ಪಕ್ಷವು ಯಾವ ವ್ಯಾಖ್ಯಾನವನ್ನು ಅಂತಿಮವಾಗಿ ಅದು ಅಂಗೀಕರಿಸುತ್ತದೆ ಎಂದು ತೀರ್ಮಾನಿಸಬೇಕು. ಚಕ್ರವರ್ತಿಯ ಸರ್ಕಾರವು ನೀಡಿದ ವ್ಯಾಖ್ಯಾನವು ಅಂಗೀಕೃತವಾಗದಿದ್ದರೆ ಮತ್ತು ಹೇಳಿಕೆಯ ಆ ಭಾಗದ ಮೇಲೆ ಕಾಂಗ್ರೆಸ್ ಮಾಡಿದ ವ್ಯಾಖ್ಯಾನವು ಸರಿ ಎಂದು ಕಾಂಗ್ರೆಸ್ ಪರಿಗಣಿಸಿದರೆ, ಆಗ ಸಹಜವಾಗಿಯೇ ಒಂದು ಬಿಕ್ಕಟ್ಟು ಉದ್ಭವಿಸಹುದು. ಈ ನಿರ್ಣಯದ ಮೇಲಿನ ಚರ್ಚೆಯಷ್ಟೇ ಅಲ್ಲದೆ ಆ ಪ್ರಶ್ನೆಯನ್ನು ಕುರಿತೂ ನಿರ್ಧಾರವನ್ನು ಕೈಗೊಳ್ಳುವುದು ವಿಳಂಬವಾದಷ್ಟು ಈ ಸದನದ ನಡವಳಿಗಳಿಗೆ ಸಂಬಂಧಿಸಿದಂತೆ, ಅವಾಸ್ತವಿಕತೆಯ ವಾತಾವರಣವೂ ಹೆಚ್ಚಾಗುತ್ತದೆ. ಆದರೆ ಆ ಪ್ರಶ್ನೆಯು ನಿರ್ಧಾರವಾದ ಮೇಲೆ, ಫೆಡರಲ್ ನ್ಯಾಯಾಲಯಕ್ಕೆ ವಹಿಸಿಕೊಟ್ಟಿರಲಿ ಅಥವಾ ಇಲ್ಲದಿರಲಿ, ನಾನು ಆ ವಿವರಕ್ಕೆ ಹೋಗಬೇಕಾಗಿಲ್ಲ, ಒಂದು ಪಕ್ಷ ಚಕ್ರವರ್ತಿಯ ಸರ್ಕಾರದ ವ್ಯಾಖ್ಯಾನವು ಅಂಗೀಕೃತವಾಯಿತೆಂದರೆ, ಆಗ ನಾವು ಮುಂದುವರಿಯಬಹುದು. ನಮ್ಮ ಕೆಲಸದಲ್ಲಿ ನಾವು ಮುಂದುವರಿಯುತ್ತೇವೆ. ಮುಸ್ಲಿಮ್ ಲೀಗ್ ಬರಬಹುದು ಅಥವಾ ಬರದೇ ಇರಬಹುದು. ಅದು ಬಂದರೆ ಒಳ್ಳೆಯದು. ಅದು ಬರದೇ ಇದ್ದರೂ ಕೂಡ ಭಾರತದ ಸ್ವಾತಂತ್ರ್ಯವನ್ನು ಕುಂಠಿತಗೊಳಿಸಲಾರದು. ನಾವು ಈ ಸಂವಿಧಾನ ರಚನಾಸಭೆಯ ನಮ್ಮ ಕಾರ್ಯಕಲಾಪವನ್ನು ಮುಂದುವರಿಸಿಕೊಂಡು ಹೋಗಲು ಹಕ್ಕು ಕೇಳಿಕೆ ಮಾಡಬೇಕು. ಮಾನ್ಯರೆ, ಒಂದು ಬಿಕ್ಕಟ್ಟು ಉದ್ಭವಿಸಿದರೆ, ನನ್ನ ಕಾಣ್ಕೆಯ ಪ್ರಕಾರ ಅದು ಉದ್ಭವಿಸುವ ಸಂಭವವಿದೆ, ನಮ್ಮ ದೇಶವು ಸ್ವತಂತ್ರವಾಗಬೇಕಾದರೆ ಅದು ಸಾಂವಿಧಾನಿಕವಾದ ವಿಧಾನಗಳಿಗೆ ಅನುಗುಣವಾಗಿ ಆಗುವುದಿಲ್ಲ. ಕಳೆದ ಕೆಲವು ದಿನಗಳಲ್ಲಿ ಆದ ಬೆಳವಣಿಗೆಗಳ ದೃಷ್ಟಿಯಿಂದ ನಮ್ಮ ಕೆಲಸವನ್ನು ಅಷ್ಟೇನೂ ಸುಲಭವಾಗಿ ಮಾಡಲಾಗುವುದಿಲ್ಲ. ಆದರೆ ನಾನು ಒತ್ತಿಹೇಳಬೇಕಾದುದೇನೆಂದರೆ ಏನನ್ನು ಮಾಡಬೇಕಾಗಿದೆಯೋ ಅದನ್ನು ಈ ಸಂವಿಧಾನ ರಚನಾಸಭೆ ಎಂಬ ಸಂಸ್ಥೆಯ ಮೂಲಕವೇ ಮಾಡಬೇಕೇ ವಿನಾ ಬೇರೆ ಯಾವುದರಿಂದಲೂ ಅಲ್ಲ. ಅಂತಿಮವಾಗಿ ನಾವು ಕಾರ್ಯನಿರತವಾಗಬೇಕು ಮತ್ತು ಒಂದು ಸಂವಿಧಾನವನ್ನು ರಚಿಸಬೇಕು, ಜಗತ್ತಿನ ಅಭಿಪ್ರಾಯದ ನ್ಯಾಯಾಲಯದ ಮುಂದೆ ಅದನ್ನು ಮಂಡಿಸಲು ಸಮರ್ಥರಾಗಬೇಕು, ಮತ್ತು ಭಾರತದ ಅಲ್ಪಸಂಖ್ಯಾತರು ಮತ್ತು ಎಲ್ಲರನ್ನೂ ಸೇರಿಸಿದ ಭಾರತದ ಜನರನ್ನು ನ್ಯಾಯಸಮ್ಮತವಾಗಿ ಹಾಗೂ ನಿಷ್ಪಕ್ಷಪಾತವಾಗಿ ನೋಡಿಕೊಂಡಿದ್ದೇವೆ ಎಂದು ಪ್ರತಿಯೊಬ್ಬರಿಗೂ ಸಂತುಷ್ಟಗೊಳಿಸಬೇಕು.

ಅಷ್ಟಕ್ಕೂ ದಕ್ಷಿಣ ಆಫ್ರಿಕಕ್ಕೆ ಸಂಬಂಧಿಸಿದ ಪ್ರಶ್ನೆ ಏನಾಯಿತು? ಇಂದು ನಮ್ಮ ನಡುವೆ ಗೌರವಾನ್ವಿತ ಶ್ರೀಮತಿ ಪಂಡಿತ್ ಅವರು ಇದ್ದಾರೆ. ಮಹಾನ್ ವಿಜಯದ ಅನಂತರ ಅವರು ತಮ್ಮ ಮಾತೃಭೂಮಿಗೆ ಮರಳಿದ್ದಾರೆ. ಆದರೆ ಅಲ್ಲೂ ಕೂಡ ಅವರಿಗೆ ನಮ್ಮ ಸ್ವಯಂ ನಿಯೋಜಿತ ಧರ್ಮದರ್ಶಿ ಗ್ರೇಟ್ ಬ್ರಿಟನ್ನಿನಲ್ಲಿರುವ ಚಕ್ರವರ್ತಿಯ ಸರ್ಕಾರದಿಂದ ಬೆಂಬಲ ದೊರೆಯಲಿಲ್ಲ. ದಿಟದಲ್ಲಿ ಗ್ರೇಟ್ ಬ್ರಿಟನ್ ಕುರಿತಂತೆ ಹೇಳುವುದಾದರೆ ಭಾರತದ ವಿರುದ್ಧವೇ ಮತ ಚಲಾವಣೆಯಾಯಿತು. ಆದರೆ ಶ್ರೀಮತಿ ಪಂಡಿತ್ ಗೆದ್ದರು. ಜಗತ್ತಿನ ಅಭಿಪ್ರಾಯದ ನ್ಯಾಯಾಲಯದ ಮುಂದೆ ಭಾರತದ ನಿಯೋಗವು ಗೆದ್ದಿತು. ಸಂವಿಧಾನ ರಚನಾಸಭೆಗೆ ಸಂಬಂಧಿಸಿದ

ಪ್ರಕರಣ ಕೂಡ ಅದೇ ರೀತಿಯಲ್ಲಿ ಆಗಬಹುದು. ನಾವು ಎರಡೂ ಕೈಗಳಲ್ಲಿ ಧೈರ್ಯವನ್ನು ತೆಗೆದುಕೊಂಡು, ಎಲ್ಲರಿಗೂ ನ್ಯಾಯಸಮ್ಮತವಾದ ಮತ್ತು ನಿಷ್ಪಕ್ಷಪಾತವಾದ ಸಂವಿಧಾನವನ್ನು ರಚಿಸಿದರೆ, ಆಗ ಇದನ್ನು ಸ್ವತಂತ್ರ ಹಾಗೂ ಸಾರ್ವಭೌಮ ಭಾರತದ ಗಣರಾಜ್ಯದ ಪ್ರಥಮ ಸಂಸತ್ತಿನ ಸಂವಿಧಾನ ರಚನಾಸಭೆಯೆಂದು, ಅಗತ್ಯ ಕಂಡರೆ, ಘೋಷಿಸಲು ಸಮರ್ಥರಾಗುತ್ತೇವೆ. (ಉಚ್ಚಸ್ವರದ ಹರ್ಷೋದ್ಗಾರಗಳು) ಆಗ ನಾವು ನಮ್ಮದೇ ರಾಷ್ಟ್ರೀಯ ಸರ್ಕಾರವನ್ನು ರಚಿಸಲು ಸಮರ್ಥರಾಗಬಹುದು ಮತ್ತು ನಮ್ಮ ತೀರ್ಮಾನವನ್ನು ಈ ನಾಡಿನ ಜನರ ಮೇಲೆ ವಿಧಿಸಬಹುದು. ಕೆಲವು ನಿಮಿಷಗಳ ಹಿಂದೆ ನಾನು ಹೇಳಿದಂತೆ ನಮಗೆ ಮಂಜೂರಾತಿ ನೀಡುವವರು ಭಾರತದ ಜನಸಮುದಾಯ, ಆದ್ದರಿಂದ ನಾವು ನಮ್ಮ ಅಂತಿಮವಾದ ನಿವೇದನೆಯನ್ನು ಮಾಡಿಕೊಳ್ಳಬೇಕಾಗಿರುವುದು ನಮ್ಮ ದೇಶದ ಜನರ ಬಳಿ. ಮಾನ್ಯರೆ, ನಾವು ಅಲ್ಪಸಂಖ್ಯಾತರನ್ನು ಕುರಿತು ಮಾತನಾಡುವಾಗ ಭಾರತದಲ್ಲಿನ ಏಕಮಾತ್ರ ಅಲ್ಪಸಂಖ್ಯಾತರನ್ನು ಮುಸ್ಲಿಮ್ ಲೀಗ್ ಪ್ರತಿನಿಧಿಸುತ್ತದೆ ಎಂಬಂತೆ ಸೂಚಿಸಲಾಗುತ್ತಿದೆ. ಆದರೆ ಅದು ಸತ್ಯವಲ್ಲ. ಬೇರೆ ಅಲ್ಪಸಂಖ್ಯಾತರೂ ಇದ್ದಾರೆ. ಎಲ್ಲ ದುರಂತ ಯಾತನೆಗಳಿಂದ ನರಳುತ್ತಿರುವ ಬಂಗಾಳದಿಂದ ಬಂದವನಾಗಿ ಈ ಸದನಕ್ಕೆ ನಾನು ನೆನಪಿಸಲು ಬಯಸುವುದೇನೆಂದರೆ ಭಾರತದ ಕನಿಷ್ಠ ನಾಲ್ಕು ಪ್ರಾಂತ್ಯಗಳಲ್ಲಿ ಹಿಂದೂಗಳು ಕೂಡ ಅಲ್ಪಸಂಖ್ಯಾತರಾಗಿದ್ದಾರೆ. ಅಲ್ಪಸಂಖ್ಯಾತರ ಹಕ್ಕುಗಳನ್ನು ಸಂರಕ್ಷಿಸಬೇಕೆಂದಿದ್ದರೆ ಪ್ರಾಂತ್ಯದಿಂದ ಪ್ರಾಂತ್ಯಕ್ಕೆ ಬದಲಾಗುವ ಪ್ರತಿಯೊಂದು ಅಲ್ಪಸಂಖ್ಯಾತರ ಸಮುದಾಯಕ್ಕೂ ಅಂತಹ ಹಕ್ಕುಗಳು ದೊರಕುವಂತೆ ನೋಡಿಕೊಳ್ಳಬೇಕು.

ಕಳೆದ ರಾತ್ರಿಯಷ್ಟೇ ಲಾರ್ಡ ಸೈಮನ್ ಒಂದು ಬೆಚ್ಚಿಬೀಳಿಸುವ ಘೋಷಣೆಯನ್ನು ಮಾಡಿರುವುದೇನೆಂದರೆ ದೆಹಲಿಯಲ್ಲಿ ಸಭೆ ಸೇರಿರುವ ಸಂವಿಧಾನ ರಚನಾಸಭೆಯಲ್ಲಿ ಜಾತ್ಯಸ್ಥ ಹಿಂದೂಗಳು ಮಾತ್ರ ಇದ್ದಾರೆ. ಇಂಗ್ಲೆಂಡಿನಲ್ಲಿ ಕಳೆದ ಕೆಲವು ದಿನಗಳಿಂದ ಎಷ್ಟೊಂದು ಸುಳ್ಳು ಹೇಳಿಕೆಯನ್ನು ಹೇಳಲಾಗುತ್ತಿದೆಯೆಂದರೆ ಅವೆಲ್ಲವುಗಳ ಲೆಕ್ಕ ಇಟ್ಟುಕೊಳ್ಳುವುದೇ ಕಷ್ಟವಾಗಿದೆ. ಇಂದು ಈ ಸದನದಲ್ಲಿ ಯಾರು ಪ್ರತಿನಿಧಿಸಲ್ಪಟ್ಟಿದ್ದಾರೆ? ಇಲ್ಲಿ ಹಿಂದೂಗಳಿದ್ದಾರೆ ಕೆಲವು ಮುಸ್ಲಿಮರೂ ಇದ್ದಾರೆ. ಒಂದು ಮುಸ್ಲಿಮ್ ಪ್ರಾಂತ್ಯದಿಂದ ಕನಿಷ್ಠಪಕ್ಷ ಮುಸ್ಲಿಮ್ ಪ್ರತಿನಿಧಿಗಳಿದ್ದಾರೆ. ಮುಸ್ಲಿಮ್ ಲೀಗ್‌ನ ವಿರೋಧದ ನಡುವೆಯೂ, ಅಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರದ ಪ್ರತಿನಿಧಿಗಳಾಗಿ ಅವರು ಬಂದಿದ್ದಾರೆ. ಅಸ್ಸಾಮ್ ಪ್ರಾಂತ್ಯದ ಪ್ರತಿನಿಧಿಗಳಿದ್ದಾರೆ. ಅದು ಬರಲಿರುವ ಶ್ರೀ ಜಿನ್ನಾ ಅವರ ಪಾಕಿಸ್ತಾನದ ಅವಿಭಾಜ್ಯ ಅಂಗವಾಗಿದೆ ಎಂದು ಭಾವಿಸಲಾಗಿದೆ. ಆ ಪ್ರಾಂತ್ಯ ಕೂಡ ಅಲ್ಲಿನ ಬಹುಪಾಲು ಜನರಿಂದ ಅಧಿಕೃತವಾಗಿ ಪ್ರತಿನಿಧಿತವಾಗಿದೆ. ಇನ್ನು ಅನುಸೂಚಿತ ಜಾತಿಗಳಿವೆ. ಸಂವಿಧಾನ ರಚನಾಸಭೆಗೆ ಚುನಾಯಿತರಾದ ಎಲ್ಲ ಅನುಸೂಚಿತ ಸದಸ್ಯರೂ ಇಲ್ಲಿದ್ದಾರೆ. ನಮ್ಮೊಡನೆ ಎಲ್ಲ ವಿಷಯಗಳಲ್ಲಿ ಸಮ್ಮತಿಸದಿರಬಹುದಾದ ಡಾ. ಅಂಬೇಡ್ಕರ್ ಕೂಡ ಇಲ್ಲಿ ಉಪಸ್ಥಿತರಾಗಿದ್ದಾರೆ. (ಚಪ್ಪಾಳೆ). ನಮಗೆ ಅವರನ್ನು ಪರಿವರ್ತಿಸಲು ಅಥವಾ ಪುನರ್ ಪರಿವರ್ತಿಸಲು ಸಾಧ್ಯವಾಗುತ್ತದೆ ಮತ್ತು ಅವರನ್ನು ನಮ್ಮ ಕಡೆಗೆ ಕರೆದುಕೊಳ್ಳಲು ಸಾಧ್ಯವಾಗುತ್ತದೆ ಎಂದು ನಾನು ಭಾವಿಸಿಕೊಳ್ಳುತ್ತೇನೆ. (ಮರು ಚಪ್ಪಾಳೆ). ಅವರು ಯಾರನ್ನು ಪ್ರತಿನಿಧಿಸುತ್ತಾರೋ ಅವರ ಹಿತಾಸಕ್ತಿಗಳನ್ನು ವಿವರವಾಗಿ ಚರ್ಚಿಸಲು ನಾವು ಕೈಗೆತ್ತಿಕೊಂಡಾಗ ಇದು ಸಾಧ್ಯವಾಗಬಹುದು. ಇತರ ಅನುಸೂಚಿತ ಜಾತಿಯ ಸದಸ್ಯರು ಕೂಡ ಇಲ್ಲಿ ಉಪಸ್ಥಿತರಾಗಿದ್ದಾರೆ. ಸಿಖ್ಖರು ಇಲ್ಲಿ ಉಪಸ್ಥಿತರಾಗಿದ್ದಾರೆ; ಅವರೆಲ್ಲರೂ ಇದ್ದಾರೆ. ಆಂಗ್ಲೋ ಇಂಡಿಯನ್ನರು ಉಪಸ್ಥಿತರಾಗಿದ್ದಾರೆ, ಹಾಗೆಯೇ ಭಾರತೀಯ ಕ್ರೈಸ್ತರೂ ಇದ್ದಾರೆ. ಹೀಗಿರುತ್ತ, ಲಾರ್ಡ ಸೈಮನ್ ಅವರ ಬಾಯಿಯಲ್ಲಿ ಆ ಸುಳ್ಳು ಹೇಗೆ ಬಂತು (ಒಂದು ಧ್ವನಿ: ಪಾರ್ಸಿಗಳೂ ಇಲ್ಲಿ ಉಪಸ್ಥಿತರಾಗಿದ್ದಾರೆ.) ಹೌದು ಕಡೆಯದಾದರೂ ಅಮುಖ್ಯವಲ್ಲದ್ದು ಎಂದರೆ ಪಾರ್ಸಿಗಳು ಕೂಡ ಇಲ್ಲಿ ಉಪಸ್ಥಿತರಾಗಿದ್ದಾರೆ. ಹೀಗಿರುತ್ತ ಲಾರ್ಡ್ ಸೈಮನ್ ಅಥವಾ ಬೇರೆ ಯಾರದೋ ಬಾಯಲ್ಲಿ ಅಂತಹ ಸುಳ್ಳು ಹೇಗೆ ಬಂತು? (ಒಂದು ಧ್ವನಿ: ಬುಡಕಟ್ಟಿನ ಪ್ರತಿನಿಧಿಗಳು ಇಲ್ಲಿದ್ದಾರೆ.) ಬುಡಕಟ್ಟಿನ ಪ್ರದೇಶಗಳು ಮತ್ತು ಆದಿವಾಸಿಗಳನ್ನು ಇಲ್ಲಿ ನನ್ನ ಸ್ನೇಹಿತರು ಶ್ರೀ ಜೆ. ಸಿಂಗ್ ಪ್ರತಿನಿಧಿಸುತ್ತಾರೆ. ದಿಟದಲ್ಲಿ,

ಮುಸ್ಲಿಮ್ ಲೀಗ್ ಅನ್ನು ಹೊರತುಪಡಿಸಿದರೆ ಭಾರತೀಯ ಸಂವಿಧಾನ ರಚನಾಸಭೆಗೆ ಚುನಾಯಿತರಾದ ಪ್ರತಿಯೊಂದು ಅಂಗವೂ ಇಲ್ಲಿದೆ. ಮುಸ್ಲಿಮ್ ಲೀಗ್ ಒಂದು ವಿಭಾಗವನ್ನು ಪ್ರತಿನಿಧಿಸುತ್ತದೆ. ಅದು ಒಂದು ದೊಡ್ಡ ವಿಭಾಗ ಎಂದು ನಾನು ಭಾವಿಸುತ್ತೇನೆ. ಪ್ರಾಯಃ ಮುಸ್ಲಿಮ್ ಸಮುದಾಯದ ಬಹಳ ವಿಶಾಲವಾದ ವಿಭಾಗ ಅದಾಗಿರಬಹುದು. ಆದರೆ ಈ ಸಂವಿಧಾನ ರಚನಾಮಂಡಲಿಯಲ್ಲಿ ಜಾತ್ಯಸ್ಥ ಹಿಂದೂಗಳು ಎಂಬ ಒಂದು ವಿಭಾಗದ ಜನರು ಮಾತ್ರ ಇದ್ದಾರೆ ಎಂದು ಸೂಚಿಸುವುದು ಒಂದು ಸಂಪೂರ್ಣವಾದ ಸುಳ್ಳು. ಬೇರೆಯವರನ್ನು ದಮನಮಾಡುವುದಕ್ಕಾಗಿ ಮಾತ್ರ ಜಾತ್ಯಸ್ಥ ಹಿಂದೂಗಳು ಜನ್ಮತಳೆದಿದ್ದಾರೆ ಎಂಬಂತೆ, ಭಾರತದ ಹಿತಾಸಕ್ತಿಗಳಿಗೆ ವಿಪತ್ಕಾರಕವಾದ ಏನನ್ನೋ ಮಾಡಲು ಅವರು ಸಂಚುಮಾಡುತ್ತಿದ್ದಾರೆ ಎಂಬಂತೆ ಬಿಂಬಿಸುವುದು ಒಂದು ಸಂಪೂರ್ಣವಾದ ಸುಳ್ಳು. ಈಗ ಭಾರತದ ಜನಸಮುದಾಯದ ಒಂದು ವಿಭಾಗದವರು ಸಂವಿಧಾನ ರಚನಾಸಭೆಗೆ ಗೈರುಹಾಜರಾಗಬೇಕೆಂದು ಆಯ್ಕೆಮಾಡಿಕೊಂಡರೆ, ಭಾರತವು ಒಂದು ಗುಲಾಮ ದೇಶವಾಗಿಯೇ ಮುಂದುವರಿಯಬೇಕು ಎಂದು ಸೂಚಿಸಲಾಗಿದೆಯೆ? (ಒಂದು ಧ್ವನಿ: “ಇಲ್ಲ”). ಆ ಉತ್ತರವನ್ನು ಇಂದು ಗೈರುಹಾಜರಾಗಿರುವ ಈ ದೇಶದ ಜನರಿಗೆ ಮತ್ತು ಅವರನ್ನು ಪ್ರಚೋದಿಸುವವರಿಗೂ ಕೂಡ ಕೊಡಬೇಕಾಗಿದೆ. ಮಾನ್ಯರೆ, ನಾವು ಬ್ರಿಟಿಷರಿಗೆ ಖಡಕ್ಕಾಗಿ ಹೀಗೆ ಹೇಳಬೇಕೆಂದು ಬಯಸುತ್ತೇನೆ: “ನಾವು ನಿಮ್ಮೊಡನೆ ಸ್ನೇಹದಿಂದ ಉಳಿಯಲು ಇಷ್ಟಪಡುತ್ತೇವೆ. ನೀವು ಈ ದೇಶದಲ್ಲಿ ನಿಮ್ಮ ಜೀವನ ಪಥವನ್ನು ವ್ಯಾಪಾರಿಗಳಾಗಿ ಪ್ರಾರಂಭಿಸಿದಿರಿ. ಮಹಾನ್ ಮೊಘಲರಿಗೆ ಮುಂಚೆ ನೀವು ಇಲ್ಲಿಗೆ ಯಾಚಕರಾಗಿ ಬಂದಿರಿ. ನೀವು ಈ ದೇಶದ ಸಂಪತ್ತನ್ನು ದೋಚಲು ಬಯಸಿದ್ದಿರಿ. ಅದೃಷ್ಟವು ನಿಮಗೆ ಅನುಕೂಲಕರವಾಗಿತ್ತು. ಸುಳ್ಳುಪತ್ರ ಸೃಷ್ಟನೆ, ಕುಟಿಲ ತಂತ್ರ ಮತ್ತು ಬಲಾತ್ಕಾರದಿಂದ ನೀವು ಈ ದೇಶದಲ್ಲಿ ನಿಮ್ಮ ಸರ್ಕಾರವನ್ನು ಸ್ಥಾಪಿಸುವಲ್ಲಿ ಯಶಸ್ವಿಯಾದಿರಿ– ಇವು ಎಲ್ಲ ಈಗ ಇತಿಹಾಸದ ವಿಷಯಗಳಾಗಿವೆ. ಆದರೆ ಈ ದೇಶದ ಜನರು ಬುದ್ಧಿಪೂರ್ವಕವಾಗಿ ಇದಕ್ಕೆ ಸಹಕಾರ ನೀಡಲಿಲ್ಲ. ನೀವು ಪ್ರತ್ಯೇಕ ಮತದಾರರ ಸಮೂಹವನ್ನು ಜಾರಿಗೆ ತಂದಿರಿ. ನೀವು ಭಾರತದ ರಾಜಕಾರಣದಲ್ಲಿ ಧರ್ಮವನ್ನು ಸೇರಿಸಿದಿರಿ. ಅದನ್ನು ಭಾರತೀಯರು ಮಾಡಲಿಲ್ಲ. ಈ ದೇಶದಲ್ಲಿ ನಿಮ್ಮ ಆಡಳಿತವನ್ನು ಶಾಶ್ವತಗೊಳಿಸಲು ನೀವು ಅದನ್ನು ಮಾಡಿದಿರಿ. ನೀವು ಈ ದೇಶದಲ್ಲಿ ಪಟ್ಟಭದ್ರ ಹಿತಾಸಕ್ತಿಗಳನ್ನು ಸೃಷ್ಟಿಸಿದಿರಿ. ಅವರು ಈಗ ಸಾಕಷ್ಟು ಬಲಶಾಲಿಗಳಾಗಿದ್ದಾರೆ. ಅವರು ಬುದ್ಧಿಪೂರ್ವಕವಾಗಿ ಸಹಕಾರ ನೀಡಿದರೂ ಅವರನ್ನು ನಾಶಮಾಡಲು ಸಾಧ್ಯವಾಗುವುದಿಲ್ಲ. ಇಷ್ಟೆಲ್ಲ ಆದಮೇಲೂ ಭವಿಷ್ಯದಲ್ಲಿ ನೀವು ಮತ್ತು ಭಾರತ ಸ್ನೇಹಿತರಾಗಿ ಉಳಿಯಬೇಕೆಂದು ನೀವು ನಿಜವಾಗಿಯೂ ಬಯಸಿದರೆ ನಾವು ನಿಮ್ಮ ಸಹಕಾರ ಹಸ್ತವನ್ನು ಸ್ವೀಕರಿಸಲು ಸಿದ್ಧವಾಗಿದ್ದೇವೆ. ಆದರೆ ದೇವರು ಮೆಚ್ಚಲಿ! ಭಾರತದ ಆಂತರಿಕ ಸಮಸ್ಯೆಗಳಲ್ಲಿ ತಲೆಹಾಕುವುದು ಬ್ರಿಟಿಷ್ ಸರ್ಕಾರದ ವ್ಯವಹಾರವಲ್ಲ. ಪ್ರತಿಯೊಂದು ದೇಶಕ್ಕೂ ತನ್ನದೇ ಆದ ಆಂತರಿಕ ಸಮಸ್ಯೆಗಳಿರುತ್ತವೆ. ದುರದೃಷ್ಟವಶಾತ್ ಭಾರತಕ್ಕೂ ತನ್ನದೇ ಆದ ಆಂತರಿಕ ಸಮಸ್ಯೆಗಳಿವೆ. ಆ ಆಂತರಿಕ ಸಮಸ್ಯೆಗಳನ್ನು ಅಂತಿಮವಾಗಿ ಈ ದೇಶದ ಜನರು ಇತ್ಯರ್ಥಮಾಡಿಕೊಳ್ಳಬೇಕು.” ಮಾನ್ಯರೆ, ನಾವು ಈಗ ಒಂದು ಸಂವಿಧಾನವನ್ನು ರಚಿಸುತ್ತಿಲ್ಲವಾದ್ದರಿಂದ ನಾವು ಭವಿಷ್ಯದಲ್ಲಿ ಮಾಡಬಯಸಿರುವ ಸಂಗತಿಗಳ ಒಂದು ಸಾಮಾನ್ಯ ರೂಪರೇಷೆಯನ್ನು ರೂಪಿಸುತ್ತಿರುವುದರಿಂದ, ಈ ಸದನವು ಸಂಕುಚಿತ ತಾಂತ್ರಿಕತೆಗಳನ್ನು ಕೇಳಲು ನಿರಾಕರಿಸುತ್ತದೆ. ಎಲ್ಲ ತೊಂದರೆಗಳು ಮತ್ತು ಅಡಚಣೆಗಳಿದ್ದರೂ ನಮ್ಮ ಕೆಲಸದಲ್ಲಿ ನಾವು ಮುನ್ನಡಿಯಿಡೋಣ ಮತ್ತು ಒಗ್ಗಟ್ಟಿನಿಂದ ಕೂಡಿದ ಹಾಗೂ ಬಲಿಷ್ಠವಾದ ಆ ಮಹಾನ್ ಭಾರತವನ್ನು ಸೃಷ್ಟಿಸಲು ನೆರವಾಗೋಣ. ಅದು ಈ ಸಮುದಾಯ ಅಥವಾ ಇನ್ನೊಂದು, ಈ ವರ್ಗ ಅಥವಾ ಇನ್ನೊಂದು ಎಂದು ಪಕ್ಷಪಾತ ಮಾಡದೆ ಈ ಮಹಾನ್ ದೇಶದಲ್ಲಿ ವಾಸಮಾಡುತ್ತಿರುವ ಪ್ರತಿಯೊಂದು ವ್ಯಕ್ತಿ, ಪುರುಷ, ಸ್ತ್ರೀ ಮತ್ತು ಮಗುವಿಗೂ ಜಾತಿ, ಮತ, ಪಂಥ ಅಥವಾ ಸಮುದಾಯ ಎಂದು ನೋಡದೆ ಸಮಾನ ಅವಕಾಶ, ಸಮಾನ ಸ್ವಾತಂತ್ರ್ಯ, ಸಮಾನ ಸ್ಥಾನಮಾನವನ್ನು ನೀಡುತ್ತದೆ. ಆದ್ದರಿಂದ ಅವರು ತಮ್ಮ ಶ್ರೇಷ್ಠ

ಪ್ರತಿಭೆಗೆ ತಕ್ಕಂತೆ ಬೆಳೆಯುತ್ತಾರೆ ಮತ್ತು ನಮ್ಮ ಈ ಪ್ರೀತಿಪಾತ್ರ ಸಾಮಾನ್ಯ ಮಾತೃಭೂಮಿಗೆ ಶ್ರದ್ಧೆಯಿಂದ ಹಾಗೂ ನಿರ್ಭಯವಾಗಿ ಸೇವೆ ಸಲ್ಲಿಸುತ್ತಾರೆ.

**ಮಾನ್ಯ ಅಧ್ಯಕ್ಷರು** : ಡಾ. ಅಂಬೇಡ್ಕರ್.

**ಡಾ. ಬಿ.ಆರ್. ಅಂಬೇಡ್ಕರ್** (ಬಂಗಾಳ : ಸಾಮಾನ್ಯ) : ಮಾನ್ಯ ಅಧ್ಯಕ್ಷರೆ, ಈ ನಿರ್ಣಯವನ್ನು ಕುರಿತು ಮಾತನಾಡಲು ನನ್ನನ್ನು ಕರೆದಿದ್ದಕ್ಕೆ ನಾನು ದಿಟವಾಗಿಯೂ ನಿಮಗೆ ಕೃತಜ್ಞನಾಗಿದ್ದೇನೆ. ಆದರೆ ನಿಮ್ಮ ಆಹ್ವಾನವು ನನ್ನ ಪಾಲಿಗೆ ಒಂದು ಅಚ್ಚರಿಯಾಗಿ ಬಂದಿದೆ ಎನ್ನುವುದನ್ನು ನಾನು ಒಪ್ಪಿಕೊಳ್ಳಬೇಕು. ನನಗಿಂತ ಮುಂದೆ ಸುಮಾರು ೨೦ ಅಥವಾ ೨೨ ಮಂದಿ ಇದ್ದಾರೆ ಎಂದುಕೊಂಡಿದ್ದೆ. ಒಂದು ಪಕ್ಷ ನನ್ನ ಸರದಿ ಬಂದಿದ್ದೇ ಆದರೆ ನಾಳೆ ಬಂದೀತು ಎಂದುಕೊಂಡಿದ್ದೆ. ಅದನ್ನೇ ನಾನು ಇಷ್ಟಪಡುತ್ತಿದ್ದೆ. ಏಕೆಂದರೆ ಇಂದು ನಾನು ಯಾವುದೇ ಪೂರ್ವಸಿದ್ಧತೆ ಇಲ್ಲದೆ ಬಂದಿದ್ದೇನೆ. ಈ ಬಗೆಯ ಸಂದರ್ಭದಲ್ಲಿ ಒಂದು ಪೂರ್ಣ ಪ್ರಮಾಣದ ಹೇಳಿಕೆಯನ್ನು ನೀಡಲು ನಾನು ಉದ್ದೇಶಿಸಿದ್ದರಿಂದ ಪೂರ್ವಸಿದ್ಧತೆಯನ್ನು ಮಾಡಿಕೊಂಡು ಬರಲು ನಾನು ಇಷ್ಟಪಡುತ್ತಿದ್ದೆ. ಅಲ್ಲದೆ ನೀವು ಹತ್ತು ನಿಮಿಷಗಳ ಮಿತಿಯನ್ನು ನಿಗದಿಪಡಿಸಿದ್ದೀರಿ. ಈ ಪರಿಮಿತಿಗಳ ನಡುವೆ ನಮ್ಮ ಮುಂದಿರುವ ಈ ನಿರ್ಣಯಕ್ಕೆ ನಾನು ಹೇಗೆ ನ್ಯಾಯ ಸಲ್ಲಿಸಬಲ್ಲೆನೋ ನನಗೆ ತಿಳಿಯದು. ಹೇಗಾದರೂ ಈ ವಿಚಾರವಾಗಿ ನನ್ನ ಆಲೋಚನೆಗಳೇನು ಎನ್ನುವುದನ್ನು ಸಾಧ್ಯವಾದ ಮಟ್ಟಿಗೂ ಕೆಲವೇ ಮಾತುಗಳಲ್ಲಿ ಹೇಳಲು ಯತ್ನಮೀರಿ ಪ್ರಯತ್ನಿಸುತ್ತೇನೆ.

ಮಾನ್ಯ ಅಧ್ಯಕ್ಷರೆ, ನಿನ್ನೆಯಿಂದಲೂ ನಡೆಯುತ್ತಿರುವ ಚರ್ಚೆಯ ಬೆಳಕಿನಲ್ಲಿ ಈ ನಿರ್ಣಯವು ಎರಡು ಭಾಗಗಳಾಗಿ ವಿಭಜನೆಗೊಳ್ಳುತ್ತದೆ ಎನ್ನುವುದು ಸುಸ್ಪಷ್ಟ. ಒಂದು ಭಾಗ ವಿವಾದಾತ್ಮಕ, ಇನ್ನೊಂದು ಭಾಗ ಅವಿವಾದಾತ್ಮಕ. ಅವಿವಾದಾತ್ಮಕವಾದ ಭಾಗವು ಈ ನಿರ್ಣಯದ ಕಂಡಿಕೆ (೫) ರಿಂದ (೭) ರವರೆಗೆ ಇದೆ. ಈ ಕಂಡಿಕೆಗಳು ಈ ದೇಶದ ಭಾವೀ ಸಂವಿಧಾನದ ಉದ್ದೇಶಗಳನ್ನು ಪ್ರತಿಪಾದಿಸಿವೆ. ಪ್ರಖ್ಯಾತ ಸಮಾಜವಾದಿಯಾದ ಪಂಡಿತ್ ಜವಾಹರಲಾಲ್ ನೆಹರು ಅಂತಹವರಿಂದ ಬಂದ ಈ ನಿರ್ಣಯವು ಅವಿವಾದಾತ್ಮಕವಾದುದಾದರೂ ನನ್ನ ಮನಸ್ಸಿಗೆ ಬಹಳ ನಿರಾಶಾದಾಯಕವಾಗಿದೆ ಎನ್ನುವುದನ್ನು ನಾನು ಒಪ್ಪಿಕೊಳ್ಳಬೇಕು. ನಿರ್ಣಯದ ಆ ಭಾಗದಲ್ಲಿ ಮಾಡಿದ್ದಕ್ಕಿಂತ ಇನ್ನೂ ಮುಂದೆ ಅವರು ಹೋಗುತ್ತಾರೆ ಎಂದು ನಾನು ನಿರೀಕ್ಷಿಸಿದ್ದಿರಬೇಕು. ಇತಿಹಾಸದ ಒಬ್ಬ ವಿದ್ಯಾರ್ಥಿಯಾಗಿ, ನಿರ್ಣಯದ ಈ ಭಾಗವನ್ನು ಅಡಕಗೊಳಿಸಬೇಕಾದ ಅಗತ್ಯವಿರಲಿಲ್ಲ ಎಂದು ನಾನು ಭಾವಿಸಿದ್ದಿರಬೇಕು. ನಿರ್ಣಯದ ಆ ಭಾಗವನ್ನು ಓದಿದಾಗ ಫ್ರೆಂಚ್ ಸಂವಿಧಾನ ರಚನಾಸಭೆಯಲ್ಲಿ ಘೋಷಿಸಲಾದ ಮಾನವನ ಹಕ್ಕುಗಳ ಘೋಷಣೆಯಲ್ಲಿ ಒಂದರ ನೆನಪು ನಮಗಾಗುತ್ತದೆ. ಹೆಚ್ಚುಕಡಿಮೆ ೪೫೦ ವರ್ಷಗಳು ಕಳೆದ ಅನಂತರ ಮಾನವನ ಹಕ್ಕುಗಳ ಘೋಷಣೆ ಮತ್ತು ಅದರಲ್ಲಿ ಅಳವಡಿಸಲಾದ ತತ್ತ್ವಗಳು ನಮ್ಮ ಮನೋಧರ್ಮದ ಅವಿಭಾಜ್ಯ ಅಂಗಗಳಾಗಿವೆ. ಜಗತ್ತಿನ ಪ್ರತಿಯೊಂದು ನಾಗರಿಕ ಪ್ರದೇಶದಲ್ಲೂ ಅವು ಆಧುನಿಕ ಮಾನವನ ಮನೋಧರ್ಮದ ಅವಿಭಾಜ್ಯ ಅಂಗಗಳಾಗಿವೆ ಎಂದಷ್ಟೇ ನಾನು ಹೇಳುತ್ತಿಲ್ಲ. ತೀರ ಸಂಪ್ರದಾಯನಿಷ್ಠವಾದ ತನ್ನ ಚಿಂತಾನಾಕ್ರಮದಲ್ಲಿ ಮತ್ತು ಸಾಮಾಜಿಕ ಸಂರಚನೆಯಲ್ಲಿ ತೀರ ಪ್ರಾಚೀನವಾದ ನಮ್ಮ ದೇಶದಲ್ಲಿಯೂ ಕೂಡ ಅದರ ನ್ಯಾಯ ಸಮ್ಮತತೆಯನ್ನು ನಿರಾಕರಿಸುವವರು ಯಾರನ್ನೂ ನಾವು ನೋಡಲಾರೆವು. ಈ ನಿರ್ಣಯ ಮಾಡಿರುವಂತೆ ಅದನ್ನು ಈಗ ಪುನರುಚ್ಚರಿಸುವುದೆಂದರೆ, ಸಂಕ್ಷಿಪ್ತವಾಗಿ, ಶುದ್ಧಾಂಗ ಪಾಂಡಿತ್ಯ ಪ್ರದರ್ಶನವೇ ಸರಿ. ಈ ತತ್ತ್ವಗಳು ನಮ್ಮ ದೃಷ್ಟಿಕೋನದ ಮೌನವಾದ ನಿರ್ದಿಷ್ಟ ಆಧಾರವಾಕ್ಯವಾಗಿದೆ. ಆದ್ದರಿಂದ ನಮ್ಮ ಸಿದ್ಧಾಂತದ ಒಂದು ಭಾಗವಾಗಿ ಅದನ್ನು ಘೋಷಿಸುವುದು ಅನಗತ್ಯವಾಗಿದೆ. ಈ ನಿರ್ಣಯವು ಇತರೆ ಕೆಲವು ಲೋಪಗಳಿಂದಲೂ ನರಳುತ್ತಿದೆ. ನಿರ್ಣಯದ ಈ ಭಾಗವು, ಕೆಲವು ಹಕ್ಕುಗಳನ್ನು ನಿರೂಪಿಸುತ್ತದೆಯಾದರೂ ಪರಿಹಾರಗಳನ್ನು ಕುರಿತು ಏನನ್ನೂ ನುಡಿಯುವುದಿಲ್ಲ. ನಮಗೆಲ್ಲರಿಗೂ ತಿಳಿದಿರುವ

ಸಂಗತಿಯೆಂದರೆ ಪರಿಹಾರಗಳನ್ನು ಒದಗಿಸದಿದ್ದರೆ ಹಕ್ಕುಗಳಿಗೆ ಏನೂ ಬೆಲೆಯೇ ಇರುವುದಿಲ್ಲ. ಹಕ್ಕುಗಳ ಉಲ್ಲಂಘನೆಯಾದಾಗ ಈ ಪರಿಹಾರಗಳ ಮೂಲಕ ಜನರು ತಮಗಾದ ಅನ್ಯಾಯವನ್ನು ಸರಿಪಡಿಸಿಕೊಳ್ಳಲು ಕೋರಬಹುದು. ಪರಿಹಾರಗಳು ಇಲ್ಲಿ ಸಂಪೂರ್ಣವಾಗಿ ಗೈರುಹಾಜರಾಗಿರುವುದನ್ನು ನಾನು ನೋಡುತ್ತಿದ್ದೇನೆ. ಸಾಮಾನ್ಯ ಸೂತ್ರವಾದ 'ಕಾನೂನಿನ ಕ್ರಮಬದ್ಧವಾದ ಪ್ರಕ್ರಿಯೆ ಇಲ್ಲದೆ ಯಾವ ಮನುಷ್ಯನ ಜೀವ, ಸ್ವಾತಂತ್ರ್ಯ ಮತ್ತು ಸ್ವತ್ತನ್ನು ತೆಗೆದುಕೊಳ್ಳುವಂತಿಲ್ಲ' ಎನ್ನುವುದಕ್ಕೆ ಕೂಡ ಈ ನಿರ್ಣಯದಲ್ಲಿ ಸ್ಥಾನ ದೊರೆತಿಲ್ಲ. ಈ ಮೂಲಭೂತ ಉಪಕ್ರಮ ಕೂಡ ಕಾನೂನು ಮತ್ತು ನೀತಿಜ್ಞನಿಗೆ ಬದ್ಧವಾಗಿ ರಚಿತವಾಗುತ್ತದೆ. ನಿಸ್ಸಂಶಯವಾಗಿ ಯಾವುದು ಕಾನೂನು, ಯಾವುದು ನೈತಿಕತೆ ಎನ್ನುವುದನ್ನು ಆಯಾದಿನದ ಕಾರ್ಯಾಂಗವು ನಿರ್ಧರಿಸುತ್ತದೆ. ಒಂದು ಕಾರ್ಯಾಂಗವು ಒಂದು ದೃಷ್ಟಿಯಿಂದ ನೊಡಿದರೆ ಇನ್ನೊಂದು ಕಾರ್ಯಾಂಗವು ಇನ್ನೊಂದು ದೃಷ್ಟಿಯಿಂದ ನೋಡಬಹುದು. ಈ ವಿಷಯವನ್ನು ಆಯಾಕಾಲದ ಕಾರ್ಯಾಂಗಕ್ಕೆ ಬಿಟ್ಟರೆ ಮೂಲಭೂತ ಹಕ್ಕುಗಳ ಪರಿಸ್ಥಿತಿ ಏನಾಗುತ್ತದೋ ಎಂದು ಕರಾರುವಾಕ್ಕಾಗಿ ನಮಗೆ ತಿಳಿಯುವುದಿಲ್ಲ. ಮಾನ್ಯರೆ, ಇಲ್ಲಿ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ನ್ಯಾಯವನ್ನು ಕುರಿತಂತೆ ಹೇಳುವ ಕೆಲವು ಉಪಬಂಧಗಳಿವೆ. ಈ ನಿರ್ಣಯದ ಹಿನ್ನೆಲೆಯಲ್ಲಿ ಒಂದು ವಾಸ್ತವಿಕತೆ ಮತ್ತು ಪ್ರಾಮಾಣಿಕತೆ (ಈ ನಿರ್ಣಯದ ಮಂಡನೆಕಾರದಿಂದ ಬರುತ್ತಿರುವ ರೀತಿಯಲ್ಲಿ ಪ್ರಮಾಣಿಕತೆಯ ಬಗೆಗೆ ನನಗೆ ಸ್ವಲ್ಪವೂ ಅನುಮಾನವಿಲ್ಲ) ಇದ್ದರೆ ನಾನು ಕೆಲವು ಉಪಬಂಧಗಳನ್ನು ನಿರೀಕ್ಷಿಸುತ್ತಿದ್ದೆ. ಆ ಮೂಲಕ ಸರ್ಕಾರವು ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ನ್ಯಾಯವನ್ನು ಒಂದು ವಾಸ್ತವಿಕತೆಯನ್ನಾಗಿ ಮಾಡುವುದು ಸಾಧ್ಯವಾಗುತ್ತಿತ್ತು. ಆ ದೃಷ್ಟಿಕೋನದಿಂದ ಈ ನಿರ್ಣಯವು ಅತ್ಯಂತ ಖಚಿತವಾದ ಪರಿಭಾಷೆಯಲ್ಲಿ ಏನನ್ನು ಹೇಳಬೇಕೆಂದು ನಿರೀಕ್ಷಿಸುತ್ತಿದ್ದೆನೆಂದರೆ, ದೇಶದಲ್ಲಿ ಸಾಮಾಜಿಕ ಮತ್ತು ಆರ್ಥಿಕ ನ್ಯಾಯ ಇರಬೇಕೆಂದಿದ್ದರೆ ಕೈಗಾರಿಕೆಯ ರಾಷ್ಟ್ರೀಕರಣ ಮತ್ತು ಜಮೀನುಗಳ ರಾಷ್ಟ್ರೀಕರಣ ಇರಬೇಕು. ಭಾವೀ ಸರ್ಕಾರವು ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ರಾಜಕೀಯವಾಗಿ ನ್ಯಾಯವನ್ನು ಸಲ್ಲಿಸಬೇಕೆಂದು ನಂಬಿದ್ದರೆ, ಅದರ ಆರ್ಥಿಕತೆಯು ಸಮಾಜವಾದಿ ಸಿದ್ಧಾಂತದ ಆರ್ಥಿಕತೆಯಾಗಿಲ್ಲದಿದ್ದರೆ, ಅದು ಹೇಗೆ ಸಾಧ್ಯವಾಗುತ್ತದೆ ಎಂದು ನನಗೆ ಅರ್ಥವಾಗುತ್ತಿಲ್ಲ. ಆದ್ದರಿಂದ, ವೈಯಕ್ತಿಕವಾಗಿ, ಈ ಪ್ರಸ್ತಾವಗಳ ಖಚಿತ ನಿರೂಪಣೆಯ ಬಗೆಗೆ ನನ್ನದೇನೂ ಆಕ್ಷೇಪವಿಲ್ಲದಿದ್ದರೂ, ನನ್ನ ಮನಸ್ಸಿಗೆ ಈ ನಿರ್ಣಯವು ಕೆಲಮಟ್ಟಿಗೆ ನಿರಾಶಾದಾಯಕವಾಗಿದೆ. ಹೇಗಾದರೂ ಈ ಕೆಲವು ಅಭಿಪ್ರಾಯಗಳೊಡನೆ ಈ ವಿಷಯವನ್ನು ಅದು ಇರುವ ರೀತಿಯಲ್ಲೇ ಬಿಡಲು ನಾನು ಸಿದ್ಧನಿದ್ದೇವೆ.

ಈಗ ನಾನು ನಿರ್ಣಯದ ಮೊದಲನೆಯ ಭಾಗಕ್ಕೆ ಬರುತ್ತೇನೆ. ಅದರಲ್ಲಿ ಮೊದಲು ನಾಲ್ಕು ಕಂಡಿಕೆಗಳಿವೆ. ಈ ಸದನದಲ್ಲಿ ನಡೆದ ಚರ್ಚೆಗಳನ್ನು ಆಧರಿಸಿ ಹೇಳುವುದಾದರೆ ಇದು ಒಂದು ವಿವಾದಾತ್ಮಕ ವಿಷಯವಾಗಿ ಪರಿವರ್ತಿತವಾಗಿದೆ. ಈ ವಿವಾದವು 'ಗಣರಾಜ್ಯ' ಎಂಬ ಶಬ್ದದ ಬಳಕೆಯ ಮೇಲೆ ಕೇಂದ್ರಿಕೃತವಾಗಿರುವಂತೆ ತೋರುತ್ತದೆ. ಅದು ೪ನೆಯ ಕಂಡಿಕೆಯಲ್ಲಿ ಬರುವ "ಸಾರ್ವಭೌಮತ್ವವು ಜನರಿಂದ ನಿಷ್ಪನ್ನವಾಗುತ್ತದೆ" ಎಂಬ ವಾಕ್ಯದ ಮೇಲೆ ಕೇಂದ್ರಿಕೃತವಾಗಿದೆ ಮುಸ್ಲಿಮ್ ಲೀಗ್‌ನ ಗೈರುಹಾಜರಿಯಲ್ಲಿ ಈ ನಿರ್ಣಯವನ್ನು ಕುರಿತು ವ್ಯವಹರಿಸುವುದು ಈ ಸಭೆಗೆ ತಕ್ಕುದಲ್ಲ ಎಂದು ನಿನ್ನೆ ನನ್ನ ಗೆಳೆಯರಾದ ಡಾ. ಜಯಕರ್ ಅವರು ಎತ್ತಿದ ಅಂಶದಿಂದ ಈ ವಿವಾದವು ಉದ್ಭವಿಸಿತು. ಮಾನ್ಯರೆ, ಈ ಮಹಾನ್ ದೇಶದ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಸಂರಚನೆಯ ಅಂತಿಮ ಸ್ವರೂಪ ಮತ್ತು ಭಾವೀ ವಿಕಾಸವನ್ನು ಕುರಿತು ಈಗ ನನ್ನ ಮನಸ್ಸಿನಲ್ಲಿ ಕಿಂಚಿತ್ತಾದರೂ ಸಂಶಯವಿಲ್ಲ. ಇಂದು ನಾವು ರಾಜಕೀಯವಾಗಿ, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹೋಳಾಗಿದ್ದೇವೆ ಎಂದು ನಾನು ಬಲ್ಲೆ. ನಾವು ಹೋರಾಡುವ ಶಿಬಿರಗಳ ಒಂದು ಗುಂಪಿನಂತಿದ್ದೇವೆ, ಪ್ರಾಯಃ ನಾನು ಅಂತಹ ಒಂದು ಶಿಬಿರದ ನಾಯಕರಲ್ಲಿ ಒಬ್ಬನಾಗಿರಬಹುದು ಎಂದು ಒಪ್ಪಿಕೊಳ್ಳುವ ಹಂತಕ್ಕೂ ನಾನು ಹೋಗಬಹುದು. ಆದರೆ ಸ್ವಾಮಿ, ಈ ಎಲ್ಲ ಸಂಗತಿಗಳಿದ್ದರೂ ನಾನು ಖಚಿತವಾಗಿ

ನಂಬುವುದೇನೆಂದರೆ ಸಮಯ ಮತ್ತು ಸನ್ನಿವೇಶವನ್ನು ನೀಡಿದರೆ ಈ ದೇಶವು ಒಂದಾಗುವುದನ್ನು ಜಗತ್ತಿನ ಯಾವುದೇ ಶಕ್ತಿಯೂ ತಡೆಯಲಾರದು. (ಚಪ್ಪಾಳೆ). ನಮ್ಮೆಲ್ಲ ಜಾತಿ ಮತಗಳ ನಡುವೆಯೂ ನಾವು ಯಾವುದೋ ಒಂದು ರೂಪದಲ್ಲಿ ಸಂಯುಕ್ತ ಜನಾಂಗವಾಗುತ್ತೇವೆ ಎನ್ನುವುದರಲ್ಲಿ ನನಗೆ ಕಿಂಚಿತ್ತೂ ಅನಿಶ್ಚಿತತೆಯಿಲ್ಲ. (ಹರ್ಷೋದ್ಗಾರಗಳು). ಮುಸ್ಲಿಮ್ ಲೀಗ್‌ನವರು ಭಾರತದ ವಿಭಜನೆಗೆ ಚಳವಳಿ ಮಾಡುತ್ತಿದ್ದರೂ ಮುಂದೆ ಒಂದು ದಿನ ಮುಸ್ಲಿಮರ ಮೇಲೆ ಸಾಕಷ್ಟು ಬೆಳಕು ಬಿದ್ದು ಅರುಣೋದಯವಾಗಿ ಸಂಯುಕ್ತ ಭಾರತವು ಅವರಿಗೂ ಕೂಡ ಒಳಿತನ್ನು ತರುತ್ತದೆಂದು ಅವರು ಯೋಚಿಸಲಾರಂಭಿಸುತ್ತಾರೆ ಎಂದು ಹೇಳುವುದರಲ್ಲಿ ನನಗೆ ಯಾವ ಹಿಂಜರಿಕೆಯೂ ಇಲ್ಲ. (ಭಾರಿ ಹರ್ಷೋದ್ಗಾರಗಳು ಮತ್ತು ಚಪ್ಪಾಳೆ)

ಅಂತಿಮ ಗುರಿಯನ್ನು ಕುರಿತು ಹೇಳುವುದಾದರೆ, ನಮ್ಮಲ್ಲಿ ಯಾರೂ ಆತಂಕಗೊಳ್ಳಬೇಕಾಗಿಲ್ಲ ಎಂದು ನಾನು ಭಾವಿಸುತ್ತೇನೆ. ನಮ್ಮಲ್ಲಿ ಯಾರೂ ಯಾವುದೇ ಶಂಕೆಯನ್ನು ಇಟ್ಟುಕೊಳ್ಳಬೇಕಾಗಿಲ್ಲ. ನಮ್ಮ ಕಷ್ಟ ಇರುವುದು ಅಂತಿಮ ಭವಿಷ್ಯವನ್ನು ಕುರಿತು ಅಲ್ಲ. ಏಕತೆಯ ಕಡೆಗೆ ನಮ್ಮನ್ನು ಕರೆದೊಯ್ಯುವ ಹಾದಿಯಲ್ಲಿ ಸಾಗಲು ಇಂದು ನಮ್ಮಲ್ಲಿರುವ ವೈವಿಧ್ಯಪೂರ್ಣ ಜನಸಮುದಾಯವು ಒಟ್ಟಾಗಿ ತೀರ್ಮಾನವನ್ನು ತೆಗೆದುಕೊಳ್ಳುವಂತೆ ಮಾಡುವುದು ಹೇಗೆ ಎನ್ನುವುದು ನಮ್ಮ ಕಷ್ಟ. ನಮ್ಮ ಕಷ್ಟ ಇರುವುದು ಅಂತ್ಯವನ್ನು ಕುರಿತಲ್ಲ ನಮ್ಮ ಕಷ್ಟ ಇರುವುದು ಆರಂಭವನ್ನು ಕುರಿತು. ಆದ್ದರಿಂದ, ಮಾನ್ಯ ಅಧ್ಯಕ್ಷರೆ, ನಾನು ಯೋಚಿಸುವುದೇನೆಂದರೆ, ನಮ್ಮನ್ನು ಮನಃಪೂರ್ವಕವಾದ ಸ್ನೇಹಿತರನ್ನಾಗಿ ಮಾಡಬೇಕೆಂದರೆ, ಮಾರ್ಗವನ್ನು ಹಿಡಿದು ಸಾಗಲು ಈ ದೇಶದ ಪ್ರತಿಯೊಂದು ಪಕ್ಷವನ್ನೂ ಪ್ರತಿಯೊಂದು ವಿಭಾಗವನ್ನೂ ಪ್ರೇರೇಪಿಸಬೇಕೆಂದರೆ, ಒಟ್ಟಿಗೆ ಸಾಗಲು ಸಿದ್ದರಿಲ್ಲದ ಜನರ ಪೂರ್ವಗ್ರಹಗಳಿಗೆ ರಿಯಾಯಿತಿಯನ್ನು ಕೊಡುವುದೂ ಕೂಡ ಬಹುಮತದ ಪಕ್ಷಕ್ಕೆ ಒಂದು ಮಹತ್ತಾದ ಮುತ್ಸದ್ದಿತನದ ಕಾರ್ಯವಾಗುತ್ತದೆ. ಮತ್ತು ಆ ಕಾರಣದಿಂದ ನಾನು ಈ ಮನವಿಯನ್ನು ಮಾಡಿಕೊಳ್ಳುತ್ತಿದ್ದೇನೆ. ಘೋಷಣಾ ವಾಕ್ಯಗಳನ್ನು ನಾವು ಪಕ್ಕಕ್ಕಿಡೋಣ, ಜನಗಳನ್ನು ಭೀತಿಗೀಡುಮಾಡುವಂತಹ ಶಬ್ದಗಳನ್ನು ನಾವು ಪಕ್ಕಕ್ಕಿಡೋಣ. ನಮ್ಮ ವಿರೋಧಿಗಳ ಪೂರ್ವಗ್ರಹಗಳಿಗೆ ನಾವು ರಿಯಾಯಿತಿಯನ್ನೂ ಕೊಡೋಣ. ಅವರನ್ನು ಒಳಗೆ ಕರೆತರೋಣ. ನಾನು ಆಗಲೇ ಹೇಳಿದಂತೆ ಯಾವ ಮಾರ್ಗದಲ್ಲಿ ಸಾಗಿದರೆ ನಮ್ಮನ್ನು ಒಗ್ಗಟ್ಟಿನೆಡೆಗೆ ಕರೆದೊಯ್ಯುತ್ತದೆಯೋ ಅದರಲ್ಲಿ ಹೆಜ್ಜೆಹಾಕಲು ಅವರು ಮನಃಪೂರ್ವಕವಾಗಿ ನಮ್ಮೊಡನೆ ಸೇರುವಂತೆ ಮಾಡೋಣ. ನಾನು ಈ ಸ್ಥಾನದಲ್ಲಿ ನಿಂತು ಡಾ. ಜಯಕರ್ ಅವರ ತಿದ್ದುಪಡಿಯನ್ನು ಬೆಂಬಲಿಸುತ್ತೇನೆಂದರೆ ನಾವು ಸರಿಯಾಗಿದ್ದೇವೆಯೋ ಅಥವಾ ತಪ್ಪಾಗಿದ್ದೇವೆಯೋ, ನಾವು ತೆಗೆದುಕೊಳ್ಳುವ ನಿಲುವು ನಮ್ಮ ಕಾನೂನಾತ್ಮಕ ಹಕ್ಕುಗಳಿಗೆ ಮೇಳೈಸಿದೆಯೋ, ಅದು ಮೇ ೧೬ ರ ಅಥವಾ ಡಿಸೆಂಬರ್ ೬ ರ ಹೇಳಿಕೆಯನ್ನು ಒಪ್ಪುತ್ತದೆಯೋ ಎಂಬುದನ್ನೆಲ್ಲ ಪಕ್ಕಕ್ಕಿಡಬೇಕು ಎನ್ನುವುದನ್ನು ನಾವೆಲ್ಲರೂ ಮನಗಾಣಬೇಕು ಎಂದು ನಾನು ಬಯಸುತ್ತೇನೆ ಎಂಬ ಕಾರಣಕ್ಕೆ. ಕಾನೂನಾತ್ಮಕ ಹಕ್ಕುಗಳ ವಿಷಯವೆಂದು ಪರಿಗಣಿಸಲು ಇದು ತುಂಬ ದೊಡ್ಡ ಪ್ರಶ್ನೆ. ಇದು ಕಾನೂನಾತ್ಮಕ ಪ್ರಶ್ನೆಯೇ ಅಲ್ಲ. ನಾವು ಕಾನೂನಾತ್ಮಕ ಪ್ರಶ್ನೆಗಳನ್ನೆಲ್ಲ ಪಕ್ಕಕ್ಕಿಟ್ಟು, ಇಲ್ಲಿಗೆ ಬರಲು ಸಿದ್ಧರಾಗಿಲ್ಲದವರು ಬರುವಂತೆ ಮಾಡುವ ಯಾವುದಾದರೂ ಪ್ರಯತ್ನವನ್ನು ಮಾಡೋಣ. ಅವರಿಗೆ ಬರಲು ಸಾಧ್ಯವಾಗುವಂತೆ ಮಾಡೋಣ. ಅದು ನನ್ನ ಮನವಿ.

ಚರ್ಚೆಯು ನಡೆಯುತ್ತಿದ್ದ ಸಮಯದಲ್ಲಿ ಎರಡು ಪ್ರಶ್ನೆಗಳನ್ನು ಎತ್ತಲಾಯಿತು. ಅವು ಎಷ್ಟು ಚೆನ್ನಾಗಿ ನನ್ನಲ್ಲಿ ನಾಟಿದವೆಂದರೆ ಅವನ್ನು ಒಂದು ಕಾಗದದ ತುಂಡಿನ ಮೇಲೆ ನಾನು ಬರೆದುಕೊಂಡೆ. ಅವುಗಳಲ್ಲಿ ಒಂದು ಪ್ರಶ್ನೆಯೆಂದರೆ ನಿನ್ನೆ ಈ ಸಭೆಯಲ್ಲಿ ಮಾತನಾಡಿದ ನನ್ನ ಮಿತ್ರರಾದ ಬಿಹಾರದ ಪ್ರಧಾನಮಂತ್ರಿ ಅವರದು ಎಂದು ಭಾವಿಸುತ್ತೇನೆ. ಅವರು ಕೇಳಿದರು: ಈ ನಿರ್ಣಯವು ಸಂವಿಧಾನ ರಚನಾಸಭೆಗೆ ಬರದಂತೆ ಮುಸ್ಲಿಮ್ ಲೀಗ್ ಅನ್ನು ಹೇಗೆ ತಡೆಯಬಲ್ಲದು? ಇಂದು ನನ್ನ ಮಿತ್ರರಾದ ಡಾ. ಶ್ಯಾಮಪ್ರಸಾದ ಮುಖರ್ಜಿ

ಅವರು ಇನ್ನೊಂದು ಪ್ರಶ್ನೆಯನ್ನು ಕೇಳಿದರು: ಈ ನಿರ್ಣಯವು ಸಂಪುಟ ನಿಯೋಗದ ಪ್ರಸ್ತಾವಕ್ಕೆ ಅಸಂಗತವಾಗಿದೆಯೇ? ಮಾನ್ಯರೆ, ಇವು ಬಹಳ ಮುಖ್ಯವಾದ ಪ್ರಶ್ನೆಗಳೆಂದು ನಾನು ಭಾವಿಸುತ್ತೇನೆ. ಅವುಗಳಿಗೆ ಉತ್ತರ ಕೊಡಲೇಬೇಕು ಮತ್ತು ಮುಚ್ಚುಮರೆಯಿಲ್ಲದೆ ಉತ್ತರಿಸಬೇಕು. ಈ ನಿರ್ಣಯವು ಫಲಿತಾಂಶವನ್ನು ತರುವ ಉದ್ದೇಶವನ್ನು ಹೊಂದಿರಲಿ ಅಥವಾ ಇಲ್ಲದಿರಲಿ, ಅದು ಭಾವಶೂನ್ಯವಾದ ಲೆಕ್ಕಾಚಾರದ ಫಲಿತಾಂಶವಾಗಿರಲಿ ಅಥವಾ ಅದು ಕೇವಲ ಆಕಸ್ಮಿಕವಾದ ಸಂಗತಿಯಾಗಿರಲಿ, ಮುಸ್ಲಿಮ್ ಲೀಗ್ ಅನ್ನು ಹೊರಗಿಡುವ ಫಲಿತಾಂಶವನ್ನು ಪಡೆಯಲು ಬದ್ಧವಾಗಿದೆ ಎಂದು ನಾನು ಸಾಧಿಸುತ್ತೇನೆ. ಈ ಸಂಬಂಧವಾಗಿ ನಾನು ಈ ನಿರ್ಣಯದ ೩ ನೇ ಕಂಡಿಕೆಯತ್ತ ನಿಮ್ಮ ಗಮನವನ್ನು ಸೆಳೆಯಲು ಬಯಸುತ್ತೇನೆ. ಅದು ಬಹಳ ಮಹತ್ತ್ವಪೂರ್ಣವಾದದ್ದು ಮತ್ತು ಮುಖ್ಯವಾದದ್ದು ಎಂದು ನಾನು ಭಾವಿಸುತ್ತೇನೆ. ೩ ನೇ ಕಂಡಿಕೆಯು ಭಾರತದ ಭಾವೀ ಸಂವಿಧಾನವನ್ನು ಕಲ್ಪಿಸಿಕೊಳ್ಳುತ್ತದೆ. ಈ ನಿರ್ಣಯದ ಮಂಡನೆಕಾರರ ಉದ್ದೇಶವೇನು ಎಂದು ನನಗೆ ಗೊತ್ತಿಲ್ಲ. ಆದರೆ ಈ ನಿರ್ಣಯವು ಅಂಗೀಕಾರವಾದಮೇಲೆ, ಈ ನಿರ್ಣಯದ ೩ ನೇ ಕಂಡಿಕೆಗೆ ಅನುಸಾರವಾಗಿ ಒಂದು ಸಂವಿಧಾನವನ್ನು ರಚಿಸಲು ಸಂವಿಧಾನ ರಚನಾಸಭೆಗೆ ಒಂದು ರೀತಿಯಲ್ಲಿ ನಿರ್ದೇಶನವನ್ನು ನೀಡುವ ರೀತಿಯಲ್ಲಿ ಅದು ವರ್ತಿಸುತ್ತದೆ ಎಂದು ನಾನು ಭಾವಿಸುತ್ತೇನೆ. ೩ ನೇ ಕಂಡಿಕೆ ಏನು ಹೇಳುತ್ತದೆ? ೩ ನೇ ಕಂಡಿಕೆ ಹೇಳುವುದೇನೆಂದರೆ ಈ ದೇಶದಲ್ಲಿ ಎರಡು ಬೇರೆ ಬೇರೆ ನಾಗರಿಕ ಆಡಳಿತ ವ್ಯವಸ್ಥೆ ಇರಬೇಕು. ಒಂದು ಕೆಳಹಂತದಲ್ಲಿ ಸ್ವಯಮಾಧಿಕಾರದ ಪ್ರಾಂತ್ಯಗಳು ಅಥವಾ ರಾಜ್ಯಗಳು ಅಥವಾ ಸಂಯುಕ್ತ ಭಾರತದಲ್ಲಿ ಸೇರಿಕೊಳ್ಳಲು ಬಯಸುವ ಅಂತಹ ಇತರ ಪ್ರದೇಶಗಳಲ್ಲಿ ಇರಬೇಕು. ಈ ಸ್ವಯಮಾಧಿಕಾರದ ಘಟಕಗಳು ಪೂರ್ಣ ಅಧಿಕಾರವನ್ನು ಹೊಂದಿರುತ್ತವೆ. ಅವುಗಳಿಗೆ ಉಳಿಕೆಯ ಅಧಿಕಾರಗಳು ಕೂಡ ಇರುತ್ತದೆ. ಮೇಲ್‌ಸ್ತರದಲ್ಲಿ ಪ್ರಾಂತೀಯ ಘಟಕಗಳ ಮೇಲೆ ಒಂದು ಸಂಯುಕ್ತ ಸರ್ಕಾರವಿರುತ್ತದೆ. ಶಾಸನ ರಚನೆ, ಅನುಷ್ಠಾನ ಮತ್ತು ಆಡಳಿತದ ಕೆಲವು ವಿಷಯಗಳು ಅದರ ವ್ಯಾಪ್ತಿಯಲ್ಲಿ ಬರುತ್ತವೆ. ನಿರ್ಣಯದ ಈ ಭಾಗವನ್ನು ನಾನು ಓದುತ್ತಿದ್ದಂತೆ ಗುಂಪುಗೂಡಿಸುವುದಕ್ಕೆ ಸಂಬಂಧಿಸಿದಂತೆ ಯಾವ ಉಲ್ಲೇಖವನ್ನೂ ಕಾಣಲಿಲ್ಲ. ಒಂದು ಕಡೆ ಕೇಂದ್ರಕ್ಕೂ ಇನ್ನೊಂದು ಕಡೆ ಪ್ರಾಂತ್ಯಗಳಿಗೂ ನಡುವೆ ಅದು ಒಂದು ಮಧ್ಯಾಂತರ ಸಂರಚನೆ. ಸಂಪುಟ ನಿಯೋಗದ ಹೇಳಿಕೆಯ ಬೆಳಕಿನಲ್ಲಿ ಈ ಕಂಡಿಕೆಯನ್ನು ಓದಿದಾಗ ಅಥವಾ ವಾರ್ಧಾ ಅಧಿವೇಶನದಲ್ಲಿ ಕಾಂಗ್ರೆಸ್ ಅಂಗೀಕರಿಸಿದ ನಿರ್ಣಯದ ಬೆಳಕಿನಲ್ಲಿ ಓದಿದಾಗ ಪ್ರಾಂತ್ಯಗಳನ್ನು ಗುಂಪುಗೂಡಿಸುವ ವಿಚಾರಕ್ಕೆ ಸಂಬಂಧಿಸಿದಂತೆ ಯಾವುದೇ ಉಲ್ಲೇಖವೂ ಇಲ್ಲದಿರುವುದಕ್ಕೆ ನನಗೆ ಅಪಾರವಾದ ಆಶ್ಚರ್ಯವಾಯಿತು ಎಂದು ನಾನು ಒಪ್ಪಿಕೊಳ್ಳಬೇಕು. ನನಗೆ ವೈಯಕ್ತಿಕವಾಗಿ ಸಂಬಂಧಿಸಿದಂತೆ ಹೇಳುವುದಾದರೆ ಗುಂಪುಗೂಡಿಸುವ ವಿಚಾರವನ್ನು ನಾನು ಇಷ್ಟಪಡುವುದಿಲ್ಲ (ಕೇಳಿ, ಕೇಳಿ!) ನಾನು ಬಲಿಷ್ಠವಾದ ಸಂಯುಕ್ತ ಕೇಂದ್ರ ಸರ್ಕಾರವನ್ನು ಇಷ್ಟಪಡುತ್ತೇನೆ (ಕೇಳಿ, ಕೇಳಿ!) ೧೯೩೫ರ ಭಾರತ ಸರ್ಕಾರದ ಕಾಯಿದೆಯ ಅಡಿಯಲ್ಲಿ ನಾವು ಸೃಷ್ಟಿಸಿದ ಕೇಂದ್ರ ಸರ್ಕಾರಕ್ಕಿಂತ ಅದು ಬಹಳಷ್ಟು ಬಲಿಷ್ಠವಾಗಿರಬೇಕು. ಆದರೆ ಮಾನ್ಯರೆ, ಈ ಅಭಿಪ್ರಾಯಗಳು ಮತ್ತು ಹಾರೈಕೆಗಳು ಸನ್ನಿವೇಶದ ಮೇಲೆ ಯಾವುದೇ ರೀತಿಯ ಸಂಬಂಧವನ್ನೂ ಹೊಂದಿಲ್ಲ. ನಾವು ಒಂದು ದೀರ್ಘವಾದ ಹಾದಿಯಲ್ಲಿ ಪಯಣ ಮಾಡಿ ಬಂದಿದ್ದೇವೆ. ಕಾಂಗ್ರೆಸ್ ಪಕ್ಷವು, ಅದಕ್ಕೇ ಚೆನ್ನಾಗಿ ತಿಳಿದಿರುವ ಕಾರಣಗಳಿಗೆ ಬಲಿಷ್ಠವಾದ ಕೇಂದ್ರ ಸರ್ಕಾರವನ್ನು ಕಳಚಲು ಒಪ್ಪಿಕೊಂಡಿದೆ( ಆ ಪದ ಪ್ರಯೋಗವನ್ನು ನಾನು ಬಳಸಬಹುದಾದರೆ). ೧೫೦ ವರ್ಷಗಳ ಆಡಳಿತದ ಫಲವಾಗಿ ಈ ದೇಶದಲ್ಲಿ ಅದನ್ನು ಸೃಷ್ಟಿಸಲಾಗಿತ್ತು. ಅದು ನನ್ನ ಪಾಲಿಗೆ ಮಹಾನ್ ಮೆಚ್ಚುಗೆಯ, ಗೌರವದ ಮತ್ತು ಆಶ್ರಯದ ವಿಷಯವಾಗಿತ್ತು ಎಂದು ನಾನು ಹೇಳಬೇಕು. ಆದರೆ ಆ ಸ್ಥಾನಮಾನವನ್ನು ಕೈಬಿಟ್ಟಮೇಲೆ, ನಮಗೆ ಬಲಿಷ್ಠವಾದ ಕೇಂದ್ರ ಸರ್ಕಾರ ಬೇಕಿಲ್ಲ ಎಂದು ಹೇಳಿದ ಮೇಲೆ, ಕೇಂದ್ರ ಸರ್ಕಾರ ಮತ್ತು ಪ್ರಾಂತ್ಯಗಳ ನಡುವೆ ಒಂದು ಉಪ ಒಕ್ಕೂಟವಾಗಿ ಒಂದು ಮಧ್ಯಾಂತರವಾದ ನಾಗರಿಕ ಆಡಳಿತ ವ್ಯವಸ್ಥೆ ಇರಬೇಕು ಅಥವಾ ಇರಲೇಬೇಕು

ಎಂದು ಒಪ್ಪಿಕೊಂಡಮೇಲೆ, ೩ ನೇ ಕಂಡಿಕೆಯಲ್ಲಿ ಗುಂಪುಗೂಡಿಸುವ ವಿಚಾರಕ್ಕೆ ಸಂಬಂಧಿಸಿದಂತೆ ಏಕೆ ಯಾವುದೇ ಉಲ್ಲೇಖವಿಲ್ಲ ಎಂದು ನಾನು ತಿಳಿಯಬಯಸುತ್ತೇನೆ. ಕಾಂಗ್ರೆಸ್ ಪಕ್ಷ, ಮುಸ್ಲಿಮ್ ಲೀಗ್ ಮತ್ತು ಚಕ್ರವರ್ತಿಯ ಸರ್ಕಾರ ಗುಂಪುಗೂಡಿಸುವುದಕ್ಕೆ ಸಂಬಂಧಪಟ್ಟ ಖಂಡವನ್ನು ಅರ್ಥೈಸುವುದರಲ್ಲಿ ಸಹಮತವನ್ನು ಹೊಂದಿಲ್ಲ. ಆದರೆ ನಾನು ಸದಾ ಆಲೋಚಿಸುವುದೇನೆಂದರೆ– ನಾನು ತಪ್ಪು ಎಂದು ತೋರಿಸಿದರೆ ತಿದ್ದಿಕೊಳ್ಳಲು ಸಿದ್ಧನಾಗಿದ್ದೇನೆ– ವಿವಿಧ ಗುಂಪುಗಳಲ್ಲಿ ಇರಿಸಲಾದ ಪ್ರಾಂತ್ಯಗಳು ಒಂದು ಒಕ್ಕೂಟವನ್ನು ರಚಿಸಲು ಅಥವಾ ಉಪ ಒಕ್ಕೂಟವನ್ನು ರಚಿಸಲು ಒಪ್ಪಿಗೆಯನ್ನು ನೀಡಿದರೆ ಕಾಂಗ್ರೆಸ್‌ಗೆ ಆ ಪ್ರಸ್ತಾವವನ್ನು ಒಪ್ಪಲು ಯಾವ ಆಕ್ಷೇಪವೂ ಇಲ್ಲ ಎಂದು ಕಾಂಗ್ರೆಸ್ ಪಕ್ಷವು ಕನಿಷ್ಠಪಕ್ಷ ಅದನ್ನು ಅಂಗೀಕರಿಸಿದೆ. ಕಾಂಗ್ರೆಸ್ ಪಕ್ಷದ ಮನಸ್ಸನ್ನು ಅರ್ಥೈಸಿಕೊಳ್ಳುವುದರಲ್ಲಿ ನಾನು ಸರಿದಾರಿಯಲ್ಲಿದ್ದೇನೆ ಎಂದು ಭಾವಿಸುತ್ತೇನೆ. ನಾನು ಕೇಳುವ ಪ್ರಶ್ನೆ ಇದು: ಈ ನಿರ್ಣಯದ ಮಂಡನೆಕಾರರು ಮತ್ತು ಅವರ ಪಕ್ಷ ಒಪ್ಪಿಕೊಳ್ಳಲು ಸಿದ್ಧರಾಗಿದ್ದ ಪ್ರಾಂತ್ಯಗಳ ಒಕ್ಕೂಟ ಅಥವಾ ಪ್ರಾಂತ್ಯಗಳನ್ನು ಗುಂಪುಗೂಡಿಸುವ ವಿಚಾರವನ್ನು ಏಕೆ ಉಲ್ಲೇಖಿಸಲಿಲ್ಲ? ಒಕ್ಕೂಟದ ಕಲ್ಪನೆಯನ್ನು ಈ ನಿರ್ಣಯದಿಂದ ಏಕೆ ಸಂಪೂರ್ಣವಾಗಿ ಅಳಿಸಿಹಾಕಲಾಗಿದೆ? ನನಗೆ ಉತ್ತರ ಸಿಗಲಿಲ್ಲ. ಯಾವುದೇ ರೀತಿಯಲ್ಲೂ ಇಲ್ಲ. ಆದ್ದರಿಂದ ನಾನು ಇಲ್ಲಿ ಈ ಸಭೆಯಲ್ಲಿ ಬಿಹಾರದ ಪ್ರಧಾನಮಂತ್ರಿಗಳಾದ ಡಾ. ಶ್ಯಾಮಪ್ರಸಾದ ಮುಖರ್ಜಿಯವರು ಎತ್ತಿದ ಎರಡು ಪ್ರಶ್ನೆಗಳಿಗೆ ಉತ್ತರವಾಗಿ ಹೇಳುವುದೇನೆಂದರೆ ಈ ನಿರ್ಣಯವು ಮುಸ್ಲಿಮ್ ಲೀಗ್ ಅನ್ನು ಈ ಸಂವಿಧಾನ ರಚನಾಸಭೆಯನ್ನು ಪ್ರವೇಶಿಸದಂತೆ ಹೇಗೆ ತಡೆಯಲಿದೆ ಎನ್ನುವುದು ಮತ್ತು ಇಲ್ಲಿರುವ ೩ನೇ ಕಂಡಿಕೆಯನ್ನು ಮುಸ್ಲಿಮ್ ಲೀಗ್ ಖಂಡಿತ ತನ್ನ ಅನುಕೂಲಕ್ಕೆ ಬಳಸಿಕೊಳ್ಳುತ್ತದೆ ಮತ್ತು ತನ್ನ ಮುಂದುವರಿದ ಗೈರುಹಾಜರಿಗೆ ಸಮರ್ಥನೆಯನ್ನಾಗಿ ನೀಡುತ್ತದೆ. ಮಾನ್ಯರೆ, ನನ್ನ ಮಿತ್ರರಾದ ಡಾ. ಜಯಕರ್ ಅವರು ನಿನ್ನೆ ಈ ವಿಷಯವನ್ನು ಕುರಿತ ನಿರ್ಣಯನ್ನು ಮುಂದೂಡಬೇಕೆಂದು ವಾದ ಮಾಡುತ್ತಾ– ಅವರ ಮನನೋಯಿಸದೆ ನಾನು ಹೇಳಬಹುದಾದರೆ– ಕೆಲಮಟ್ಟಿಗೆ ಕಾನೂನುವಾದಿ ರೀತಿಯಲ್ಲಿ ತಮ್ಮ ಅಭಿಪ್ರಾಯವನ್ನು ಮಂಡಿಸಿದರು. ಅವರ ವಾದದ ಮೂಲ ಆಧಾರವೆಂದರೆ, 'ಹಾಗೆ ಮಾಡಲು ನಿಮಗೆ ಹಕ್ಕು ಇದೆಯೇ?' ಅವರು ಸಂಪುಟ ನಿಯೋಗದ ಹೇಳಿಕೆಯಿಂದ ಕೆಲವು ಭಾಗಗಳನ್ನು ಓದಿ ಹೇಳಿದರು. ಅವು ಸಂವಿಧಾನ ರಚನಾಸಭೆಯ ವಿಧಾನದ ಭಾಗಕ್ಕೆ ಸೇರಿದವು. ಅವರ ವಾದಾಂಶ ಏನಾಗಿತ್ತೆಂದರೆ ಈ ನಿರ್ಣಯವನ್ನು ಕುರಿತು ತೀರ್ಮಾನಿಸಲು ಈ ಸಂವಿಧಾನ ರಚನಾಸಭೆಯು ಅನುಸರಿಸುತ್ತಿರುವ ವಿಧಾನವು ಆ ಪತ್ರಿಕೆಯಲ್ಲಿ ವಿಧಿಸಲಾದ ವಿಧಾನಕ್ಕೆ ನೇರವಾಗಿ ಅಸಂಗತವಾಗಿದೆ. ಮಾನ್ಯರೆ, ನಾನು ಈ ವಿಚಾರವನ್ನು ಕೆಲಮಟ್ಟಿಗೆ ಬೇರೆ ರೀತಿಯಲ್ಲಿ ಮಂಡಿಸಲು ಇಷ್ಟಪಡುತ್ತೇನೆ. ನಾನು ಮಂಡಿಸಲು ಉದ್ದೇಶಿಸಿರುವ ರೀತಿಯು ಹೀಗಿದೆ: ಈ ನಿರ್ಣಯವನ್ನು ನೇರವಾಗಿ ಅಂಗೀಕರಿಸಲು ಅಥವಾ ನಿರಾಕರಿಸಲು ನಿಮಗೆ ಅಧಿಕಾರವಿದೆಯೇ ಎಂದು ಪರಿಗಣಿಸುವಂತೆ ನಾನು ನಿಮ್ಮನ್ನು ಕೇಳುವುದಿಲ್ಲ. ಹಾಗೆ ಮಾಡಲು ನಿಮಗೆ ಅಧಿಕಾರವಿರಬಹುದು. ನಾನು ಕೇಳುವ ಪ್ರಶ್ನೆ ಇದು: ನೀವು ಹಾಗೆ ಮಾಡುವುದು ವಿವೇಕಯುತವೆ? ನೀವು ಹಾಗೆ ಮಾಡುವುದು ಜಾಣತನವೆ? ಅಧಿಕಾರವು ಒಂದು ವಿಚಾರ; ಬುದ್ಧಿವಂತಿಕೆಯು ತೀರ ಬೇರೆಯದೇ ಆದ ಸಂಗತಿ. ಸಂವಿಧಾನ ರಚನಾಸಭೆಗೆ ವಹಿಸಿಕೊಟ್ಟ ಅಧಿಕಾರದ ದೃಷ್ಟಿಯಿಂದ ಅಲ್ಲ, ಬೇರೆಯದೇ ಒಂದು ದೃಷ್ಟಿಕೋನದಿಂದ ಈ ವಿಚಾರವನ್ನು ಈ ಸದನವು ಪರಿಗಣಿಸಬೇಕು ಎಂದು ನಾನು ಭಾವಿಸುತ್ತೇನೆ. ಅದೇಂದರೆ, ಈ ಹಂತದಲ್ಲಿ ಹಾಗೆ ಮಾಡುವುದು ವಿವೇಕವೇ, ಮುತ್ಸದ್ದಿತನವೇ, ಜಾಣತವೇ? ಇದಕ್ಕೆ ನಾನು ಕೊಡುವ ಉತ್ತರವೆಂದರೆ ಅದು ವಿವೇಕಯುತವಾಗುವುದಿಲ್ಲ, ಅದು ಜಾಣತನವಾಗುವುದಿಲ್ಲ. ಕಾಂಗ್ರೆಸ್ ಮತ್ತು ಮುಸ್ಲಿಮ್ ಲೀಗ್ ನಡುವಣ ವಿವಾದವನ್ನು ಬಗೆಹರಿಸಲು ಇನ್ನೊಂದು ಪ್ರಯತ್ನವನ್ನು ಮಾಡಬೇಕೆಂದು ಚಿಂತಿಸಿ ಎಂದು ನಾನು ಸೂಚಿಸುತ್ತೇನೆ. ಈ ವಿಷಯವು ಎಷ್ಟು ಮಹತ್ತ್ವಪೂರ್ಣವಾದದ್ದು ಮತ್ತು ಪ್ರಮುಖವಾದದ್ದು ಎಂದರೆ ಯಾವುದೇ ಒಂದು ಪಕ್ಷದ ಘನತೆ ಅಥವಾ ಇನ್ನೊಂದು ಪಕ್ಷದ

ಘನತೆಯನ್ನು ಕೇವಲ ಆಧಾರವಾಗಿಟ್ಟುಕೊಂಡು ಇದನ್ನು ಎಂದೂ ತೀರ್ಮಾನಿಸಲಾಗುವುದಿಲ್ಲ ಎನ್ನುವುದು ನನಗೆ ಖಚಿತವಾಗಿದೆ ರಾಷ್ಟ್ರಗಳ ಗಂತವ್ಯಗಳನ್ನು ನಿರ್ಧರಿಸಬೇಕಾದರೆ ಜನರ ಘನತೆಗಳು, ನಾಯಕರ ಘನತೆಗಳು ಮತ್ತು ಪಕ್ಷಗಳ ಘನತೆಗಳು ಗಣನೆಗೆ ಬರುವುದಿಲ್ಲ. ದೇಶದ ಗಂತವ್ಯವನ್ನು ಪ್ರತಿಯೊಂದಕ್ಕೂ ಗಣಿಸಬೇಕು. ಈ ಕಾರಣದಿಂದ ನಾನು ಭಾವಿಸುವುದೇನೆಂದರೆ ಈ ಸಂವಿಧಾನ ರಚನಾಸಭೆಯು ಒಂದು ಅಖಂಡವಾಗಿ ಕಾರ್ಯನಿರ್ವಹಿಸಲಿ ಎಂದು ಅದರ ಹಿತದೃಷ್ಟಿಯಿಂದಷ್ಟೆ ಅಲ್ಲದೆ, ಅದು ನಿರ್ಣಯವನ್ನು ತೆಗೆದುಕೊಳ್ಳಲು ಮುಂದುವರಿಯುವ ಮುನ್ನ ಮುಸ್ಲಿಮ್ ಲೀಗ್‌ನ ಪ್ರತಿಕ್ರಿಯೆಯನ್ನು ತೆಗೆದುಕೊಳ್ಳುವಂತಾಗಲಿ ಎಂದು ನಾನು ಡಾ. ಜಯಕರ್ ಅವರ ತಿದ್ದುಪಡಿಯನ್ನು ಬೆಂಬಲಿಸುತ್ತೇನೆ. ಅಲ್ಲದೆ ನಾವು ದುಡುಕಿನಿಂದ ಕ್ರಮಕೈಗೊಂಡರೆ ಭವಿಷ್ಯದಲ್ಲಿ ಏನಾಗುತ್ತದೆ ಎಂದೂ ಪರಿಗಣಿಸಬೇಕು. ಈ ಸದನವನ್ನು ಹಿಡಿತದಲ್ಲಿಟ್ಟುಕೊಂಡಿರುವ ಕಾಂಗ್ರೆಸ್ ಪಕ್ಷವು ತನ್ನ ಮನಸ್ಸಿನಲ್ಲಿ ಯಾವ ಯೋಜನೆಗಳನ್ನು ಇಟ್ಟುಕೊಂಡಿದೆ ಎನ್ನುವುದು ನನಗೆ ಗೊತ್ತಿಲ್ಲ. ಅವರು ಏನನ್ನು ಕುರಿತು ಯೋಚಿಸುತ್ತಿದ್ದಾರೆ ಎಂದು ತಿಳಿಯಲು ನನಗೆ ಭವಿಷ್ಯಜ್ಞಾನದ ಶಕ್ತಿಯಿಲ್ಲ. ಅವರ ಸಾಧನೋಪಾಯಗಳು ಏನು,. ಅವರ ಕಾರ್ಯತಂತ್ರವೇನು ಎಂದು ನನಗೆ ಗೊತ್ತಿಲ್ಲ. ಆದರೆ ಇಲ್ಲಿ ಉದ್ಭವಿಸಿರುವ ವಿವಾದಾಂಶಕ್ಕೆ ಒಬ್ಬ ಹೊರಗಿನವನಾಗಿ ನನ್ನ ಮನಸ್ಸನ್ನು ಅನ್ವಯಿಸಿ ನೋಡಿದಾಗ, ಭವಿಷ್ಯವನ್ನು ನಿರ್ಧರಿಸಲು ನೆರವಾಗಲು ಕೇವಲ ಮೂರು ಮಾರ್ಗಗಳು ಮಾತ್ರ ಇವೆ ಎಂದು ನನಗೆ ತೋರುತ್ತದೆ. ಒಂದು ಪಕ್ಷದ ಆಶೋತ್ತರಗಳಿಗೆ ಇನ್ನೊಂದು ಪಕ್ಷವು ಶರಣಾಗುವುದು ಒಂದು ಮಾರ್ಗ. ಇನ್ನೊಂದು ಮಾರ್ಗವನ್ನು ನಾನು ಸಂಧಾನದ ಮೂಲಕ ತೀರ್ಮಾನಿಸಲಾದ ಶಾಂತಿ ಎಂದು ಕರೆಯುತ್ತೇನೆ. ಮೂರನೆಯದು ಬಹಿರಂಗ ಯುದ್ಧ. ಮಾನ್ಯರೆ, ಈ ಸಂವಿಧಾನ ರಚನಾಸಭೆಯ ಕೆಲವು ಸದಸ್ಯರು ಯುದ್ಧಕ್ಕೆ ಹೋಗಲು ಸಿದ್ಧರಾಗಿದ್ದಾರೆ. ಎನ್ನುವ ಮಾತನ್ನು ಅವರಿಂದ ನಾನು ಕೇಳುತ್ತಿದ್ದೇನೆ. ಈ ದೇಶದ ಯಾರೇ ಆದರೂ ಈ ದೇಶದ ರಾಜಕೀಯ ಸಮಸ್ಯೆಗಳನ್ನು ಯುದ್ಧದ ವಿಧಾನದ ಮೂಲಕ ಪರಿಹರಿಸಿಕೊಳ್ಳಲು ಯೋಚಿಸುತ್ತಿದ್ದಾರೆ ಎಂಬ ಕಲ್ಪನೆಯೇ ನನ್ನನ್ನು ದಿಗಿಲಿಗೀಡುಮಾಡುತ್ತಿದೆ ಎಂದು ನಾನು ಒಪ್ಪಿಕೊಳ್ಳಬೇಕು. ಈ ದೇಶದ ಎಷ್ಟು ಜನ ಈ ವಿಚಾರವನ್ನು ಬೆಂಬಲಿಸುತ್ತಾರೆ ಎಂದು ನನಗೆ ಗೊತ್ತಿಲ್ಲ. ಪ್ರಾಯಃ ಬಹುಸಂಖ್ಯೆಯ ಜನರೇ ಇದನ್ನು ಬೆಂಬಲಿಸುತ್ತಾರೆ ಎಂದು ತೋರುತ್ತದೆ. ಏಕೆಂದರೆ ಎಷ್ಟೇ ಆಗಲಿ ಅವರ ಸಂಖ್ಯೆ ದೊಡ್ಡದಿದೆ ಎಂಬ ಕಾರಣಕ್ಕಾಗಿಯೇ ಹಾಗೆ ಭಾವಿಸುತ್ತಾರೆ ಎಂದು ನನಗೆ ಅನ್ನಿಸುತ್ತದೆ. ಅವರು ಯೋಚಿಸುತ್ತಿರುವ ಯುದ್ಧವು ಬ್ರಿಟಿಷರ ಮೇಲಿನ ಯುದ್ಧ ಎಂದು ಅವರು ನಂಬುತ್ತಾರೆ. ಮಾನ್ಯರೆ, ಜನರು ಮನಸ್ಸಿನಲ್ಲಿ ಕಲ್ಪಿಸಿಕೊಳ್ಳುತ್ತಿರುವ ಯುದ್ಧವನ್ನು ನಿರ್ದಿಷ್ಟ ಪ್ರದೇಶಕ್ಕೆ ಸೀಮಿತಗೊಳಿಸಿದರೆ, ಸುತ್ತುಗಟ್ಟಿದರೆ ಮತ್ತು ಅದು ಬ್ರಿಟಿಷರ ಮೇಲಿನ ಯುದ್ಧಕ್ಕಿಂತ ಹೆಚ್ಚಿನದಲ್ಲ ಎಂದು ಹೇಳಿದರೆ, ಪ್ರಾಯಃ ನಾನು ಆ ಬಗೆಯ ಕಾರ್ಯತಂತ್ರಕ್ಕೆ ಹೆಚ್ಚಿನ ಆಕ್ಷೇಪವನ್ನೇನೂ ಮಾಡಲಾರೆ. ಆದರೆ ಅದು ಬ್ರಿಟಿಷರ ವಿರುದ್ಧದ ಯುದ್ಧ ಮಾತ್ರವೆ? ನನಗೆ ಹೀಗೆ ಹೇಳಲು ಯಾವ ಹಿಂಜರಿಕೆಯೂ ಇಲ್ಲ, ಈ ಸದನದ ಮುಂದೆ ಅತ್ಯಂತ ಸ್ಪಷ್ಟವಾದ ಮಾತುಗಳಲ್ಲಿ ನಾನು ಇಡಬಯಸುವುದೇನೆಂದರೆ, ಈ ದೇಶದಲ್ಲಿ ಯುದ್ಧವು ಸಂಭವಿಸಿದರೆ ಮತ್ತು ಆ ಯುದ್ಧವು ಇಂದು ನಾವು ಮುಖಾಮುಖಿಯಾಗಿರುವ ವಿವಾದಕ್ಕೆ ಯಾವುದೇ ರೀತಿಯಲ್ಲಿ ಸಂಬಂಧವನ್ನು ಹೊಂದಿದ್ದರೆ ಅದು ಬ್ರಿಟಿಷರ ಮೇಲಿನ ಯುದ್ಧವಾಗಿರುವುದಿಲ್ಲ. ಅದು ಮುಸ್ಲಿಮರ ಮೇಲಿನ ಯುದ್ಧವಾಗಿರುತ್ತದೆ. ಅದು ಮುಸ್ಲಿಮರ ಮೇಲಿನ ಯುದ್ಧವಾಗಿರುತ್ತದೆ ಅಥವಾ ಪ್ರಾಯಃ ಇನ್ನೂ ಹೆಚ್ಚು ಕೇಡಿನದೆಂದರೆ ಬ್ರಿಟಿಷರು ಮತ್ತು ಮುಸ್ಲಿಮರು ಇಬ್ಬರ ಮೇಲಿನ ಸಂಯೋಜಿತ ಯುದ್ಧವಾಗಿರುತ್ತದೆ. ಈ ಪರಿಭಾವಿತವಾದ ಯುದ್ಧವು, ಹೇಗಿರುತ್ತದೆಂದು ನಾನು ಅಂಜಿದ್ದೇನೋ ಅದಕ್ಕಿಂತ ಹೇಗೆ ಭಿನ್ನವಾಗಿರುತ್ತದೆಂದು ನಾನು ನೋಡಲಾರೆ. ಮಾನ್ಯರೆ, ಅಮೆರಿಕದೊಡನೆ ಶಾಂತಿ ಸಂಧಾನವನ್ನು ಕುರಿತು ಬರ್ಕ್ ಮಾಡಿದ ಮಹಾನ್ ಭಾಷಣದ ಒಂದು ಉದ್ಧೃತಭಾಗವನ್ನು ಈ ಸದನಕ್ಕೆ ಓದಿಹೇಳಲು ನಾನು ಬಯಸುತ್ತೇನೆ. ಇದು ಈ ಸದನದ ಮನೋಧರ್ಮದ ಮೇಲೆ ಕೆಲಮಟ್ಟಿನ

ಪ್ರಭಾವಬೀರಬಹುದೆಂದು ನಾನು ನಂಬುತ್ತೇನೆ. ನೀವು ತಿಳಿದಿರುವಂತೆ ಬ್ರಿಟಿಷ್ ಜನರು ಸಂಯುಕ್ತ ಸಂಸ್ಥಾನಗಳ ಬಂಡಾಯಗಾರ ವಸಾಹತುಗಳನ್ನು ಗೆಲ್ಲಲು ಪ್ರಯತ್ನಿಸುತ್ತಿದ್ದರು ಮತ್ತು ಅವುಗಳ ಇಚ್ಛೆಗೆ ವಿರುದ್ಧವಾಗಿ ಸ್ವಾಧೀನಪಡಿಸಿಕೊಳ್ಳಲು ಬಯಸಿದ್ದರು. ವಸಾಹತುಗಳನ್ನು ಗೆಲ್ಲುವ ಈ ಯೋಚನೆಯನ್ನು ಧಿಕ್ಕರಿಸುತ್ತಾ ಬರ್ಕ ಹೇಳಿದ್ದು ಹೀಗೆ:

> ಮಾನ್ಯರೆ, ಮೊದನೆಯದಾಗಿ ಬಲಪ್ರಯೋಗವೊಂದನ್ನೇ ಮಾಡುವುದು ಕೇವಲ ತಾತ್ಕಾಲಿಕ ಎಂದು ಹೇಳಲು ನನಗೆ ಅನುಮತಿ ಕೊಡಿ. ಅದು ಕ್ಷಣಕಾಲ ನಿಗ್ರಹಿಸಬಹುದು; ಆದರೆ ಅದು ಮತ್ತೆ ನಿಗ್ರಹಿಸಬೇಕಾದ ಅಗತ್ಯವನ್ನು ನಿವಾರಿಸುವುದಿಲ್ಲ; ನಿರಂತರವಾಗಿ ಸ್ವಾಧೀನಪಡಿಸಿಕೊಳ್ಳಬೇಕಾಗುತ್ತಲೇ ಇರುವ ದೇಶವನ್ನು ಆಳಲಾಗುವುದಿಲ್ಲ.
>
> "ನನ್ನ ಮುಂದಿನ ಆಕ್ಷೇಪವೆಂದರೆ ಅದರ ಅನಿಶ್ಚಿತತೆ. ಒಂದು ತಿದ್ದುಪಡಿಯನ್ನು ಸದಾ ಬಲಾತ್ಕಾರವಾಗಿ ಹೇರುತ್ತಾ ಭೀತಿಯನ್ನುಂಟುಮಾಡುವುದು ವಿಜಯವಲ್ಲ. ನೀವು ಯಶಸ್ವಿಯಾಗದಿದ್ದರೆ ನಿಮಗೆ ಯಾವ ಆಕಾರವೂ ಉಳಿಯುವುದಿಲ್ಲ. ಶಾಂತಿ ಸಂಧಾನವು ವಿಫಲವಾದರೆ ಬಲಪ್ರಯೋಗವು ಉಳಿಯುತ್ತದೆ; ಆದರೆ ಬಲಪ್ರಯೋಗವು ವಿಫಲವಾದರೆ ಶಾಂತಿ ಸಂಧಾನದ ಯಾವ ನಿರೀಕ್ಷೆಯೂ ಉಳಿಯುವುದಿಲ್ಲ. ಅಧಿಕಾರ ಮತ್ತು ವಿಧಾಯಕ ಶಕ್ತಿಗಳನ್ನು ಕೆಲವು ಸಲ ದಯೆಯಿಂದ ಕೊಳ್ಳಲಾಗುತ್ತದೆ. ಆದರೆ ದರಿದ್ರೀಕರಿಸಿದ ಮತ್ತು ಸೋತ ಹಿಂಸೆಯಿಂದ ಅದನ್ನು ಭಿಕ್ಷೆ ಬೇಡಲಾಗುವುದಿಲ್ಲ.....
>
> "ಬಲಪ್ರಯೋಗಕ್ಕೆ ಮತ್ತಷ್ಟು ಆಕ್ಷೇಪವೆಂದರೆ, ಉದ್ದೇಶವನ್ನು ಸಂರಕ್ಷಿಸುವ ನಿಮ್ಮ ಪ್ರಯತ್ನದಲ್ಲೇ ಅದನ್ನು ನೀವು ಕುಗ್ಗಿಸುತ್ತೀರಿ. ನೀವು ಯಾವುದಕ್ಕೆ ಹೋರಾಡುತ್ತಿರೋ ಅದನ್ನು ನೀವು ಗಳಿಸುವುದಿಲ್ಲ. ಆದರೆ ಸ್ಪರ್ಧೆಯಲ್ಲಿ ಕೂಡದೆಂದು ಬೇಡುತ್ತೀರಿ, ಮುಳುಗಿಹೋಗುತ್ತೀರಿ ಮತ್ತು ಕ್ಷಯಿಸಿಹೋಗುತ್ತೀರಿ."

ಇವು ತೂಕದ ಮಾತುಗಳು. ಅವುಗಳನ್ನು ಕಡೆಗಣಿಸುವುದು ಗಂಡಾಂತರಕಾರಿ. ಹಿಂದೂ ಮುಸ್ಲಿಮ್ ಸಮಸ್ಯೆಯನ್ನು ಬಲಪ್ರಯೋಗದಿಂದ ಪರಿಹರಿಸಬಹುದು ಎಂಬ ಯೋಜನೆ ಯಾರದಾದರೂ ಮನದಲ್ಲಿ ಇದ್ದರೆ ಅದು ಯುದ್ಧದ ಮೂಲಕ ಪರಿಹರಿಸುವುದಕ್ಕೆ ಇನ್ನೊಂದು ಹೆಸರು ಅಷ್ಟೆ. ಮುಸ್ಲಿಮರ ಸಮ್ಮತಿಯಿಲ್ಲದೆ ಸಿದ್ಧಪಡಿಸಬಹುದಾದ ಸಂವಿಧಾನಕ್ಕೆ ಅವರನ್ನು ಅಧೀನಗೊಳಿಸಬೇಕೆಂಬ ಪ್ರಯತ್ನವನ್ನೇನಾದರೂ ಮಾಡಿದರೆ ಅದರಿಂದ ಅವರನ್ನು ನಿರಂತರವಾಗಿ ಬಲಪ್ರಯೋಗದಿಂದ ಗೆಲ್ಲುವುದರಲ್ಲಿಯೇ ಈ ದೇಶವು ತೊಡಗಿರಬೇಕಾಗುತ್ತದೆ. ಈ ವಿಜಯವು ಶಾಶ್ವತವಾದದ್ದಾಗಿರುವುದಿಲ್ಲ. ನಾನು ಈಗಾಗಲೇ ತೆಗೆದುಕೊಂಡಿರುವುದಕ್ಕಿಂತ ಹೆಚ್ಚಿನ ಸಮಯವನ್ನು ತೆಗೆದುಕೊಳ್ಳಲು ಬಯಸುವುದಿಲ್ಲ. ಮತ್ತೆ ಬರ್ಕ್ ಅವರನ್ನು ಉಲ್ಲೇಖಿಸುವ ಮೂಲಕವೇ ನಾನು ಮುಕ್ತಾಯಮಾಡುತ್ತೇನೆ. ಬರ್ಕ್ ಎಲ್ಲೋ ಒಂದು ಕಡೆ ಹೇಳಿದ್ದಾರೆ: "ಅಧಿಕಾರವನ್ನು ಕೊಡುವುದು ಸುಲಭ, ವಿವೇಕವನ್ನು ಕೊಡುವುದು ಕಷ್ಟ." ಈ ಸಭೆಯು ಸಾರ್ವಭೌಮ ಅಧಿಕಾರವನ್ನು ತನ್ನದಾಗಿ ಮಾಡಿಕೊಂಡಿದ್ದರೆ, ಅದನ್ನು ವಿವೇಕದಿಂದ ಪ್ರಯೋಗಿಸಲು ಸಿದ್ಧವಾಗಿದೆ ಎನ್ನುವುದನ್ನು ನಮ್ಮ ನಡವಳಿಕೆಯಿಂದ ಸಾಧಿಸಿ ತೋರಿಸೋಣ. ದೇಶದ ಎಲ್ಲ ವಿಭಾಗಗಳೊಡನೆ ವ್ಯವಹರಿಸಲು ನಮಗಿರುವುದು ಅದೊಂದೇ ಮಾರ್ಗ. ಒಗ್ಗಟ್ಟಿನೆಡೆಗೆ ನಮ್ಮನ್ನು ಕರೆದೊಯ್ಯಲು ಬೇರೆ ಮಾರ್ಗವೇ ಇಲ್ಲ. ಈ ವಿಷಯವಾಗಿ ನಾವು ಯಾವುದೇ ಅನುಮಾನವನ್ನು ಇಟ್ಟುಕೊಳ್ಳದಿರೋಣ.

**ಸರ್ದಾರ್ ಉಜ್ಜಲ್ ಸಿಂಗ್** (ಪಂಜಾಬ್ : ಸಿಖ್ಖ್) : ಮಾನ್ಯರೆ, ಪಂಡಿತ್ ಜವಾಹರಲಾಲ್ ನೆಹರು ಅವರು ಅತ್ಯಂತ ಸಮರ್ಥವಾಗಿ ಮತ್ತು ನಿರರ್ಗಳವಾದ ಮಾತುಗಾರಿಕೆಯಿಂದ ಮಂಡಿಸಿದ ನಿರ್ಣಯವನ್ನು ಸಮರ್ಥಿಸಲು ನಾನು ಇಲ್ಲಿ ಎದ್ದು ನಿಂತಿದ್ದೇನೆ. ಮಾನ್ಯರೆ, ನಮ್ಮ ಕೆಲಸವನ್ನು ಆರಂಭಿಸುವ ಮೊದಲು ನಮ್ಮ ಮುಂದೆ ನಾವು ಇಟ್ಟುಕೊಳ್ಳಬೇಕಾದ ಉದ್ದೇಶವನ್ನು ಈ ನಿರ್ಣಯವು ಈ ಸಭೆಯ ಮುಂದೆ ಇರಿಸಿದೆ. ಜನರಿಗಾಗಿ ಮತ್ತು ಜನರಿಂದ ಸ್ವಾತಂತ್ರ್ಯದ ಒಂದು ಸನ್ನದನ್ನು ಮತ್ತು ಆಡಳಿತದ ಒಂದು

ಯೋಜನೆಯನ್ನು ಸಿದ್ಧಪಡಿಸಲು ಈ ದೇಶದ ಆಯ್ದ ಪ್ರತಿನಿಧಿಗಳು ಇಲ್ಲಿ ಸಭೆ ಸೇರಿರುವುದು ನಿಸ್ಸಂಶಯವಾಗಿಯೂ ಭಾರತದ ಇತಿಹಾಸದಲ್ಲಿ ಒಂದು ಅದ್ವಿತೀಯವಾದ ಮತ್ತು ಮಹತ್ವಪೂರ್ಣವಾದ ಸಂದರ್ಭ. ಮಾನ್ಯರೆ, ನಾವು ಕೆಲಸ ಮಾಡಲು ಕೂಡುವ ಮೊದಲು ಈ ದೇಶದ ಕೋಟ್ಯಂತರ ಜನ ಮೂಕ ಪ್ರೇಕ್ಷಕರಿಗೆ ಮತ್ತು ಈ ಕ್ಷಣದಲ್ಲಿ ನಮ್ಮಮೇಲೆ ಕಣ್ಣು ನೆಟ್ಟಿರುವ ಹೊರಜಗತ್ತಿಗೆ ಭರವಸೆ ಮತ್ತು ಉಲ್ಲಾಸದ ಒಂದು ಸಂದೇಶವನ್ನು ನಾವು ಕಳುಹಿಸಬೇಕು. ಸ್ವಾತಂತ್ರ್ಯವನ್ನು ಗಳಿಸಲು ಕಳೆದ ಅನೇಕ ವರ್ಷಗಳಿಂದ ಕಷ್ಟಪಟ್ಟು ಹೋರಾಡುತ್ತಿರುವ ಕೋಟ್ಯಂತರ ಜನರಿಗೆ ಈ ನಿರ್ಣಯವು ಹೊಸ ಭರವಸೆಯೊಂದನ್ನು ಮತ್ತು ಅವರ ಕನಸುಗಳ ಕ್ಷಿಪ್ರ ಸಾಕ್ಷಾತ್ಕಾರವನ್ನು ನೀಡುತ್ತದೆ ಎಂದು ನಾನು ನಂಬಿದ್ದೇನೆ. ಮಾನ್ಯರೆ, ಬೇರೆ ಸ್ವಾತಂತ್ರ್ಯ ಹೋರಾಟಗಳಂತೆ ಈ ಪ್ರಕರಣದಲ್ಲೂ ಇತಿಹಾಸದ ಪುನರಾವರ್ತನೆಯಾಗುತ್ತದೆ. ಇಷ್ಟು ದೀರ್ಘವಾಗಿ ಮತ್ತು ಇಷ್ಟು ಕಷ್ಟಪಟ್ಟು ಹೋರಾಡಬೇಕಾಗಿರುವುದು ನಮ್ಮ ದೇಶ ಒಂದೇ ಅಲ್ಲ. ಸ್ವಾತಂತ್ರ್ಯ ದೇವತೆಯು ತನಗೆ ಸಲ್ಲಬೇಕಾದ ಬಲಿದಾನವನ್ನು ಎಲ್ಲರಿಂದಲೂ ತೆಗೆದುಕೊಳ್ಳುತ್ತಾಳೆ. ಹೋರಾಟವು ಬೇರೆಡೆ ಹಿಂಸಾತ್ಮಕವಾಗಿರಬಹುದು, ಆದರೆ ಈ ದೇಶದಲ್ಲಿ ಅಹಿಂಸಾತ್ಮಕವಾಗಿದೆ. ಇದಕ್ಕಾಗಿ ಮತ್ತು ಈ ದೇಶವು ಯಾವುದರ ಪರವಾಗಿ ನಿಂತಿದೆಯೋ ಅಂತಹ ಅನೇಕ ಸಂಗತಿಗಳಿಗಾಗಿ ಮತ್ತು ಭವಿಷ್ಯದಲ್ಲಿ ಸಾಧಿಸಲಿರುವ ಭರವಸೆಗಳಿಗಾಗಿ ಪ್ರಚಂಡ ಧೀಮಂತ ಮಹಾತ್ಮಗಾಂಧಿ ಅವರಿಗೆ ಅಪಾರವಾದ ಕೃತಜ್ಞತೆಗಳನ್ನು ನಾವು ಸಲ್ಲಿಸಬೇಕು. ಅವರನ್ನು ಪಂಡಿತ್ ನೆಹರು ಅವರು, ರಾಷ್ಟ್ರಪಿತ ಎಂದು ವರ್ಣಿಸಿದ್ದಾರೆ.

ಸ್ವಾಮಿ, ಈ ಸಂವಿಧಾನ ರಚನಾಸಭೆಯು ಈ ಸ್ವಾತಂತ್ರ್ಯ ಹೋರಾಟದ ಅಂತಿಮ ಹಂತದ ಪರಾಕಾಷ್ಠೆಯಾಗಿದೆ. ಈ ಸದನದ ಮುಂದಿರುವ ನಿರ್ಣಯವು ಈ ದೇಶದ ಕೋಟ್ಯಂತರ ಜನರ ಅದುಮಿಟ್ಟ ಭಾವನೆಗಳ ಒಂದು ಅಭಿವ್ಯಕ್ತಿಯಾಗಿದೆ. ಅದನ್ನು ಮೂರು ಭಾಗಗಳಾಗಿ ವಿಭಾಗಿಸಬಹುದು. ಮೊದಲನೆಯ ಭಾಗವು ಒಂದು ಸ್ವತಂತ್ರ ಸಾರ್ವಭೌಮ ಭಾರತ ಗಣರಾಜ್ಯದ ಘೋಷಣೆಯೊಡನೆ ವ್ಯವಹರಿಸುತ್ತದೆ. ಎರಡನೆಯದು ಭಾರತೀಯ ರಾಜ್ಯಗಳನ್ನು ಒಳಗೊಂಡಂತೆ ಉಳಿಕೆ ಅಧಿಕಾರವನ್ನು ಹೊಂದಿರುವ ಸ್ವಯಮಾಧಿಕಾರದ ಘಟಕಗಳ ಒಕ್ಕೂಟವನ್ನು ಕುರಿತು ವ್ಯವಹರಿಸುತ್ತದೆ. ಮೂರನೆಯ ಭಾಗವು ಸರ್ವರಿಗೂ ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯ ಮತ್ತು ನ್ಯಾಯ ಹಾಗೂ ಅಲ್ಪಸಂಖ್ಯಾತರಿಗೆ, ಹಿಂದುಳಿದ ವರ್ಗದವರಿಗೆ ಮತ್ತು ಬುಡಕಟ್ಟು ಪ್ರದೇಶಗಳಿಗೆ ಸಮರ್ಪಕ ಸುರಕ್ಷತೆಯನ್ನು ಒದಗಿಸುವುದನ್ನು ಕುರಿತು ವ್ಯವಹರಿಸುತ್ತದೆ. ನಿರ್ಣಯದ ನಿಖರವಾದ ಪದವಿನ್ಯಾಸ ಅಥವಾ ಕೆಲವು ವಿಚಾರಗಳಲ್ಲಿರುವ ಸಂಕ್ಷಿಪ್ತತೆಯನ್ನು ಕುರಿತಂತೆ ಅಭಿಪ್ರಾಯಗಳು ಬೇರೆ ಬೇರೆಯಾಗಿರಬಹುದು. ಆದರೆ ಒಟ್ಟಾಗಿ ತೆಗೆದುಕೊಂಡಾಗ ಅದು ಈ ದೇಶದ ಜನರ ಸಂಕಲ್ಪದ ಅಭಿವ್ಯಕ್ತಿಯಾಗಿದೆ.

ಮಾನ್ಯರೆ, ನನ್ನ ಗೌರವಾನ್ವಿತ ಮಿತ್ರರಾದ ಡಾ. ಜಯಕರ್ ಅವರನ್ನು ಕುರಿತಂತೆ ನನಗೆ ಅತ್ಯುನ್ನತವಾದ ಗೌರವವಿದೆ. ಅವರು ಈ ನಿರ್ಣಯದ ಮಂಡನೆಗೆ ಮತ್ತು ಸದನದಲ್ಲಿ ಈ ಹಂತದಲ್ಲಿ ಅದನ್ನು ಪರಿಗಣನೆಗೆ ತೆಗೆದುಕೊಳ್ಳುವುದಕ್ಕೆ ಆಕ್ಷೇಪಣೆಯನ್ನು ಎತ್ತಿದ್ದಾರೆ. ಅದಕ್ಕೆ ಅವರು ಕೊಟ್ಟಿರುವ ಆಧಾರವೆಂದರೆ, ಈ ಪೂರ್ವಭಾವಿ ಅಧಿವೇಶನದಲ್ಲಿ ಸಂಪುಟ ನಿಯೋಗದ ಹೇಳಿಕೆಯ ೧೯ನೇ ಕಂಡಿಕೆಯಲ್ಲಿ ಕೊಟ್ಟಿರುವ ಮೂರು ಅಂಶಗಳನ್ನು ಹೊರತುಪಡಿಸಿ ಬೇರೆ ಸಂಗತಿಗಳನ್ನು ತೆಗೆದುಕೊಳ್ಳಲು ತಡೆಹಾಕಲಾಗಿದೆ. ಮೇಲಾಗಿ ಅವರು ಸೂಚಿಸಿರುವುದೇನೆಂದರೆ ಕ್ರಿಸ್‌ಮಸ್‌ಗಾಗಿ ನಾವು ಈ ಸಭೆಯನ್ನು ಮುಂದೂಡಿ ಮತ್ತೆ ಜನವರಿ ೨೦ ರಂದು ಸಭೆ ಸೇರಿದಾಗ ಈ ವಿಚಾರವನ್ನು ಎತ್ತಿಕೊಳ್ಳುವುದು ಸೂಕ್ತ. ನನ್ನ ಗೌರವಾನ್ವಿತ ಮಿತ್ರರಿಗೆ ಪ್ರಾಯಃ ತಿಳಿದಿದೆ. ನಮ್ಮ ಅಪೂರ್ಣವಾದ ವ್ಯವಹಾರವನ್ನು ಮುಕ್ತಾಯ ಮಾಡಲು ಜನವರಿ ೨೦ ರಂದು ನಾವು ಮತ್ತೆ ಸಭೆಸೇರಿದಾಗ ಅದೂ ಕೂಡ ಇನ್ನೂ ಪೂರ್ವಭಾವಿ ಅಧಿವೇಶನವೇ ಆಗಿರುತ್ತದೆ. ಅವರು ಈ ನಿರ್ಣಯವನ್ನು ಇಂದು ಪರಿಗಣನೆಗೆ ತೆಗೆದುಕೊಳ್ಳುವುದಕ್ಕೆ ಆಕ್ಷೇಪಿಸಿದರೆ, ಜನವರಿ ೨೦ ರಂದು ನಾವು ಮತ್ತೆ ಸಭೆ

ಸೇರಿದಾಗ ಕೂಡ ಅವರ ಆಕ್ಷೇಪವು ಅನ್ವಯವಾಗುತ್ತದೆ. (ಕೇಳಿ, ಕೇಳಿ!)

ಮಾನ್ಯರೆ, ಅವರು ಸೂಚಿಸಿದ ಎರಡನೆಯ ಅಂಶವೆಂದರೆ ಅದರ ಪರಿಗಣನೆಯನ್ನು ಕೆಲವು ವಾರಗಳ ಕಾಲ ಮುಂದೂಡಬೇಕು. ಅದರಿಂದಾಗಿ ಈ ವಿಷಯವನ್ನು ಕುರಿತು ಮುಸ್ಲಿಮ್ ಲೀಗ್ ಮತ್ತು ರಾಜ್ಯಗಳಿಗೆ ತಮ್ಮ ಅಭಿಪ್ರಾಯವನ್ನು ತಿಳಿಸಲು ಒಂದು ಅವಕಾಶ ದೊರೆತಂತಾಗುತ್ತದೆ. ಇಂದು ಈ ಸದನದಲ್ಲಿ ಮುಸ್ಲಿಮ್ ಲೀಗ್ ಹಾಜರಾಗಿಲ್ಲದಿರುವುದಕ್ಕೆ ಬಹಳವಾಗಿ ವಿಷಾದಿಸುವವರಲ್ಲಿ ನಾನೂ ಒಬ್ಬ. ಅಲ್ಲದೆ ಮುಸ್ಲಿಮ್ ಲೀಗ್‌ನ ಸಹಕಾರಕ್ಕೆ ನಾನು ಬೆಲೆಕೊಡುತ್ತೇನೆ ಮತ್ತು ಅದನ್ನು ಕೋರುತ್ತೇನೆ. ಆದರೆ ಇಂದು ಆ ಸ್ನೇಹಿತರು ಗೈರುಹಾಜರಾಗಿರುವುದಕ್ಕೆ ಈ ಸದನದ ದೋಷವು ಕಾರಣವಲ್ಲ ಮತ್ತು ಅವರು ಎಂದು ನಮ್ಮನ್ನು ಸೇರಬಹುದು ಎನ್ನುವುದು ಕೂಡ ನಮಗೆ ಗೊತ್ತಿಲ್ಲ. ಆದ್ದರಿಂದ ಇನ್ನೊಂದು ಪಕ್ಷವು ಎಂದು ಒಳಗೆ ಬರುತ್ತದೆ ಎಂದು ತಿಳಿಯದೆ ಇಲ್ಲಿ ಸಭೆ ಸೇರಿರುವ ಸದನವು ಅನಿರ್ದಿಷ್ಟಕಾಲ ಕಾಯುವುದು ನ್ಯಾಯಸಮ್ಮತವಲ್ಲ. ಇನ್ನು ರಾಜ್ಯಗಳ ಬಗೆಗೆ ಹೇಳುವುದಾದರೆ ನಮ್ಮ ಗೌರವಾನ್ವಿತ ಸದಸ್ಯರು ರಾಜ್ಯಪತ್ರವನ್ನು ಅಧ್ಯಯನ ಮಾಡಿದರೆ ಅವರಿಗೆ ಗೋಚರಿಸುವುದೇನೆಂದರೆ, ನಾವು ನಮ್ಮ ಪ್ರಾಂತೀಯ ಸಂವಿಧಾನವನ್ನು ಮುಗಿಸಿ ಕೇಂದ್ರ ಸಂವಿಧಾನವನ್ನು ರಚಿಸಲು ಪುನಃ ಸಭೆ ಸೇರಿದಾಗ ಆ ಕೊನೆಯ ಹಂತದಲ್ಲಿ ರಾಜ್ಯಗಳು ಆಗಮಿಸುತ್ತವೆ ಎಂದು ಅಲ್ಲಿ ಸ್ಪಷ್ಟವಾಗಿ ವಿಧಿಸಲಾಗಿದೆ. ನಮ್ಮ ಸಂವಿಧಾನದ ಬಹುಪಾಲು ರಚನೆಯಾಗಿರುವ ಕೊನೆಯ ಹಂತಕ್ಕೆ ಈ ಸ್ವರೂಪದ ಒಂದು ನಿರ್ಣಯವನ್ನು ನಾವು ಮುಂದೂಡಬೇಕೆ? ಇಷ್ಟು ಮಹತ್ತ್ವದ ಈ ನಿರ್ಣಯವನ್ನು ನಮ್ಮ ಕೆಲಸದ ಪ್ರಾರಂಭದ ಹಂತದಲ್ಲೇ ಪರಿಗಣಿಸಬೇಕು ಮತ್ತು ಅಂಗೀಕರಿಸಬೇಕು.

ಈ ನಿರ್ಣಯವನ್ನು ಕುರಿತು ಡಾ. ಅಂಬೇಡ್ಕರ್ ಅವರು ಎತ್ತಿದ ಇನ್ನೊಂದು ಆಕ್ಷೇಪವೆಂದರೆ "ಗುಂಪುಗೂಡಿಸುವುದು" ಎಂಬ ಶಬ್ದವನ್ನು ಅದರಲ್ಲಿ ಎಲ್ಲಿಯೂ ಪ್ರಸ್ತಾವಿಸಿರುವುದು ಅವರಿಗೆ ಕಂಡುಬಂದಿಲ್ಲ ಎನ್ನುವುದು. ಡಾ. ಅಂಬೇಡ್ಕರ್ ಅವರು ತಿಳಿಯಬೇಕಾದ ಸಂಗತಿಯೇನೆಂದರೆ ಗುಂಪುಗೂಡಿಸುವುದು ಒಂದು ಐಚ್ಛಿಕ ವಿಷಯ ಮತ್ತು ನಾನು ಹೀಗೆ ಹೇಳಬಹುದಾದರೆ, ನಮ್ಮಲ್ಲಿ ಬಹುಪಾಲು ಎಲ್ಲರೂ ಗುಂಪುಗೂಡಿಸುವುದಕ್ಕೆ ವಿರುದ್ಧವಾಗಿದ್ದೇವೆ. ರಾಜ್ಯಪತ್ರ ಕೂಡ ಅದನ್ನು ವಿಭಾಗಗಳು ಅಥವಾ ಪ್ರಾಂತ್ಯಗಳ ಆಯ್ಕೆಗೆ ಬಿಟ್ಟಿದೆ. ಈ ಬಗೆಯ ಒಂದು ನಿರ್ಣಯದಲ್ಲಿ ಮಂಡನೆಕಾರರು, ವಿಭಾಗಗಳು ಬೇರೆಯ ರೀತಿಯಲ್ಲಿ ತೀರ್ಮಾನಿಸಬಹುದಾದ ಅಥವಾ ಪ್ರಾಂತ್ಯಗಳು ಬೇರೆಯ ರೀತಿಯಲ್ಲಿ ತೀರ್ಮಾನಿಸಬಹುದಾದ ಅಂಶವನ್ನು ಸೇರಿಸಲಿಕ್ಕಾಗಲಿಲ್ಲ. ಭಾರತದ ರಾಜ್ಯಗಳು ಈ ನಿರ್ಣಯದಲ್ಲಿ "ಗಣರಾಜ್ಯ" ಎಂಬ ಶಬ್ದಗಳನ್ನು ಉಪಯೋಗಿಸಿರುವುದಕ್ಕೆ ಕೆಲಮಟ್ಟಿನ ಆಕ್ಷೇಪವನ್ನು ವ್ಯಕ್ತಪಡಿಸಬಹುದು. ಭಾರತದ ರಾಜ್ಯಗಳಿಗೆ ರಾಜಪ್ರಭುತ್ವ ಮಾದರಿಯ ಸರ್ಕಾರವು ಅಭ್ಯಾಸವಾಗಿಹೋಗಿದೆ. ಅವುಗಳಿಗೆ ಆ ವಿಚಾರವಾಗಿ ಕೆಲಮಟ್ಟಿನ ಭೀತಿ ಇರಬಹುದು. ಆದರೆ ಪಂಡಿತ್ ನೆಹರೂಜಿ ಭಾಷಣದ ಬೆಳಕಿನಲ್ಲಿ ಅಂತಹ ಭೀತಿಗಳು ಸಂಪೂರ್ಣ ಅಸಮರ್ಥನೀಯ ಎಂದು ಕಂಡುಬರುತ್ತದೆ. ಭಾರತದ ಗಣರಾಜ್ಯದಲ್ಲಿ ಒಂದು ರಾಜ್ಯದ ಪ್ರಜೆಗಳು ದೇಶದ ತಮ್ಮ ಭಾಗದಲ್ಲಿ ರಾಜಪ್ರಭುತ್ವ ಮಾದರಿಯ ಸರ್ಕಾರವನ್ನು ಉಳಿಸಿಕೊಳ್ಳಬೇಕೆಂದು ಬಯಸಿದರೆ ಹಾಗೆ ಮಾಡಬಹುದು.

ಮಾನ್ಯರೆ, ನಾನು ನಂಬುವುದೇನೆಂದರೆ ಈ ಸಂವಿಧಾನ ರಚನಾಸಭೆಯ ಪರಿಶ್ರಮದಿಂದ ಹೊರಹೊಮ್ಮುವ ಕರಾರುವಾಕ್ಕಾದ ಯೋಜನೆಯು ಹೇಗಿರುತ್ತದೆಂದರೆ ಭಾರತೀಯ ಜೀವನದ ಎಲ್ಲ ಅಂಗಗಳಿಗೆ ಸ್ವೀಕಾರಾರ್ಹವಾಗಿರುತ್ತದೆ ಮತ್ತು ಈ ದೇಶದ ಪ್ರತಿಭೆಗಳಿಗೆ ಮತ್ತು ವಿಶಿಷ್ಟ ಪರಿಸ್ಥಿತಿಗಳಿಗೆ ಸರಿಹೊಂದುವಂತಿರುತ್ತದೆ.

ನಿರ್ಣಯದ ಎರಡನೆಯ ಭಾಗವು ಒಕ್ಕೂಟ ಮತ್ತು ಸ್ವಯಮಾಧಿಕಾರದ ಘಟಕಗಳು ಮತ್ತು ಘಟಕಗಳಿಗೆ ನೀಡಿದ ಉಳಿಕೆ ಹಕ್ಕುಗಳನ್ನು ಕುರಿತು ವ್ಯವಹರಿಸುತ್ತದೆ. ಈ ಘಟಕಗಳಿಗೆ ಉಳಿಕೆ ಹಕ್ಕುಗಳನ್ನು ನೀಡಲಾಗುತ್ತಿರುವುದಕ್ಕೆ ನಮ್ಮಲ್ಲಿ ಕೆಲವರಿಗೆ ಗಂಭೀರವಾದ ಆಕ್ಷೇಪಗಳಿರಬಹುದು. ಆದರೆ ಈ ಪ್ರಸ್ತಾವವು ರಾಜ್ಯಪತ್ರದ ಯೋಜನೆಗೆ ಅನುಗುಣವಾಗಿದೆ ಮತ್ತು ಅದು ಕಂಡಿಕೆ ೧೫ ರ ಅತ್ಯಾವಶ್ಯಕವಾದ ಭಾಗವಾಗಿದೆ.

ಅದು ನಮ್ಮಲ್ಲಿ ಬಹುಪಾಲು ಜನರಿಗೆ ಕಹಿಗುಳಿಗೆಯಾಗಿರಬಹುದು, ಆದರೆ ಅದನ್ನು ನುಂಗಲೇಬೇಕಾಗಿದೆ.

ಈ ನಿರ್ಣಯದ ಮೂರನೆಯ ಭಾಗವು ಅಲ್ಪಸಂಖ್ಯಾತರಿಗೆ ಮತ್ತು ಹಿಂದುಳಿದ ವರ್ಗಗಳವರಿಗೆ ಅವರ ಹಿತಾಸಕ್ತಿಗಳನ್ನು ಸಮರ್ಪಕವಾಗಿ ರಕ್ಷಿಸಲಾಗುವುದು ಎಂದು ಭರವಸೆಯನ್ನು ಕೊಡುತ್ತದೆ. ಮಾನ್ಯರೆ, ಈ ವಿಚಾರವಾಗಿ ನಮ್ಮ ಸಮುದಾಯವು ಭಾವಿಸುವುದೇನೆಂದರೆ ಸಿಖ್ಖರಿಗೆ ಮತ್ತು ಇತರ ಸಂಬಂಧಪಟ್ಟ ಅಲ್ಪಸಂಖ್ಯಾತರಿಗೆ ಒದಗಿಸುವ ಸುರಕ್ಷತೆಯು ಸಮರ್ಪಕವಾಗಿರುವುದಷ್ಟೇ ಅಲ್ಲದೆ ತೃಪ್ತಿಕರವಾಗಿರಬೇಕು. ಮಾನ್ಯರೆ, ನಿಮ್ಮ ಅನುಮತಿಯೊಡನೆ ಭಾರತದ ರಾಷ್ಟ್ರೀಯ ಕಾಂಗ್ರೆಸ್‌ನ ಲಾಹೋರ್ ಅಧಿವೇಶನದಲ್ಲಿ ಅಂಗೀಕರಿಸಲಾದ ೧೯೨೯ ರ ಡಿಸೆಂಬರ್‌ನ ಕಾಂಗ್ರೆಸ್ ನಿರ್ಣಯದಲ್ಲಿ ಸಿಖ್ಖರಿಗೆ ನೀಡಲಾದ ವಿಧ್ಯುಕ್ತ ಭರವಸೆಯನ್ನು ಈ ಸದನಕ್ಕೆ ಪರಿಚಯ ಮಾಡಿಕೊಡಲು ಬಯಸುತ್ತೇನೆ. ಸಿಖ್ ಮತ್ತು ಅಲ್ಪಸಂಖ್ಯಾತರಿಗೆ ಸಂಬಂಧಿಸಿದ ನಿರ್ಣಯದ ಪ್ರಸಕ್ತ ಭಾಗ ಹೀಗಿದೆ:

> "ಭಾರತದ ಯಾವುದೇ ಭಾವೀ ಸಂವಿಧಾನದಲ್ಲೂ ಮುಸ್ಲಿಮರಿಗೆ, ಸಿಖ್ಖರಿಗೆ ಮತ್ತು ಇತರ ಅಲ್ಪಸಂಖ್ಯಾತರಿಗೆ ಸಂಪೂರ್ಣ ತೃಪ್ತಿಯನ್ನು ನೀಡದಿರುವಂತಹ ಯಾವುದೇ ಪರಿಹಾರವೂ (ಅಂದರೆ ಕೋಮುವಾರು ಸಮಸ್ಯೆ ಕುರಿತು) ಕಾಂಗ್ರೆಸ್‌ಗೆ ಅಂಗೀಕಾರಾರ್ಹವಲ್ಲ."

ಈ ನಿರ್ಣಯವನ್ನು ಅಂಗೀಕರಿಸಿದ ದಿನದಿಂದಲೂ ಸಿಖ್ಖರು ಇದನ್ನು ಒಂದು ಸಮಸ್ತರ ಉದ್ದೇಶವನ್ನಾಗಿ ಮಾಡಿಕೊಂಡರು ಮತ್ತು ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಕಾಂಗ್ರೆಸ್‌ನ ಹೆಗಲೆಣೆಯಾಗಿ ನಿಂತು ಕಾದಿದರು. ದುರದೃಷ್ಟವಶಾತ್, ಬ್ರಿಟಿಷ್ ನಿಯೋಗವು ಬಂದು ತನ್ನ ಪ್ರಸ್ತಾವಗಳನ್ನು ರೂಪಿಸಿದಾಗ, ಅಂದರೆ ಮೇ ೧೬ರ ಹೇಳಿಕೆ, ಭಾರತದ ಮೂರು ಪ್ರಮುಖ ಸಮುದಾಯಗಳಲ್ಲಿ ಸಿಖ್ಖರದೂ ಒಂದು ಎಂದು ಅವರು ಒಪ್ಪಿಕೊಂಡರೂ, ಅವರು ಸಿಖ್ಖರಿಗೆ ರಕ್ಷಣೆ ಅಥವಾ ಸುರಕ್ಷತೆಯನ್ನು ನೀಡುವಲ್ಲಿ ಸಂಪೂರ್ಣವಾಗಿ ವಿಫಲರಾದರು. ಆದರೆ ಮುಸಲ್ಮಾನರ ವಿಷಯದಲ್ಲಿ ಈ ನಿಯೋಗವು ಎತ್ತಿ ತೋರಿಸಿದ್ದೇನೆಂದರೆ ಅವರ ರಾಜಕೀಯ ಮತ್ತು ಸಾಮಾಜಿಕ ಜೀವನವು ಏಕೀಕೃತ ಭಾರತದಲ್ಲಿ ಮುಳುಗಿಹೋಗುವುದರಿಂದ ಅವರ ಸಂಸ್ಕೃತಿಗೆ ನಿಜವಾಗಿಯೂ ಭೀತಿಯುಂಟಾಗಿದೆ. ಆ ಏಕೀಕೃತ ಭಾರತದಲ್ಲಿ ಹಿಂದೂಗಳೇ ಪ್ರಬಲವಾದ ಅಂಗವಾಗಿರುತ್ತಾರೆ. ಆದರೆ ಅವರು ಮುಸ್ಲಿಮರ ಬಹುಸಂಖ್ಯೆಯ ಅಡಿಯಲ್ಲಿ ಸಿಖ್ಖರ ಪವಿತ್ರಭೂಮಿ ಮತ್ತು ಮಾತೃಭೂಮಿಯಾದ ಪಂಜಾಬಿನಲ್ಲಿ ಸಿಖ್ಖರ ಅದೇ ದುರವಸ್ಥೆಯನ್ನು ಮನಗಾಣುವಲ್ಲಿ ವಿಫಲರಾದರು. ಮುಸ್ಲಿಮರಿಗೆ ಒಕ್ಕೂಟದಲ್ಲಿ ಒದಗಿಸಿದಂತೆ ಸಿಖ್ಖರಿಗೆ ಪಂಜಾಬಿನಲ್ಲಿ ಮತ್ತು 'ಬಿ' ವಿಭಾಗದಲ್ಲಿ ಅದೇ ಬಗೆಯ ಸುರಕ್ಷತೆಯನ್ನು ಒದಗಿಸದೇ ಇರುವುದು ಸಂಪುಟ ನಿಯೋಗದ ಅತಿದೊಡ್ಡ ಅನ್ಯಾಯ. ಸರ್ ಸ್ಟ್ಯಾಫರ್ಡ್ ಕ್ರಿಪ್ಸ್ ಇನ್ನೊಂದು ದಿನ ಹೌಸ್ ಆಫ್ ಕಾಮನ್ಸ್‌ನಲ್ಲಿ ಮಾತನಾಡುತ್ತಾ ಹೇಳಿದ್ದೇನೆಂದರೆ ಮುಸಲ್ಮಾನರಿಗೆ ಒಕ್ಕೂಟದಲ್ಲಿ ನೀಡಿದ್ದಂತಹುದೇ ಹಕ್ಕುಗಳನ್ನು ಸಿಖ್ಖರಿಗೆ ಅವರು ಕೊಡಲು ಸಾಧ್ಯವಾಗಲಿಲ್ಲ. ಏಕೆಂದರೆ ಅದೇ ರೀತಿಯ ಹಕ್ಕುಗಳನ್ನು ಇತರ ಅಲ್ಪಸಂಖ್ಯಾತರಿಗೂ ಕೊಡಬೇಕಾಗಿ ಬರುತ್ತಿತ್ತು. ಒಕ್ಕೂಟದ ಕೇಂದ್ರದಲ್ಲಿ ಮುಸಲ್ಮಾನರಿಗೆ ಸುರಕ್ಷತೆಯನ್ನು ಅವರು ಒದಗಿಸಿದಾಗ ಈ ನಿಯೋಗವು ಇತರ ಅಲ್ಪ ಸಂಖ್ಯಾತರನ್ನು ಪರಿಗಣನೆಗೆ ತೆಗೆದುಕೊಂಡಿತ್ತೆ ಎಂದು ನಾನು ಕೇಳಬಹುದೇ? ಸಿಖ್ಖರು ಭಾರತದ ಪ್ರಮುಖ ಸಮುದಾಯಗಳಲ್ಲಿ ಒಬ್ಬರು ಎಂದು ಅವರು ಒಪ್ಪಿಕೊಂಡಿದ್ದರೂ ಸಿಖ್ಖರನ್ನು ಅವರು ಪರಿಗಣಿಸಿರಲಿಲ್ಲ. ಇನ್ನೊಂದು ಕಡೆಯಿಂದ ನೋಡಿದರೆ ಮುಸಲ್ಮಾನರಿಗೆ ಒಕ್ಕೂಟ ಕೇಂದ್ರದಲ್ಲಿ ಇರುವುದಕ್ಕಿಂತ ಪ್ರಬಲವಾದ ಹಕ್ಕು ಕೇಳಿಕೆಯು ಸಿಖ್ಖರಿಗೆ ಪಂಜಾಬಿನಲ್ಲಿ ಅದೇ ರೀತಿಯ ಸುರಕ್ಷತೆಯನ್ನು ಕೇಳುವುದರಲ್ಲಿದೆ ಎಂದು ನಾನು ಭಾವಿಸುತ್ತೇನೆ. ನಾನು ಮತ್ತೂ ಭಾವಿಸುವುದು ಹಾಗೂ ನಂಬುವುದು ಏನೆಂದರೆ ಸಿಖ್ಖರಿಗೆ 'ಬಿ' ವಿಭಾಗ ಮತ್ತು ಪಂಜಾಬಿನಲ್ಲಿ ನೀಡುವ ಸುರಕ್ಷತೆಯು ಅದೇ ಪ್ರದೇಶದಲ್ಲಿರುವ ಇತರ ಅಲ್ಪಸಂಖ್ಯಾತರ ರಕ್ಷಣೆ ಮತ್ತು ಹಕ್ಕುಗಳ ಖಾತರಿ ಎಂದಾಯಿತು. ಆದರೆ ನಿಯೋಗವು ಏನನ್ನೂ ಮಾಡದಿದ್ದಾಗ ಸಂಪೂರ್ಣ ಸಿಖ್ ಸಮುದಾಯದಾದ್ಯಂತ ಕ್ರೋಧದ ಅಲೆಯೊಂದು

ಎದ್ದಿತು, ಮತ್ತು ಅವರ ಕ್ರೋಧವು ಪರಾಕಾಷ್ಠೆಗೆ ಏರಿತು. ಸಿಖ್ಖರ ಪವಿತ್ರ ಕೇಂದ್ರವಾದ ಅಮೃತಸರದಲ್ಲಿ ಸಿಖ್ಖರ ಒಂದು ವಿಶೇಷವಾದ ಸಭೆಯನ್ನು ನಡೆಸಿ ಸಂವಿಧಾನ ರಚನಾಸಭೆಯನ್ನು ಬಹಿಷ್ಕರಿಸಬೇಕು ಎಂದು ಒಂದು ಗೊತ್ತುವಳಿಯನ್ನು ಅಂಗೀಕರಿಸಲಾಯಿತು. ಮತ್ತು ಸಿಖ್ಖರು ನಿಜವಾಗಿಯೂ ಈ ಸಭೆಯನ್ನು ಬಹಿಷ್ಕರಿಸಿದರು. ಆದರೆ ಕಾಂಗ್ರೆಸ್ ಸಂಪುಟ ನಿಯೋಗದ ಪ್ರಸ್ತಾವಗಳನ್ನು ಅಂಗೀಕರಿಸಿತು ಮತ್ತು ಕಾಂಗ್ರೆಸ್‌ನ ಪ್ರಖ್ಯಾತ ನಾಯಕರು ಈ ಪ್ರಸ್ತಾವಗಳನ್ನು ಸಿಖ್ಖರು ಅಂಗೀಕರಿಸುವಂತೆ ಮನವಿಮಾಡಿಕೊಂಡರು. ಸರ್ದಾರ್ ಪಟೇಲ್ ಅವರು ಬಾಂಬೆಯಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಅಧಿವೇಶನದಲ್ಲಿ ವಿಶೇಷವಾಗಿ ಸಿಖ್ಖರ ಪರವಾಗಿ ವಾದಮಾಡಿದರು. ನಮ್ಮ ಹೃತ್ಪೂರ್ವಕ ಕೃತಜ್ಞತೆಗಳು ಅವರಿಗೆ ಸಲ್ಲುತ್ತವೆ. ಕಳೆದ ಜುಲೈ ೧೮ ರಂದು ಹೌಸ್ ಆಫ್ ಲಾರ್ಡ್ಸ್‌ನಲ್ಲಿ ನಡೆದ ಒಂದು ಚರ್ಚೆಯಲ್ಲಿ ಮಾತನಾಡುತ್ತಾ ರಾಜ್ಯ ಕಾರ್ಯದರ್ಶಿಯವರು ಕೆಳಕಂಡ ಮಾತುಗಳಲ್ಲಿ ಸಿಖ್ಖರನ್ನು ಕುರಿತು ಗಮನಾರ್ಹ ಉಲ್ಲೇಖವನ್ನು ಮಾಡಿದರು.

"ಹೇಗಾದರೂ ಅವರ ಹಕ್ಕು ಕೇಳಿಕೆಗಳಿಗೆ ಸಂಪೂರ್ಣವಾದ ಪರಿಗಣನೆಯನ್ನು ಕೊಡಬೇಕಾದುದು ಅತ್ಯಾವಶ್ಯಕ ಏಕೆಂದರೆ ಅವರು ಒಂದು ವಿಶಿಷ್ಟವಾದ ಮತ್ತು ಮುಖ್ಯವಾದ ಸಮುದಾಯವಾಗಿದ್ದಾರೆ. ಆದರೆ ಅಂಗೀಕರಿಸಲಾದ ಜನಸಂಖ್ಯೆಯ ಆಧಾರದ ಮೇಲೆ ಅವರು ಪ್ರಾಮುಖ್ಯವನ್ನು ಕಳೆದುಕೊಳ್ಳುತ್ತಾರೆ. ಮೇ ೧೬ ರ ಹೇಳಿಕೆಯ ೨೦ನೆಯ ಕಂಡಿಕೆಯ ಅಡಿಯಲ್ಲಿ ನೇಮಿಸಲಾಗುವ ಅಲ್ಪಸಂಖ್ಯಾತರ ಸಲಹಾಸಮಿತಿಯಲ್ಲಿ ಪೂರ್ಣಪ್ರಮಾಣದ ಪ್ರಾತಿನಿಧ್ಯವನ್ನು ಕೊಡುವ ಮೂಲಕ ಈ ಪರಿಸ್ಥಿತಿಯನ್ನು ಕೆಲಮಟ್ಟಿಗೆ ಪರಿಹರಿಸಬಹುದು ಎಂದು ನಾವು ಭಾವಿಸುತ್ತೇವೆ."

ಅವರು ಮತ್ತು ಹೇಳಿದರು:

"ಅದಕ್ಕೂ ಮಿಗಿಲಾಗಿ, ಈ ವಿಚಾರದಲ್ಲಿ ಅತ್ಯಂತ ಕ್ಷಿಪ್ರಗ್ರಾಹಿಯಾದ ಎರಡು ಪ್ರಮುಖ ಪಕ್ಷಗಳಿಗೆ ನಾವು ಬಿಂಬಿಸಿರುವುದೇನೆಂದರೆ ಪಂಜಾಬ್ ಅಥವಾ ವಾಯವ್ಯ ಭಾಗದ ಗುಂಪಿನಲ್ಲಿನ ವಿದ್ಯಮಾನಗಳಲ್ಲಿ ಸಿಖ್ಖರಿಗೆ ಪ್ರಬಲವಾದ ಸ್ಥಾನವನ್ನು ನೀಡಲು ವಿಶೇಷ ಸಾಧನಗಳನ್ನು ರಚಿಸಬೇಕು."

ಈ ಭರವಸೆಯು ಕೆಲಮಟ್ಟಿಗೆ ತೃಪ್ತಿಕರವಾಗಿದ್ದರೂ ಸಂವಿಧಾನ ರಚನಾಸಭೆಯತ್ತ ಸಿಖ್ ಸಮುದಾಯದ ನಿಲುವನ್ನು ಬದಲಾಯಿಸಲು ಸಾಕಾಗಲಿಲ್ಲ. ಅನಂತರ ೯ ನೇ ಆಗಸ್ಟ್‌ನಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಒಂದು ಗೊತ್ತುವಳಿಯನ್ನು ಅಂಗೀಕರಿಸಿ ಸಿಖ್ಖರಿಗೆ ತಮ್ಮ ನಿಲುವನ್ನು ಪುನರ್ ಪರಿಶೀಲಿಸಲು ಮನವಿಮಾಡಿತು. ಆ ಗೊತ್ತುವಳಿಯು ಹೀಗೆ ಹೇಳಿತ್ತು:

"ಸಿಖ್ಖರಿಗೆ ಅನ್ಯಾಯವಾಗಿದೆ ಎಂದು ಸಮಿತಿಗೆ ಅರಿವಿದೆ. ಅವರು ಅದನ್ನು ಸಂಪುಟ ನಿಯೋಗದ ಗಮನಕ್ಕೆ ತಂದಿದ್ದಾರೆ. ಹೇಗಾದರೂ ನಾವು ದೃಢವಾದ ಅಭಿಪ್ರಾಯವನ್ನು ಹೊಂದಿರುವುದೇನೆಂದರೆ ಸಿಖ್ಖರು ಸಂವಿಧಾನ ರಚನಾಸಭೆಯಿಂದ ಹೊರಗಿರುವುದಕ್ಕಿಂತ ಅದರಲ್ಲಿ ಭಾಗವಹಿಸುವ ಮೂಲಕವೇ ತಮ್ಮ ಸಮುದಾಯದ ಹಾಗೂ ದೇಶದ ಸ್ವಾತಂತ್ರ್ಯದ ಕಾರಣಕ್ಕೆ ಚೆನ್ನಾಗಿ ಸೇವೆ ಸಲ್ಲಿಸಬಲ್ಲರು. ಆದ್ದರಿಂದ ಅದು ಸಿಖ್ಖರು ತಮ್ಮ ನಿರ್ಣಯವನ್ನು ಪುನರ್ ಪರಿಶೀಲಿಸಬೇಕು ಮತ್ತು ಸಂವಿಧಾನ ರಚನಾಸಭೆಯಲ್ಲಿ ಭಾಗವಹಿಸಲು ತಮ್ಮ ಒಪ್ಪಿಗೆಯನ್ನು ವ್ಯಕ್ತ ಪಡಿಸಬೇಕು ಎಂದು ಮನವಿ ಮಾಡುತ್ತದೆ. ಕಾರ್ಯಕಾರಿ ಸಮಿತಿಯು ಸಿಖ್ಖರಿಗೆ ಭರವಸೆ ನೀಡುವುದೇನೆಂದರೆ ಅವರ ನ್ಯಾಯಸಮ್ಮತವಾದ ಕುಂದುಕೊರತೆಗಳನ್ನು ಪರಿಹರಿಸಲು ಮತ್ತು ಸಮರ್ಪಕವಾದ ಸುರಕ್ಷತೆಯನ್ನು ಖಾತರಿಪಡಿಸಲು ಕಾಂಗ್ರೆಸ್ ಸಾಧ್ಯವಾದ ಎಲ್ಲ ಬೆಂಬಲವನ್ನೂ ಅವರಿಗೆ ಕೊಡುತ್ತದೆ."

ಸಿಖ್ಖರು ಇಡೀ ಪರಿಸ್ಥಿತಿಯನ್ನು ಆಗಸ್ಟ್ ೧೪ ರಂದು ಪರಿಶೀಲಿಸಿದರು. ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ನಿರ್ಣಯವು ಅವರ ಮೇಲೆ ಮಹತ್ತ್ವದ ಪರಿಣಾಮ ಬೀರಿತು. ಆ ಕಾರಣದಿಂದಾಗಿ ಪಂಥದ ಮಂಡಲಿಯು ಒಂದು ವಿಶೇಷವಾದ ಸಭೆಯನ್ನು ಕರೆದು ಸಂವಿಧಾನ ರಚನಾಸಭೆಯ ಕೆಲಸದಲ್ಲಿ ಭಾಗವಹಿಸಲು

ಹೇರಿದ್ದ ಬಹಿಷ್ಕಾರವನ್ನು ಎತ್ತಲು ನಿರ್ಧರಿಸಿತು. ಒಕ್ಕೂಟದಲ್ಲಿ ಮುಸಲ್ಮಾನರಿಗೆ ನೀಡಿದ್ದಂತಹ ಸುರಕ್ಷತೆಯನ್ನು ಸಿಖ್ಖರಿಗೂ ನೀಡಲು ಸಂವಿಧಾನ ರಚನಾಮಂಡಲಿಗೆ ಒಂದು ಅವಕಾಶವನ್ನು ಕೊಟ್ಟು ನೋಡಬೇಕೆಂದು ಪಂಥದ ಮಂಡಲಿಯ ನಿರ್ಣಯವು ನಿರ್ಧರಿಸಿತು. ಆ ಅಧಿಕೃತ ಆದೇಶದ ಪ್ರಕಾರ ಸಿಖ್ ಸದಸ್ಯರು ಇಲ್ಲಿ ಸಭೆ ಸೇರಿದ್ದಾರೆ. ನನಗೆ ಕಾಂಗ್ರೆಸ್ ನಾಯಕರಲ್ಲಿ ಅಪಾರವಾದ ನಂಬಿಕೆಯಿದೆ. ಆ ವಿದ್ಯುಕ್ತ ನುಡಿಗಳನ್ನು ಕ್ರಿಯೆಯಾಗಿ ಪರಿವರ್ತಿಸುವ ಸಮಯವು ಬಂದಿರುವುದರಿಂದ ಇನ್ನು ತಡಮಾಡದೆ ಸಿಖ್ಖರಿಗೆ ನೀಡಿದ ಭರವಸೆಗಳನ್ನು ಅನುಷ್ಠಾನಕ್ಕೆ ತರಲಾಗುತ್ತದೆ ಎಂದು ನಾನು ಪ್ರಮಾಣಿಕವಾಗಿ ನಿರೀಕ್ಷಿಸುತ್ತೇನೆ. ಸಿಖ್ಖರ ಪರಿಸ್ಥಿತಿಯನ್ನು ಕುರಿತು ಸ್ವಲ್ಪ ವಿವರವಾಗಿ ಪ್ರಸ್ತಾವಿಸಲು ನಾನು ಈ ಸದನದ ಸಮಯವನ್ನು ತೆಗೆದುಕೊಂಡಿದ್ದಕ್ಕೆ ವಿಷಾದಿಸುತ್ತೇನೆ. ಆದರೆ ಸಿಖ್ಖರ ಪ್ರಕರಣವನ್ನು ಸದನಕ್ಕೆ ಪರಿಚಯ ಮಾಡಿಕೊಡುವುದು ನನ್ನ ಕರ್ತವ್ಯ ಎಂದು ನಾನು ಆಲೋಚಿಸಿದ್ದೆ. ಹೇಗಾದರೂ ನಾನು ಸ್ಪಷ್ಟಪಡಿಸಬೇಕಾದ ಸಂಗತಿ ಎಂದರೆ ಸಿಖ್ಖರು ಹಕ್ಕೊತ್ತಾಯ ಮಾಡುತ್ತಿರುವ ತಮ್ಮ ಪಾಲಿನ ಸುರಕ್ಷತೆ ಮತ್ತು ಪಂಜಾಬ್ ಹಾಗೂ ವಾಯವ್ಯ ಭಾಗದಲ್ಲಿ ಬಲಿಷ್ಠವಾದ ಸ್ಥಾನ ಇವುಗಳನ್ನು ಭಾರತೀಯ ಗಣರಾಜ್ಯದೊಳಗೇ ಒದಗಿಸಬೇಕೇ ಹೊರತು ಹೊರಗಡೆಯಲ್ಲ. ಎಲ್ಲ ಸಮುದಾಯಗಳೂ ಸಾಮರಸ್ಯದಿಂದ ಮತ್ತು ಶಾಂತಿಯಿಂದ ಒಟ್ಟಿಗೆ ಬಾಳಬೇಕೆನ್ನುವುದೇ ಅವರ ತೀವ್ರಾಪೇಕ್ಷೆ. ಪಂಜಾಬ್ ಮತ್ತು ವಾಯವ್ಯ ಭಾಗದಲ್ಲಿ ತಮ್ಮ ಮುಸಲ್ಮಾನ್ ಸೋದರರೊಡನೆ ಸಂತೋಷವಾಗಿ ಬಾಳಲು ಅವರು ಸಿದ್ಧರಾಗಿದ್ದಾರೆ. ಅಷ್ಟೇಕೆ ಅವರನ್ನು ಹಿರಿಯಣ್ಣಂದಿರೆಂದು ಭಾವಿಸಲೂ ಸಿದ್ಧರಾಗಿದ್ದಾರೆ. ಆದರೆ ತಮಗಿಂತ ಶ್ರೇಷ್ಠರಾದ ಆಳುವ ಜನಾಂಗ ಅಥವಾ ಒಂದು ಪ್ರತ್ಯೇಕ ರಾಷ್ಟ್ರ ಎಂದಲ್ಲ. ಆದ್ದರಿಂದ ಸಿಖ್ಖರು ಈ ಪ್ರಾಚೀನವಾದ ಮಹಾನ್ ರಾಷ್ಟ್ರದ ವಿಭಜನೆಯನ್ನು ಸಹಿಸಲಾರರು. ಅವರು ಪಾಕಿಸ್ತಾನದ ಸ್ಥಾಪನೆಯನ್ನು ಮತ್ತು ಅದನ್ನು ಸೂಚಿಸುವ ಅಥವಾ ಪರವಾಗಿರುವ ಎಲ್ಲವನ್ನೂ ವೀರಾವೇಶದಿಂದ ವಿರೋಧಿಸುತ್ತಾರೆ.

ಮಾನ್ಯರೆ, ಹೀಗೆ ಹೇಳಲು ನನಗೆ ಅನುಮತಿ ನೀಡುವುದಾದರೆ, ಸಿಖ್ಖರಿಗೆ ಸ್ವಾತಂತ್ರ್ಯಕ್ಕಾಗಿ ಜ್ವಲಿಸುತ್ತಿರುವ ತೀವ್ರಾಪೇಕ್ಷೆ ಇದೆ. ವಿದೇಶಿ ದಂಡುಗಳನ್ನು ಈ ನೆಲದಿಂದ ಹೊಡೆದಟ್ಟಲು ಸಿಖ್ಖರಷ್ಟು ದೀರ್ಘಕಾಲ ಮತ್ತು ಶ್ರಮದಿಂದ ಭಾರತದ ಇತಿಹಾಸದಲ್ಲಿ ಯಾವ ಒಂದು ಸಮುದಾಯವೂ ಹೋರಾಡಿಲ್ಲ; ಮತ್ತು ಇತ್ತೀಚಿನ ದಿನಗಳಲ್ಲಿ ದೇಶದ ಸ್ವಾತಂತ್ರ್ಯದ ಹೋರಾಟದಲ್ಲಿ ಅವರ ಬಲಿದಾನದ ದಾಖಲೆಯು ಅದ್ವಿತೀಯವಾಗಿದೆ. ಸ್ವಾತಂತ್ರ್ಯದ ಹೋರಾಟದಲ್ಲಿ ಕಾಂಗ್ರೆಸ್‌ನೊಡನೆ ನಿಲ್ಲದ ಉತ್ಸಾಹ ಮತ್ತು ಹುರುಪಿನಿಂದ ಅಡಿಯಿಡುವುದನ್ನು ಅವರು ಮುಂದುವರಿಸುತ್ತಾರೆ. (ಕೇಳಿ, ಕೇಳಿ!) ಹೇಗಾದರೂ ಅವರು ದೇಶದ ಸೇವೆಯಲ್ಲಿ ತಮ್ಮ ಪೂರ್ಣ ಪ್ರಮಾಣದ ಪಾಲನ್ನು ಕೊಡುಗೆಯಾಗಿ ನೀಡಲು ಸಮರ್ಥರಾಗುವಂತೆ ಮಾಡಲು ಅವರ ಪ್ರತ್ಯೇಕ ಅಸ್ತಿತ್ವ ಮತ್ತು ಸ್ಥಾನವನ್ನು ಉಳಿಸಿಕೊಂಡುಬರಬೇಕು ಮತ್ತು ಬಲಪಡಿಸಬೇಕು ಎಂದು ಬಯಸುತ್ತಾರೆ.

ಮಾನ್ಯರೆ, ಈ ಘನಗಂಭೀರ ಸಭೆಯು ಸಾಧಿಸಬೇಕೆಂದು ತನ್ನ ಮುಂದೆ ಇರಿಸಿಕೊಂಡಿರುವ ಕಾರ್ಯವು ಅಗಾಧವಾದದ್ದು ಎನ್ನುವುದನ್ನು ನಾನು ಮನಗಂಡಿದ್ದೇವೆ. ನಮ್ಮ ಹಾದಿಯಲ್ಲಿ ವಿಘ್ನಗಳು ಮತ್ತು ಅಡಚಣೆಗಳು ಇವೆ. ಆದರೆ ನಾವು ಎಚ್ಚರಿಕೆಯಿಂದ ಆಲೋಚಿಸಿದರೆ, ದೃಢ ನಿರ್ಧಾರದಿಂದ ಕ್ರಿಯಾಶೀಲರಾದರೆ, ಅಗತ್ಯಕಂಡರೆ ಸ್ಥಿರವಾಗಿ ವಿರೋಧಿಸಿದರೆ ಆ ವಿಘ್ನಗಳನ್ನು ದಾಟಲು ಮತ್ತು ಆ ಎಲ್ಲ ಅಡಚಣೆಗಳನ್ನು ಗೆಲ್ಲಲು ಸಮರ್ಥರಾಗುತ್ತೇವೆ ಎನ್ನುವುದು ನನಗೆ ಖಚಿತವಾಗಿದೆ. ಮಾನ್ಯರೆ, ಈ ಕೆಲವು ಮಾತುಗಳೊಡನೆ ನಾನು ಈ ನಿರ್ಣಯವನ್ನು ಬೆಂಬಲಿಸುತ್ತೇನೆ.(ಹರ್ಷೋದ್ಗಾರಗಳು).

**ಸೇಠ್ ಗೋವಿಂದ ದಾಸ್** (ಸಿ.ಪಿ. ಮತ್ತು ಬೇರಾರ್ : ಸಾಮಾನ್ಯ) : *[ಮಾನ್ಯ ಅಧ್ಯಕ್ಷರೆ, ಕೇಂದ್ರೀಯ ಶಾಸನಸಭೆಯಲ್ಲಿ ಮತ್ತು ರಾಜ್ಯದ ಪರಿಷತ್ತಿನಲ್ಲಿ ನಾನು ನಿಯಮದ ಪ್ರಕಾರ ಇಂಗ್ಲಿಷ್‌ನಲ್ಲಿಯೇ ಮಾತನಾಡುತ್ತೇನೆ, ಆದರೆ ಇಲ್ಲಿ ಅನೇಕ ಇಂಗ್ಲಿಷ್ ಭಾಷಣಗಳ ಅನಂತರ ನಾನು ನಮ್ಮ ದೇಶಭಾಷೆಯಲ್ಲಿ ಮಾತನಾಡಲು ಬಯಸುತ್ತೇನೆ.

ನಾನು ನಿರ್ಣಯದ ಪರವಾಗಿ ಮತ್ತು ತಿದ್ದುಪಡಿಯ ವಿರೋಧವಾಗಿ ಮಾತನಾಡಲು ಬಂದಿದ್ದೇನೆ. ನಿರ್ಣಯದ ಪರವಾಗಿ ಮಾತನಾಡುವಾಗ, ಸುಂದರವಾದ ಭಾಷಣವನ್ನು ಮಾಡಿದ ಗೌರವಾನ್ವಿತ ಡಾ. ಜಯಕರ್ ಅವರಿಗೆ ನನ್ನ ವಂದನೆಗಳನ್ನು ತಿಳಿಸುವ ಆಸೆಯನ್ನು ತಡೆಯಲಾಗುತ್ತಿಲ್ಲ. ನಿನ್ನೆ ಡಾ. ಜಯಕರ್ ಅವರ ತಿದ್ದುಪಡಿಯನ್ನು ಕೇಳಿ ನನಗೆ ಆಶ್ಚರ್ಯವಾಯಿತು. ಸ್ವರಾಜ್ ಪಕ್ಷದ ದಿನಗಳಿಂದಲೂ ನಾನು ಮತ್ತು ಡಾ. ಜಯಕರ್ ಸ್ನೇಹಿತರಾಗಿದ್ದೇವೆ. ನಾನು ಅವರ ತಿದ್ದುಪಡಿಯನ್ನು ಅರ್ಥಮಾಡಿಕೊಳ್ಳಬಲ್ಲೆ. ಮುಸ್ಲಿಮ್ ಲೀಗ್ ಬಂದು ಸೇರುವವರೆಗೂ ನಿರ್ಣಯದ ಮೇಲಿನ ಮತದಾನವನ್ನು ಮುಂದೂಡಬೇಕೆಂಬ ಅವರ ಅಪೇಕ್ಷೆಯನ್ನು ನಾನು ಅರ್ಥಮಾಡಿಕೊಳ್ಳಬಲ್ಲೆ. ಆದರೆ ಅವರ ವಾದಾಂಶದ ಸಮರ್ಥನೆಯಾಗಿ ಮುಂದೊಡ್ಡಿದ ವಾದಗಳ ತರ್ಕವನ್ನು ಅರ್ಥಮಾಡಿಕೊಳ್ಳಲು ನಾನು ವಿಫಲನಾಗಿದ್ದೇನೆ. ಅವರ ವಾದಗಳ ಕಾನೂನಾತ್ಮಕ ಅಂಶವನ್ನು ಕುರಿತು ಮಾತನಾಡಲು ನಾನು ಇಷ್ಟಪಡುವುದಿಲ್ಲ. ಅದು ವಕೀಲರ ಕೆಲಸ. ಈಗ ನಾವು ಈ ನಿರ್ಣಯವನ್ನು ಅಂಗೀಕರಿಸಿದರೆ, ನಾವು ಏನನ್ನು ಅಪೇಕ್ಷಿಸಿದ್ದೇವೆಯೋ ಅದನ್ನು ಸಾಧಿಸದೆ ನಮ್ಮ ಕೆಲಸವನ್ನು ಮುಗಿಸುತ್ತೇವೆ ಎಂಬ ಅವರ ಪ್ರತಿಪಾದನೆಯು ನನ್ನನ್ನು ಅಚ್ಚರಿಗೊಳಿಸುತ್ತಿದೆ. ಅದು ೧೯೨೦ ರ ಮುಂಚಿನ ದಿನಗಳನ್ನು ನನ್ನ ನೆನಪಿಗೆ ತರುತ್ತದೆ. ಆಗ ನಮ್ಮ ಮಧ್ಯಮಾರ್ಗಿಗಳು ಏನು ಮಾಡಬೇಕೆಂದು ತಿಳಿಯದೆ ಕುಳಿತಿದ್ದರು. ಎಲ್ಲ ಕಡೆಯೂ ಅವರಿಗೆ ಆಶಾಭಂಗ ಮತ್ತು ನಿರಾಶೆಯೇ ಕಾಣುತ್ತಿತ್ತು. ನಾವು ಇಲ್ಲಿ ಸಭೆ ಸೇರಿರುವುದು ಸುಮ್ಮನೆ ಒಟ್ಟಿಗೆ ಕುಳಿತುಕೊಂಡು, ಯಥೇಚ್ಛವಾಗಿ ಹರಟಿ, ಯಾವ ಫಲಿತಾಂಶವನ್ನು ಸಾಧಿಸದೆ ಚದುರಿಹೋಗುವುದಕ್ಕಲ್ಲ. ಫಲಿತಾಂಶವನ್ನು ಸಾಧಿಸುವುದು ನಮ್ಮ ಕರ್ತವ್ಯವಾಗಿರುತ್ತದೆ. ಪ್ರಸ್ತುತ ಸಮಯದಲ್ಲಿ ನಾವು ಏನು ಮಾಡಲಿದ್ದೇವೆ ಮತ್ತು ಎಲ್ಲಿಯವರೆಗೆ ನಾವು ಸಾಗಲಿದ್ದೇವೆ ಎಂದು ಹೇಳಬೇಕಾದ ಆವಶ್ಯಕತೆಯಿಲ್ಲ. ಕ್ಷಿಪ್ರವಾಗಿ ಗಣನೀಯವಾದ ಫಲಿತಾಂಶಗಳನ್ನು ಸಾಧಿಸುತ್ತೇವೆ ಎಂದು ಹೇಳಿದರೆ ಸಾಕು. ಡಾ. ಜಯಕರ್ ಅವರು ಯುದ್ಧವನ್ನು ಕುರಿತು ಮಾತನಾಡಿದ್ದಾರೆ. ಕಾಂಗ್ರೆಸ್ ಜನರು ಮತ್ತು ಸತ್ಯಾಗ್ರಹ ತತ್ತ್ವವನ್ನು ನಂಬುತ್ತಿರುವ ಜನರು ಸದಾ ಶಾಂತಿಯನ್ನು ಬಯಸುತ್ತಾರೆಯೇ ವಿನಾ ಯುದ್ಧವನ್ನಲ್ಲ. ಹೇಗಾದರೂ ಅವರು ಬಯಸುವುದು ನಿಜವಾದ ಶಾಂತಿಯನ್ನೇ ಹೊರತು ಸ್ಮಶಾನದ ಶಾಂತಿಯನ್ನಲ್ಲ.

ಮಹಾತ್ಮಾಜಿ ಜಗತ್ತಿಗೆ ನೀಡಿದ ಅತ್ಯಂತ ಶ್ರೇಷ್ಠವಾದ ಉಡುಗೊರೆಯೆಂದರೆ, 'ಸತ್ಯಾಗ್ರಹ'. ಸತ್ಯಾಗ್ರಹಿಗಳು ಶಾಂತಿಯನ್ನು ಬಯಸುತ್ತಾರೆ. ಆದರೆ ಯುದ್ಧವನ್ನು ಆಶ್ರಯಿಸದೆ ನಿಜವಾದ ಶಾಂತಿಯು ಅಸಾಧ್ಯ ಎಂದು ಅವರಿಗೆ ಕಂಡುಬಂದಾಗ, ಅಹಿಂಸೆಯ ಯುದ್ಧದಲ್ಲಿ ತಮ್ಮ ಪ್ರಾಣವನ್ನು ಅರ್ಪಿಸಲು ಸಿದ್ಧರಾಗುತ್ತಾರೆ. ಆದ್ದರಿಂದ ಯುದ್ಧಬೇಡವೆಂದು ನಾನು ಹೇಳುತ್ತೇನೆ, ನಮಗೆ ಶಾಂತಿ ಬೇಕು. ನಾವು ಮುಸ್ಲಿಮರೊಡನಾಗಲಿ ಅಥವಾ ಬ್ರಿಟಿಷ್ ಸರ್ಕಾರದೊಡನಾಗಲಿ ಹೋರಾಡಲು ಬಯಸುವುದಿಲ್ಲ. ಹೇಗಾದರೂ, ಬ್ರಿಟಿಷರು ಮುಸ್ಲಿಮರನ್ನು ತಮ್ಮ ಶಿಖಂಡಿಯನ್ನಾಗಿ ಮಾಡಿಕೊಂಡು ನಮ್ಮೊಡನೆ ಹೋರಾಡಬೇಕೆಂದು ಬಯಸಿದರೆ, ನಾವು ಭೀಷ್ಮ ಪಿತಾಮಹ ಮಾಡಿದಂತೆ ಮಾಡುವುದಿಲ್ಲ ನಮ್ಮ ಮುಂದೆ ಶಿಖಂಡಿಯನ್ನು ನಿಲ್ಲಿಸಿದ ಕಾರಣಕ್ಕೆ ನಾವು ನಮ್ಮ ಶಸ್ತ್ರಾಸ್ತ್ರಗಳನ್ನು ಕೆಳಗಿಡುವುದಿಲ್ಲ. ನಮ್ಮ ಸೋದರರಾದ ಮುಸ್ಲಿಮ್ ಲೀಗ್‌ನವರು ಬಂದು ನಮ್ಮೊಡನೆ ಸಹಕರಿಸಬೇಕೆಂದು ನಾವು ಬಯಸುತ್ತೇವೆ. ಹೇಗಾದರೂ, ವಿನಯಪೂರ್ವಕವಾಗಿ ಮಾಡಿಕೊಂಡ ನಮ್ಮೆಲ್ಲ ಪ್ರಾರ್ಥನೆಗಳ ಅನಂತರವೂ ನಮ್ಮೆಲ್ಲ, ತಾಳ್ಮೆಯ ಅನಂತರವೂ ಮತ್ತು ಶಾಂತಿಯಾಗಿ ನಮ್ಮೆಲ್ಲ ಅಪೇಕ್ಷೆಯ ಅನಂತರವೂ ಅವರು ಬರದಿದ್ದರೆ, ಅವರಿಗಾಗಿ ನಾವು ನಮ್ಮ ಕೆಲಸವನ್ನು ನಿಲ್ಲಿಸುವುದಿಲ್ಲ. ಈ ನಿರ್ಣಯದ ಪರಿಗಣನೆಯನ್ನು ಜನವರಿ ೨೦ ರವರೆಗೆ ಮುಂದೂಡಿದೆ ನಮ್ಮ ಮುಸ್ಲಿಮ್ ಸೋದರರು ಬಂದು ನಮ್ಮೊಡನೆ ಸೇರಿಕೊಳ್ಳುತ್ತಾರೆಯೇ ಎಂದು ಡಾ. ಜಯಕರ್ ನಮಗೆ ಹೇಳಿಲ್ಲ. ಅವರು ನಮ್ಮನ್ನು ಸೇರಿಕೊಳ್ಳುತ್ತಾರೆ ಎಂದು ನಮಗೆ ಭರವಸೆ ನೀಡಿದರೆ, ನಿರ್ಣಯವನ್ನು ಮುಂದೂಡೋಣ ಎಂದು ಹೇಳುವವರಲ್ಲಿ ಪಂಡಿತ್

ಜವಾಹರಲಾಲ್ ನೆಹರು ಅವರೇ ಪ್ರಾಯಃ ಮೊದಲನೆಯ ವ್ಯಕ್ತಿ ಆಗಿರುತ್ತಾರೆ ಎಂದು ನಾನು ಭಾವಿಸುತ್ತೇನೆ.

ಈ ನಿರ್ಣಯವು ಒಂದು ತಿಳಿವಳಿಕೆ, ಒಂದು ಪ್ರತಿಜ್ಞಾವಚನ ಎಂದು ಪಂಡಿತ್‌ಜಿ ಅನೇಕ ಮಾತುಗಳಿಂದ ನಮಗೆ ಹೇಳಿದ್ದಾರೆ. ಒಬ್ಬ ವ್ಯಕ್ತಿ ಒಂದು ಪ್ರತಿಜ್ಞಾವಚನಕ್ಕೆ ಸಹಿಮಾಡಿದರೆ ತಾನು ಏನು ಮಾಡುತ್ತಿದ್ದೇನೆ ಎಂಬ ಪೂರ್ಣ ಜವಾಬ್ದಾರಿಯ ಪ್ರಜ್ಞೆಯೊಡನೆ ಹಾಗೆ ಮಾಡುತ್ತಾನೆ. ಈ ನಿರ್ಣಯವು ಒಂದು ಪ್ರತಿಜ್ಞಾವಚನವಾಗಿರುವುದರಿಂದ ಅದನ್ನು ನಾವು ಅಂಗೀಕರಿಸಿದಾಗ, ನಮ್ಮ ಜವಾಬ್ದಾರಿಯ ಪೂರ್ಣ ಪ್ರಜ್ಞೆಯೊಡನೆಯೇ ಹಾಗೆ ಮಾಡುತ್ತೇವೆ.

ಈ ನಿರ್ಣಯವು ಒಂದು ಗಣರಾಜ್ಯವನ್ನು ಕುರಿತು ಹೇಳುತ್ತದೆ. ಈ ಗಣರಾಜ್ಯವು ಒಂದು ಪ್ರಜಾಸತ್ತಾತ್ಮಕ ಗಣರಾಜ್ಯವಾಗಿರಬೇಕೆ ಅಥವಾ ಒಂದು ಸಮಾಜವಾದಿ ಗಣರಾಜ್ಯವಾಗಿರಬೇಕೆ ಎಂಬ ವಿಚಾರದಲ್ಲಿ ಒಂದು ಅಭಿಪ್ರಾಯ ಭೇದ ಇರಬಹುದು. ಆದರೆ ಅದನ್ನು ಕುರಿತು ಈ ಹಂತದಲ್ಲಿ ಚರ್ಚಿಸುವುದು ಅರ್ಥಹೀನವಾಗುತ್ತದೆ. ಜಗತ್ತಿಗೆ ಯಾವಾಗ ಒಂದು ಸಂಗತಿಯ ಅಗತ್ಯಬೀಳುತ್ತದೆಯೋ ಆಗ ಅದನ್ನು ಸೃಷ್ಟಿಸಿಕೊಳ್ಳುತ್ತದೆ. ಜಗತ್ತಿನ ಪರಿಸ್ಥಿತಿಯನ್ನು ಮತ್ತು ಭಾರತದ ಅವಸ್ಥೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ನಾವು ಹೇಳಬಹುದಾದುದೇನೆಂದರೆ ನಮ್ಮ ಗಣರಾಜ್ಯವು ಪ್ರಜಾಸತ್ತಾತ್ಮಕ ಮತ್ತು ಸಮಾಜವಾದಿ ಎರಡೂ ಆಗಿರುತ್ತದೆ ಎಂದು ನಾವು ಹೇಳಬಹುದು. ಸಮಾಜವಾದವೆಂದರೆ ಯಾರು ಹಿಂದೇಟು ಹಾಕುತ್ತಾರೋ ಮತ್ತು ಅದರ ತತ್ತ್ವಗಳನ್ನು ಕೇಳಿದರೆ ಕಂಪಿಸುತ್ತಾರೋ ಅವರಿಗೆ ನಾನು ಹೇಳಬೇಕೆಂದು ಬಯಸುವುದೇನೆಂದರೆ ನಿರ್ಗತಿಕರಷ್ಟೇ ದುಃಖಾರ್ತರಲ್ಲ, ಎಲ್ಲವನ್ನು ಉಳ್ಳವರೂ ದುಃಖದಲ್ಲಿದ್ದಾರೆ. ರೈತರು ದುಃಖಾರ್ತರಾಗಿದ್ದಾರೆ. ಏಕೆಂದರೆ ಅವರು ಎಲ್ಲವನ್ನೂ ಗಳಿಸಬೇಕೆಂಬ ಆಸೆಯ ಅಡಿಯಲ್ಲಿ ಪರಿಶ್ರಮಪಡುತ್ತಾರೆ. ಆದರೆ ಅನಂತರ ಅವರು ದುಃಖಪಡುತ್ತಾರೆ. ಏಕೆಂದರೆ ಅವರು ನೂರಾರು, ಸಾವಿರಾರು ಠಕ್ಕುಗಾರಿಕೆಗಳನ್ನು ಮತ್ತು ನುಣುಚಿಕೊಳ್ಳುವಿಕೆಗಳನ್ನು ಅವಲಂಬಿಸಬೇಕಾಗುತ್ತದೆ. ನ್ಯಾಯದ ದೃಷ್ಟಿಯಲ್ಲಿ ಕೊಂಚವೂ ಯುಕ್ತವಲ್ಲದ ಕಾರ್ಯಗಳನ್ನು ಅವರು ಮಾಡುತ್ತಾರೆ. ಈ ಜನರು ನ್ಯಾಯವನ್ನು ಕಡೆಗಣಿಸಿ, ಅದನ್ನು ರಕ್ಷಿಸುತ್ತಿರುವಂತೆ ಮತ್ತು ಸಮರ್ಥಿಸುತ್ತಿರುವಂತೆ ನಟಿಸಿದರೆ ಎಂದಿಗೂ ನಿಜವಾದ ಸಂತೋಷವನ್ನು ಪಡೆಯುವುದಿಲ್ಲ ಎಂದು ನಾನು ಹೇಳುತ್ತೇನೆ. ಎಲ್ಲವನ್ನೂ ಉಳ್ಳವರಲ್ಲಿ ನಾನೂ ಒಬ್ಬ ಆದರೆ ನಿಜವಾದ ಶಾಂತಿಯನ್ನು ಮನಗಾಣಬೇಕಾಗಿದ್ದರೆ ಸಮಾಜವಾದದ ಮೂಲಕ ಮಾತ್ರ ಅದನ್ನು ಸಾಧಿಸಿಕೊಳ್ಳಬಹುದು ಎಂದು ನಾನು ಭಾವಿಸುತ್ತೇನೆ ಬೇರೆ ಯಾವ ವ್ಯವಸ್ಥೆಯೂ ನಮಗೆ ನಿಜವಾದ ಶಾಂತಿಯನ್ನು ನೀಡಲಾರದು. ನಮ್ಮ ಗಣರಾಜ್ಯವು ಪ್ರಜಾಸತ್ತಾತ್ಮಕ ಮತ್ತು ಸಮಾಜವಾದಿ ಎರಡೂ ಆಗಿರುತ್ತದೆ ಎನ್ನುವುದರಲ್ಲಿ ಯಾವ ಅನುಮಾನವೂ ಇರಲಾರದು.

ಈ ಕೆಲಸವನ್ನು ಮಾಡದಂತೆ ನಮ್ಮನ್ನು ತಡೆಯುವುದಕ್ಕೆ ಸಂಬಂಧಿಸಿದಂತೆ ನಾನು ಹೇಳುವುದಾದರೆ, ಬ್ರಿಟಿಷ್ ಸರ್ಕಾರ ಮತ್ತು ಮುಸ್ಲಿಮ್ ಲೀಗ್ ಎರಡೂ ನಾವು ಏನು ಮಾಡಬೇಕೆಂದು ಉದ್ದೇಶಿಸಿದ್ದೇವೆಯೋ ಅದನ್ನು ಮಾಡದಂತೆ ತಡೆಯಲಾರವು ಎನ್ನುವುದನ್ನು ಸ್ಪಷ್ಟಪಡಿಸಲು ಬಯಸುತ್ತೇನೆ. ನಮ್ಮ ದೇಶವು ಎಷ್ಟು ವಿಶಾಲವಾಗಿದೆಯೆಂದರೆ ಮತ್ತು ಅದರ ಜನಸಂಖ್ಯೆಯು ಎಷ್ಟು ಅಪಾರವಾಗಿದೆಯೆಂದರೆ, ಅದರ ಸ್ವಾತಂತ್ರ್ಯ ಮತ್ತು ಪ್ರಗತಿಗೆ ಬ್ರಿಟಿಷ್ ಸರ್ಕಾರ ಕೂಡ ಈಗ ಅಡಚಣೆಗಳನ್ನು ಒಡ್ಡಲಾರದು.

ಮುಸ್ಲಿಮ್ ಲೀಗ್‌ನ ನನ್ನ ಸೋದರರನ್ನು ಕುರಿತು ನಾನು ಕೆಲವು ಮಾತುಗಳನ್ನು ಹೇಳಲು ಅಪೇಕ್ಷಿಸುತ್ತೇನೆ. ವಿದೇಶೀಯರಾದ ಬ್ರಿಟಿಷರು ನಮ್ಮ ಸ್ವಾತಂತ್ರ್ಯದ ಪಥದಲ್ಲಿ ಅಡಚಣೆಗಳನ್ನು ಒಡ್ಡಿದರೆ ಅವರು ನಿಂದಾರ್ಹರು ಎಂದು ಯಾರೂ ಪರಿಗಣಿಸುವುದಿಲ್ಲ ಎಂದು ನಾನು ಒತ್ತಿಹೇಳುತ್ತೇನೆ. ಆದರೆ ಈ ದೇಶದಲ್ಲಿ ಹುಟ್ಟಿ ಬೆಳೆದ, ಇಲ್ಲಿನ ಅನ್ನವನ್ನು ತಿಂದ ಜನರು ಅದರ ಸ್ವಾತಂತ್ರ್ಯಕ್ಕೆ ಅಡ್ಡಗಾಲನ್ನು ಹಾಕಲು ಪ್ರಯತ್ನಿಸಿದರೆ ಅವರ ಸಂತತಿಯವರೇ ಖಂಡಿಸುತ್ತಾರೆ. ಬ್ರಿಟಿಷರ ಬಗೆಗೆ ಹೇಳುವುದಾದರೆ, ಅವರು ನಮ್ಮ ಸ್ವಾತಂತ್ರ್ಯದ ಹಾದಿಯಲ್ಲಿ ತಡೆಯೊಡ್ಡಲಾರರು. ಆದರೆ ನಮ್ಮ ಮುಸ್ಲಿಮ್ ಲೀಗ್ ಸೋದರರನ್ನು ಕುರಿತು ಹೇಳುವುದಾದರೆ, ಸರಳ

ಮಾತುಗಳಲ್ಲಿ ನಾನು ಅವರಿಗೆ ಹೇಳುತ್ತೇನೆ: ಈ ದೇಶವನ್ನು ಗುಲಾಮಗಿರಿಯ ಅಸ್ಥಿರತೆಯಲ್ಲಿಡಲು ಅವರು ಬ್ರಿಟಿಷರೊಡನೆ ಷಾಮೀಲಾದರೆ ಮುಂದಿನ ಪೀಳಿಗೆಗಳು ಅವರನ್ನು ನಿಂದಿಸುತ್ತವೆ. ನಮ್ಮ ಸ್ವಾತಂತ್ರ್ಯವನ್ನು ಗಳಿಸುವುದರಿಂದ ನಮ್ಮನ್ನು ತಡೆಯಲಾಗದೆಯೂ ಅವರು ಈ ಕಳಂಕವನ್ನು ಪಡೆಯುತ್ತಾರೆ.

ಕಳೆದ ಕೆಲವು ದಿನಗಳಿಂದ ಹೊರಡಿಸಿದ ಹೇಳಿಕೆಗಳಿಗೆ ಬದ್ಧವಾಗಿ ಬ್ರಿಟಿಷ್ ಸರ್ಕಾರವು ಹೊಸ ಭಾರತ ಸರ್ಕಾರದ ಕಾಯಿದೆಯನ್ನು ಕಟ್ಟಳೆ ಮಾಡದೆ ಇದ್ದರೆ, ಈ ಸಂವಿಧಾನ ರಚನಾಸಭೆಯ ತೀರ್ಮಾನಗಳ ಬೆಳಕಿನಲ್ಲಿ ನಾನು ಅವರಿಗೆ ಹೇಳುವುದೇನೆಂದರೆ ಈ ವಿಚಾರದಲ್ಲಿ ಅವರ ಪ್ರಯತ್ನಗಳು ದುರವಸ್ಥೆಯ ಅಪಜಯಕ್ಕೆ ತುತ್ತಾಗುತ್ತವೆ. ಅವರು ಭಾರತ ಮತ್ತು ಇತರ ದೇಶಗಳಿಗೆ ತಮ್ಮ ಸಮಸ್ಯೆಗಳನ್ನು ತಾವೇ ಬಗೆಹರಿಸಿಕೊಳ್ಳಲು ಅವಕಾಶ ಕೊಡದೆ ಸದಾ ಅವುಗಳನ್ನು ತಮ್ಮ ದಾಸ್ಯದಲ್ಲಿರಿಸಿಕೊಳ್ಳಲು ಪ್ರಯತ್ನಿಸಿದ್ದಾರೆ. ಅವರು ಈ ದೇಶದೊಡನೆ ಅದೇ ಆಟವನ್ನು ಈಗ ಆಡಿದರೆ ಬ್ರಿಟಿಷ್ ಸಂಸತ್ತಿನಲ್ಲಿ ಭಾರತ ಸರ್ಕಾರದ ಕಾಯಿದೆಯನ್ನು ಮಂಡಿಸುವ ಸಮಯ ಪ್ರಾಯಃ ಎಂದು ಬರಲಾರದು ಮತ್ತು ಇಂಡೋ ಬ್ರಿಟಿಷ್ ಕೌಲಿಗೆ ಎಂದು ಸಹಿ ಬೀಳಲಾರದು. ನಾನು  ಈ ಮಾತನ್ನು ಕಾಂಗ್ರೆಸ್ ಪರವಾಗಿ ಹೇಳುತ್ತಿಲ್ಲ. ನಾನು ಭವಿಷ್ಯಕಾಲವನ್ನು ನೋಡುತ್ತಿದ್ದೇನೆ. ಆಗ ಬ್ರಿಟಿಷರು ಈ ಸಂವಿಧಾನ ರಚನಾಸಭೆಯ ತೀರ್ಮಾನಗಳನ್ನು ದೃಢವಾದ ಕ್ರಮವಾಗಿ ರೂಪಾಂತರಿಸಲು ವಿಫಲರಾದರೆ, ಇಲ್ಲಿ ಒಂದು ಸಮಾನಾಂತವಾದ ಸರ್ಕಾರವನ್ನು ಸ್ಥಾಪಿಸಲಾಗುವುದು ಮತ್ತು ಇಡೀ ಇಂಗ್ಲೆಂಡ್ ಅದರೊಡನೆ ಹೋರಾಡಬೇಕಾಗುತ್ತದೆ. ಸಪ್ತಸಾಗರಗಳನ್ನು ದಾಟಿ ಬರುವ ಜನರು ನಮ್ಮ ಅಹಿಂಸಾ ಸಮರವನ್ನು ಗೆಲ್ಲಲು ಸಮರ್ಥರಾಗುವುದಿಲ್ಲ. ಇದರಲ್ಲಿ ನನಗೆ ಸಂಪೂರ್ಣವಾದ ನಂಬಿಕೆ ಇದೆ.

ನಾನು ಹೆಚ್ಚು ಸಮಯವನ್ನು ತೆಗೆದುಕೊಳ್ಳಲು ಬಯಸುವುದಿಲ್ಲ. ಆದರೆ ನನ್ನ ಮಾತನ್ನು ನಿಲ್ಲಿಸುವಂತೆ ಸೂಚಿಸುವ ಚೀಟಿ ಬರುವ ಮೊದಲು, ನಿಮ್ಮಲ್ಲಿ ನಾನು ಮನವಿ ಮಾಡಿಕೊಳ್ಳುವುದೇನೆಂದರೆ ಈ ನಿರ್ಣಯವನ್ನು ಒಂದು ನಿರ್ಣಯವಾಗಿ ಅಂಗೀಕರಿಸುವ ಬದಲು ಒಂದು ಪ್ರತಿಜ್ಞಾವಚನವಾಗಿ, ನೀವು ಏನು ಮಾಡುತ್ತಿದ್ದೀರಿ ಎಂಬ ಸಂಪೂರ್ಣವಾದ ಜವಾಬ್ದಾರಿಯುತ ಪ್ರಜ್ಞೆಯಿಂದ ಅಂಗೀಕರಿಸಬೇಕು ಮತ್ತು ಒಂದು ಸ್ವತಂತ್ರ ದೇಶದ ರೀತಿಯಲ್ಲಿ ಮುನ್ನುಗ್ಗಬೇಕು.]*

**ಮಾನ್ಯ ಅಧ್ಯಕ್ಷರು :** ಈಗ ಒಂದು ಗಂಟೆಯಾಗಿದೆ. ಈ ಸದನವನ್ನು ನಾಳೆ ಬೆಳಗ್ಗೆ ಹನ್ನೊಂದು ಗಂಟೆಯವರೆಗೆ ಮುಂದೂಡಲಾಗಿದೆ. ಅಪರಾಹ್ನ ನಮಗೆ ನಿಯಮಗಳ ಸಮಿತಿಯ ಸಭೆ ಇದೆ. ಆದ್ದರಿಂದ ನಾವು ಇಲ್ಲಿ ಸಭೆ ಸೇರಲು ಸಾಧ್ಯವಾಗುವುದಿಲ್ಲ.

ಅನಂತರ ಸಭೆಯನ್ನು ಬುಧವಾರ, ೧೮ನೇ ಡಿಸೆಂಬರ್, ೧೯೪೬ರ ಬೆಳಗ್ಗೆ ಹನ್ನೊಂದು ಗಂಟೆಗೆ ಮುಂದೂಡಲಾಯಿತು.

*[ಹಿಂದೂಸ್ತಾನಿ ಭಾಷಣದ ಇಂಗ್ಲಿಷ್ ಅನುವಾದ]